ಸಂಪುಟ: 21, ಸಂಚಿಕೆ: 229, ಪುಟಗಳು: 8, ಮಂಗಳವಾರ, 28 ಮೇ 2024 RNI NO. KARKAN/2002/08054
epaper: www.sanjemugilu.com



ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ವೇಣು ಸಾರಥ್ಯದಲ್ಲಿ...
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ


ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of Newspapers | Tabloids | Magazines


### ಸುಭಾಷಿತ

ಪರರನ್ನು ಹೀನವಾಗಿ ಪರಿಗಣಿಸಬೇಡಿ. ಅದು ನಿಮ್ಮ ಮನಸ್ಸಿನ ಯೋಗ್ಯತೆಯನ್ನು ಕುಗ್ಗಿಸುತ್ತದೆ.

। ಇಂಗರ್ ಸಾಲ್

### ಪಂಚಾಂಗ

(ಮಂಗಳವಾರ 28, ಮೇ-2024)

- ಶ್ರೀ ಕ್ರೋಧಿ ನಾಮ ಸಂವತ್ಸರ,
- ಉತ್ತರಾಯಣ, ವಸಂತ ಋತು,
- ವೈಶಾಖ ಮಾಸ, ಕೃಷ್ಣ ಪಕ್ಷ,
- ವಾರ: ಮಂಗಳವಾರ, ತಿಥಿ : ಪಂಚಮಿ
- ನಕ್ಷತ್ರ: ಉತ್ತರಾಷಾಡ
- ರಾಹುಕಾಲ: 3.32 ರಿಂದ 5.08
- ಗುಳಿಕಕಾಲ: 12.20 ರಿಂದ 1.56
- ಯಮಗಂಡ ಕಾಲ: 7.32 ರಿಂದ 9.08

## ಸಂಕ್ಷಿಪ್ತ ಸುದ್ದಿ

## ಜೂ.4ರೊಳಗೆ ಬೆಂಗಳೂರಿನ ರಸ್ತೆಗಳು ಗುಂಡಿ ಮುಕ್ತ..!



**ಬೆಂಗಳೂರು:** ನಗರದಲ್ಲಿ ಮಳೆಯಿಂದಾಗಿ ಸೃಷ್ಟಿಯಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಜೂನ್ 4ರವರೆಗೆ ಗಡುವು ನೀಡಲಾಗಿದ್ದು, ಗುಂಡಿ ಮುಚ್ಚುವ ಸಂಬಂಧ ಮೇಲ್ವಿಚಾರಣೆಗಾಗಿ ವಲಯ ಆಯುಕ್ತರ ಅಧ್ಯಕ್ಷತೆಯಲ್ಲಿ ವಲಯಕ್ಕೊಂದರಂತೆ ಎಂಟು ಟಾಸ್ಕ್‌ಫೋರ್ಸ್ ರಚಿಸಲಾಗಿದೆ. ಸುದ್ದಿಗಾರರಿಗೆ ಈ ಮಾಹಿತಿ ನೀಡಿದ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಮಳೆಯಿಂದಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ 5,500ಕ್ಕೂ ಹೆಚ್ಚಿನ ಗುಂಡಿಗಳು ಸೃಷ್ಟಿಯಾಗಿದ್ದು ಈವರೆಗೆ 1,200 ಗುಂಡಿಗಳನ್ನು ಮುಚ್ಚಲಾಗಿದೆ. ಉಳಿದ 4,300ಕ್ಕೂ ಹೆಚ್ಚಿನ ಗುಂಡಿಗಳು ಮುಚ್ಚಬೇಕಿದೆ. ಪುಟ 2

## ಹಿಂದೂಗಳ ಮನೆಗೆ ನುಗ್ಗಿ ಅನ್ಯಕೋಮಿನ ಯುವಕರ ದಾಂಧಲೆ



**ಮಂಡ್ಯ:** ನಾಗಮಂಗಲ ತಾಲೂಕಿನ ಬೆಳ್ಳೂರು ಪಟ್ಟಣದಲ್ಲಿ ಹಿಂದೂಗಳ ಮನೆಗಳಿಗೆ ನುಗ್ಗಿ ಅನ್ಯಕೋಮಿನ ಯುವಕರು ದಾಂಧಲೆ ನಡೆಸಿದ ಆರೋಪ ಕೇಳಿ ಬಂದಿದೆ. ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರಾತ್ರಿಯೇ ಗ್ರಾಮಸ್ಥರು ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದ್ದು ಬೆಳ್ಳೂರು ಪೊಲೀಸ್ ಠಾಣೆ ಬಳಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಪುಟ 2

## ವೀಡಿಯೋ ಬಂದಿದ್ದು ಯಾವ ದೇಶದಿಂದ ಪ್ರಜ್ವಲ್ ವೀಡಿಯೋ ಬೆನ್ನತ್ತಿದ ಎಸ್ಐಟಿ



**ಬೆಂಗಳೂರು:** ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್ಐಟಿ ಮುಂದೆ ವಿಚಾರಣೆಗೆ ಮೇ 31 ರಂದು ಹಾಜರಾಗುವುದಾಗಿ ಹೇಳಿದ ಸಂಸದ ಪ್ರಜ್ವಲ್ ರೇವಣ್ಣ ವೀಡಿಯೋ ಬಂದಿದ್ದು ಯಾವ ದೇಶದಿಂದ ಎಂಬ ಬಗ್ಗೆ ಎಸ್ಐಟಿ ಪರಿಶೀಲನೆ ನಡೆಸುತ್ತಿದೆ.

ರಾಜ್ಯದ ಜನತೆಗೆ ಕ್ಷಮಾಪಣೆ ಕೇಳಿದ ಪ್ರಜ್ವಲ್ ರೇವಣ್ಣ, ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ವಿಚಾರಣೆಗೆ ಭಾರತಕ್ಕೆ ಬರುವುದಾಗಿ ತಿಳಿಸಿ ವೀಡಿಯೋ ಮಾಡಿ ಹಂಚಿಕೊಂಡಿದ್ದರು. ಈ ವೀಡಿಯೋ ಬಿಟ್ಟಿದ್ದು ಎಲ್ಲಿಂದ, ಯಾವ ದೇಶದಿಂದ ಎಂಬುದನ್ನು ಎಸ್ಐಟಿ ತನಿಖೆ ಮಾಡುತ್ತಿದೆ. ಆ ಮೂಲಕ ಪ್ರಜ್ವಲ್ ರೇವಣ್ಣ ಸಂಪರ್ಕಕ್ಕೆ ಎಸ್ಐಟಿಪ್ರಯತ್ನಿಸಿದೆ.

ಕಳೆದ ಬಾರಿ ಕೂಡ ಬರ್ತೀನಿ ಎಂದು ಹೇಳಿ ಪ್ರಜ್ವಲ್ ರೇವಣ್ಣ ಒಂದು ವಾರಗಳ ಕಾಲವಕಾಶ ಕೋರಿದ್ದರು. ಆದರೆ ಒಂದು ವಾರ ಕಳೆದರೂ ವಾಪಸ್ ಆಗದೇ ಗೈರಾದರು. ಹೀಗಾಗಿ ಈಗಲೇ ಪ್ರಜ್ವಲ್ ರೇವಣ್ಣ ಸಂಪರ್ಕಿಸಲು ಎಸ್ಐಟಿ ಪ್ರಯತ್ನಿಸುತ್ತಿದೆ.

ಪ್ರಜ್ವಲ್ ರೇವಣ್ಣ ವಾಪಸ್ ಆಗುತ್ತಿರುವುದರಿಂದ ಕೇಂದ್ರ ತನಿಖಾ ಸಂಸ್ಥೆಗಳಿಗೂ ಈ ಬಗ್ಗೆ ಮಾಹಿತಿ ನೀಡಲಾಗಿದೆ. ವಿದೇಶದಿಂದ ನೇರವಾಗಿ ಬೆಂಗಳೂರಿಗೆ ಬರ್ತಾರಾ ಅಥವಾ ಬೇರೆ ಯಾವ ಏರ್ಪೋರ್ಟ್‌ಗೆ ಬರಬಹುದು ಎಂದು ಎಸ್ಐಟಿ ಯೋಚಿಸಿದ್ದು, ಅಲರ್ಟ್ ಆಗಿದೆ.

ಎಲ್ಲೇ ಬಂದು ಇಳಿದರೂ ಸನ್ನದ್ಧರಾಗಿ ವಶಕ್ಕೆ ಪಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಬೇರೆ ಏರ್‌ಪೋರ್ಟ್‌ಗೆ ಬಂದಲ್ಲಿ ಕೂಡಲೇ ವಶಕ್ಕೆ ಪಡೆಯುವ ಬಗ್ಗೆ ಎಸ್ಐಟಿ ಅಧಿಕಾರಿಗಳು ಚರ್ಚೆ ಮಾಡಿದ್ದಾರೆ. ಈ ಸಂಬಂಧ ಸೋಮವಾರ ಎಸ್ಐಟಿ ಅಧಿಕಾರಿಗಳ ಸಭೆ ನಡೆದಿದೆ. ಪ್ರಜ್ವಲ್ ರೇವಣ್ಣ ವಾಪಸ್ ಆದ ನಂತರದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ.

## ಕಿಡ್ನ್ಯಾಪ್ ಕೇಸ್: ಭವಾನಿಗೂ ಬಂಧನದ ಭೀತಿ, ಕೋರ್ಟ್ ಮೊರೆ



**ಬೆಂಗಳೂರು:** ಕೆ.ಆರ್.ನಗರ ಮಹಿಳೆಯ ಅಪಹರಣ ಪ್ರಕರಣದಲ್ಲಿ ಈಗಾಗಲೇ ಜಾಮೀನನ ಮೇಲೆ ಶಾಸಕ ಎಚ್‌ಡಿ ರೇವಣ್ಣ ಅವರು ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಇದರ ಬೆನ್ನಲ್ಲೇ ಇದೀಗ ಪತ್ನಿ ಭವಾನಿ ರೇವಣ್ಣ ಅವರಿಗೂ ಬಂಧನ ಭೀತಿ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಭವಾನಿ ರೇವಣ್ಣ ಅವರು ಮುಂಜಾಗ್ರತಾವಾಗಿ ಜಾಮೀನು ಕೋರಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಹೌದು? ಕೆ ಆರ್ ನಗರ ಮಹಿಳೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿ ಭವಾನಿ ರೇವಣ್ಣ ಅವರು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ.

ರೇವಣ್ಣ ಮೇಲೆ ಕೇಳಿ ಬಂದಿರುವ ಅಪಹರಣ ಪ್ರಕರಣದಲ್ಲಿಕುಮ್ಮಕ್ಕು ಕೊಟ್ಟ ಆರೋಪ ಭವಾನಿ ರೇವಣ್ಣ ಮೇಲೆ ಇದೆ. ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಭವಾನಿ ರೇವಣ್ಣ ಅವರ ಸಂಬಂಧಿ ಸತೀಶ್ ಬಾಬು ಹೇಳಿಕೆ ದಾಖಲಿಸಿಕೊಂಡಿದ್ದ ಎಸ್ಐಟಿ, ಆತನ ಮೊಬೈಲ್ ವಶಕ್ಕೆ ಪಡೆದು ಕಾಲ್ ಡೀಟೆಲ್ಸ್ ಸಹ ಪರಿಶೀಲನೆ ಮಾಡಿತ್ತು. ಈ ವೇಳೆ ಭವಾನಿ ರೇವಣ್ಣ ಮತ್ತು ಸತೀಶ್ ಬಾಬು ಕರೆ ಬಗ್ಗೆ ಮಾಹಿತಿ ಸಿಕ್ಕಿತ್ತು. ಈ ಆಧಾರದ ಮೇಲೆ ಎಸ್ಐಟಿ ಭವಾನಿ ಅವರನ್ನು ವಿಚಾರಣೆ ನಡೆಸಲು ನೋಟಿಸ್ ಜಾರಿ ಮಾಡಿತ್ತು. ಪುಟ 2

## ವಿಧಾನ ಪರಿಷತ್ ಚುನಾವಣೆ: ಇಂದು ಸಿದ್ದು, ಡಿಕೆಶಿ ದಿಲ್ಲಿಗೆ

# ಹೈಕಮಾಂಡ್‌ನತ್ತ ಚಿತ್ತ

**ಬೆಂಗಳೂರು:** ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಹೆಸರು ಅಖೈರುಗೊಳಿಸಲು ಇಂದು ವಿಶೇಷ ವಿಮಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿದರು.

ಜೂ.13ರಂದು ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಸ್ಥಾನದ ಬಲದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷ 7 ಮಂದಿಯನ್ನು ಆಯ್ಕೆ ಮಾಡಲು ಅವಕಾಶವಿದೆ. ಈ ಏಳು ಸ್ಥಾನಗಳಿಗೆ ಆಕಾಂಕ್ಷಿಗಳ ಸಂಖ್ಯೆ ವಿಪರೀತವಾಗಿರುವುದರಿಂದ ಸಂಭಾವ್ಯರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳದೆ ಉಭಯ ನಾಯಕರು ವಿಮಾನ ಹತ್ತಿದ್ದಾರೆ.

ಮೂಲಗಳ ಪ್ರಕಾರ, ಆಕಾಂಕ್ಷಿಗಳ ಸಂಖ್ಯೆ ಶತಕವನ್ನು ದಾಟಿದೆ. ಹೀಗಾಗಿ ಯಾವ ಯಾವ ಸಮುದಾಯಕ್ಕೆ ಹುದ್ದೆ ನೀಡಬೇಕು ಎಂಬುದನ್ನು ಮಾತ್ರ ಸಿದ್ಧಪಡಿಸಿಕೊಂಡು ಉಭಯ ನಾಯಕರು ದೆಹಲಿಗೆ ತೆರಳಿದ್ದಾರೆ. ನೂರಕ್ಕೂ ಹೆಚ್ಚಿರುವ ಆಕಾಂಕ್ಷಿಗಳ ಸಂಖ್ಯೆಯನ್ನು ಜರಡಿ ಮಾಡಿ ಅಂತಿಮವಾಗಿ ಹೈಕಮಾಂಡ್ ಮುಂದೆ ಚರ್ಚೆ ಮಾಡುವ ವೇಳೆಗೆ 15 ರಿಂದ 20ರ ಪಟ್ಟಿ ಸಿದ್ಧಪಡಿಸಿಕೊಳ್ಳಲಿದ್ದಾರೆ ಎನ್ನಲಾಗುತ್ತಿದೆ. ಈ ಪಟ್ಟಿಯೊಂದಿಗೆ ಮಂಗಳವಾರ ಸಂಜೆ ಅಥವಾ ರಾತ್ರಿ ಹೈಕಮಾಂಡ್‌ನ ನಾಯಕರೊಂದಿಗೆ ಸಂಭವನೀಯರ ಆಯ್ಕೆ ಬಗ್ಗೆ ಉಭಯ ನಾಯಕರು ಚರ್ಚಿಸುವರು ಎಂದು ಮೂಲಗಳು ಹೇಳಿವೆ. ಪುಟ 2



### ಅಭ್ಯರ್ಥಿಗಳ ಒತ್ತಡ, ಬಿಜೆಪಿಗೆ ತಲೆನೋವು..!

ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಗೆ ಅಧಿಸೂಚನೆ ಹೊರಬಿದ್ದ ಬೆನ್ನಲ್ಲೇ ಪ್ರಮುಖ ಪ್ರತಿಪಕ್ಷ ಬಿಜೆಪಿಯಲ್ಲಿ ಆಕಾಂಕ್ಷಿಗಳ ಒತ್ತಡ ತೀವ್ರವಾಗಿದ್ದು, ರಾಜ್ಯ ನಾಯಕರಿಗೆ ತಲೆನೋವಾಗಿ ಪರಿಣಮಿಸಿದೆ. ಈ ಬಗ್ಗೆ ರಾಜ್ಯ ನಾಯಕರು ಬಿಜೆಪಿ ಹೈಕಮಾಂಡ್‌ಗೆ ಮಾಹಿತಿ ನೀಡಿದ್ದು, ನೀವು ಶಿಫಾರಸು ಪಟ್ಟಿಯನ್ನು ಕಳುಹಿಸಿದ್ದೀರಿ. ಮುಂದಿನದನ್ನು ನಾವು ನೋಡಿಕೊಳ್ಳುತ್ತೇವೆ ಎಂಬ ಅಭಯ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ವಿಧಾನಸಭೆಯ ಸಂಖ್ಯಾಬಲದ ಆಧಾರದ ಮೇಲೆ ಬಿಜೆಪಿಗೆ ಮೂರು ಸ್ಥಾನಗಳು ಲಭ್ಯವಾಗುತ್ತವೆ. ಕಳೆದ ವಾರ ನಡೆದ ಬಿಜೆಪಿ ರಾಜ್ಯ ಘಟಕದ ಹಿರಿಯ ನಾಯಕರನ್ನು ಒಳಗೊಂಡ ಕೋರ್ ಕಮಿಟಿ ಸಭೆಯಲ್ಲಿ ಸುಮಾರು 44ಕ್ಕೂ ಹೆಚ್ಚು ಆಕಾಂಕ್ಷಿಗಳ ಬಗ್ಗೆ ಚರ್ಚೆ ನಡೆದಿತ್ತು. ಅಂತಿಮವಾಗಿ ಪಟ್ಟಿ ಸಿದ್ಧಪಡಿಸಿ ಹೈಕಮಾಂಡ್ ಗೆ ಕಳುಹಿಸುವ ಜವಾಬ್ದಾರಿಯನ್ನು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿದ್ದ ಜಿ.ವಿ.ರಾಜೇಶ್ ಅವರಿಗೆ ನೀಡಲಾಗಿತ್ತು.

ಆ ಪ್ರಕಾರ ಉಭಯ ನಾಯಕರು ಮೂರು ಸ್ಥಾನಗಳಿಗೆ ಸುಮಾರು 15ಕ್ಕೂ ಹೆಚ್ಚು ಹೆಸರುಗಳನ್ನು ಅಂತಿಮಗೊಳಿಸಿ ಪಟ್ಟಿಯನ್ನು ಹೈಕಮಾಂಡ್‌ಗೆ ರವಾನಿಸಿದ್ದರು. ಆದರೆ, ಪಟ್ಟಿ ಕಳುಹಿಸಿದ ಬಳಿಕವೂ ರಾಜ್ಯ ನಾಯಕರಿಗೆ ಆಕಾಂಕ್ಷಿಗಳ ಒತ್ತಡ ಕಡಮೆಯಾಗಿಲ್ಲ. ಮತ್ತಷ್ಟು ಹೆಚ್ಚಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತವರು, ಪುಟ 2

### ರಾಜ್‌ಕೋಟ್‌ನ ಗೇಮಿಂಗ್ ಝೋನ್ ಅಗ್ನಿ ಅವಘಡ ಪ್ರಕರಣ

## ಪ್ರಮುಖ ಆರೋಪಿ ಅರೆಸ್ಟ್



**ಗಾಂಧಿನಗರ:** ಗುಜರಾತ್‌ನ ರಾಜ್‌ಕೋಟ್‌ನ ಟಿಆರ್‌ಪಿ ಗೇಮಿಂಗ್ ಝೋನ್‌ನಲ್ಲಿ 27 ಮಂದಿಯ ಸಾವಿಗೆ ಕಾರಣವಾದ ಅಗ್ನಿ ಅವಘಡ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಧವಲ್ ಠಕ್ಕರ್ ರಾಜಸ್ಥಾನದ ಅಬು ರಸ್ತೆಯಲ್ಲಿ ಬಂಧಿಸಲಾಗಿದೆ. ಈತ ರಾಜಸ್ಥಾನದ ಸಂಬಂಧಿಕರ ಮನೆಯಲ್ಲಿ ತಲೆಮರೆಸಿಕೊಂಡಿದ್ದಾನೆ ಎಂಬ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಮಾಹಿತಿಯ ಆಧಾರದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ. ಗೇಮಿಂಗ್ ಝೋನ್‌ನ ಆರು ಪಾಲುದಾರರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ.

ಈ ವಲಯವನ್ನು ನಿರ್ವಹಿಸುತ್ತಿದ್ದ ರೇಸ್‌ವೇ ಎಂಟರ್‌ಪ್ರೈಸಸ್ ಇಬ್ಬರು ಪಾಲುದಾರರಾದ ಯುವರಾಜ್ ಸಿಂಹ ಸೋಲಂಕಿ ಮತ್ತು ರಾಹುಲ್ ರಾಥೋಡ್ ಮತ್ತು ವ್ಯವಸ್ಥಾಪಕ ನಿತಿನ್ ಜೈನ್‌ನನ್ನು ಇಂದು ಮುಂಜಾನೆ (ಮೇ 28) ಬಂಧಿಸಲಾಗಿದೆ. ಬಂಧಿತ ಮೂವರನ್ನು 14 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ. ಈ ವೇಳೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ತುಷಾರ್ ಗೋಕನಿ ಆರೋಪಿಗಳ ಬಳಿ ಗೇಮಿಂಗ್ ಝೋನ್‌ನ ದಾಖಲೆಗಳನ್ನು ಕೇಳಿದಾಗ ಬೆಂಕಿಯಲ್ಲಿ ಸುಟ್ಟುಹೋಗಿವೆ ಎಂದಿದ್ದಾರೆ. ಪುಟ 2

## ವಿಮಾನಕ್ಕೆ ಬಾಂಬ್ ಬೆದರಿಕೆ




**ನವದೆಹಲಿ:** ವಾರಣಾಸಿಗೆ ತೆರಳುತ್ತಿದ್ದ ಇಂಡಿಗೋ ವಿಮಾನಕ್ಕೆ ದೆಹಲಿ ವಿಮಾನ ನಿಲ್ದಾಣದಲ್ಲಿ ಬಾಂಬ್ ಬೆದರಿಕೆ ಬಂದಿದ್ದು, ಅಧಿಕಾರಿಗಳು ವಿಮಾನವನ್ನು ತಪಾಸಣೆಗೆ ಒಳಪಡಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

6E2211 ವಿಮಾನವು ದೆಹಲಿಯ ಇಂದಿರಾಗಾಂಧಿ ವಿಮಾನ ನಿಲ್ದಾಣದಿಂದ ಬೆಳಗ್ಗೆ 5 ಗಂಟೆ ಸುಮಾರಿಗೆ ಟೇಕ್ ಆಫ್ ಆಗಬೇಕಿತ್ತು. ತಕ್ಷಣವೇ ಕ್ಷಿಪ್ರ ಪ್ರತಿಕ್ರಿಯೆ ತಂಡವನ್ನು ನಿಯೋಜಿಸಲಾಗಿದ್ದು, ಇದುವರೆಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ.

ಎಲ್ಲ ಪ್ರಯಾಣಿಕರನ್ನು ತುರ್ತು ದ್ವಾರದ ಮೂಲಕ ಇಳಿಸಲಾಗಿದ್ದು, ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ವಿಮಾನದಲ್ಲಿದ್ದ ಪ್ರಯಾಣಿಕರ ಸಂಖ್ಯೆಯ ಬಗ್ಗೆ ಸ್ಪಷ್ಟತೆ ಇಲ್ಲ.

ಕೆಲವರು ಪ್ರಯಾಣಿಕರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ, ವಾರಣಾಸಿಯಿಂದ ದೆಹಲಿ ವಿಮಾನ ವಿಳಂಬವಾಗಿದೆ ಎಂದು ದೂರಿದ್ದರು.

ಪ್ರಯಾಣಿಕರೊಬ್ಬರಿಗೆ ಉತ್ತರಿಸಿದ ಏರ್‌ಲೈನ್, ಈ ಅನುಭವಕ್ಕಾಗಿ ನಾವು ಕ್ಷಮೆಯಾಚಿಸುತ್ತೇವೆ. ನಮ್ಮ ಪ್ರಯಾಣಿಕರ ಪ್ರಯಾಣದ ಯೋಜನೆಗಳಿಗೆ ಅಡ್ಡಿಪಡಿಸುವ ಉದ್ದೇಶ ಎಂದಿಗೂ ನಮ್ಮದಲ್ಲ ಎಂದು ನಿಮಗೆ ಭರವಸೆ ನೀಡುತ್ತೇವೆ ಎಂದು ತಿಳಿಸಿದೆ.

### ಪತಿಯಿಂದಲೇ ಪತ್ನಿಯ ಭೀಕರ ಕೊಲೆ

## ಅಂಗಾಂಗ ಕತ್ತರಿಸಿ ವಿಕೃತಿ

**ತುಮಕೂರು:** ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನೇ ಭೀಕರವಾಗಿ ಕೊಲೆ ಮಾಡಿದ ಹೇಯ ಕೃತ್ಯ ತುಮಕೂರಿನ ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಪಟ್ಟಣದ ಹೊಸಪೇಟೆಯಲ್ಲಿ ನಡೆದಿದೆ.

ಶಿವಮೊಗ್ಗ ಜಿಲ್ಲೆಯ ಸಾಗರ ಮೂಲದ ಪುಷ್ಪ (32), ಮೃತ ದುರ್ದೈವಿ. ಹುಲಿಯೂರುದುರ್ಗ ಬಳಿಯ ಸುಗ್ಗನಹಳ್ಳಿ ನಿವಾಸಿಯಾಗಿದ್ದ ಶಿವರಾಮ್ ಎಂಬಾತನೇ ಕೃತ್ಯ ಎಸಗಿದ್ದಾನೆ. ಆರೋಪಿಯು ಪತ್ನಿಯ ಕತ್ತು ಹಾಗೂ ದೇಹದ ಇತರ ಅಂಗಾಂಗಗಳನ್ನು ಕತ್ತರಿಸಿ ವಿಕೃತಿ ಮೆರೆದಿದ್ದಾನೆ.

ಆರೋಪಿ ಶಿವರಾಮ್ ಶಿವಮೊಗ್ಗ ಜಿಲ್ಲೆಯ ಸಾಗರ ಮೂಲದ ಪುಷ್ಪ ಎಂಬವರನ್ನು ಮದುವೆಯಾಗಿದ್ದ. ಪುಟ 2



### ಪೋರ್ಶೆ ಕಾರು ಅಪಘಾತ ಕೇಸ್; ಅಪ್ರಾಪ್ತನ ರಕ್ತದ ಮಾದರಿ ವರದಿ ಬದಲಾಯಿಸಲು

## ವೈದ್ಯರಿಗೆ 3 ಲಕ್ಷ ಲಂಚ



**ಮುಂಬೈ:** ಪುಣೆಯಲ್ಲಿ ಅಪ್ರಾಪ್ತ ಚಲಾಯಿಸುತ್ತಿದ್ದ ಪೋರ್ಶೆ ಕಾರು ಡಿಕ್ಕಿ ಹೊಡೆದು ಇಬ್ಬರು ಟೆಕ್ಕಿಗಳು ಸಾವನ್ನಪ್ಪಿದ ಪ್ರಕರಣಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ. ಕಾರು ಅಪಘಾತ ಮಾಡಿದ ಅಪ್ರಾಪ್ತನ ರಕ್ತದ ಮಾದರಿ ವರದಿ ಬದಲಾಯಿಸಲು ಆತನ ಕುಟುಂಬಸ್ಥರು 3 ಲಕ್ಷ ರೂ. ಲಂಚ ಕೊಟ್ಟಿದ್ದ ಪ್ರಕರಣ ಬೆಳಕಿಗೆ ಬಂದಿದೆ.

ಪುಣೆ ಪೋರ್ಶೆ ಅಪಘಾತ ಪ್ರಕರಣದಲ್ಲಿ 17 ವಯಸ್ಸಿನ ಆರೋಪಿಯ ರಕ್ತ ಪರೀಕ್ಷೆಯ ವರದಿಯನ್ನು ದುರ್ಬಳಕೆ ಮಾಡಿಕೊಂಡ ಆರೋಪದಲ್ಲಿ ಇಬ್ಬರು ವೈದ್ಯರೊಂದಿಗೆ ನಿನ್ನೆ ಪ್ಯೂನ್ ಬಂಧಿತನಾಗಿದ್ದ. ಈತ ವೈದ್ಯರಿಗೆ 3 ಲಕ್ಷ ರೂ. ಲಂಚ ನೀಡಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಅತುಲ್ ಘಟಕಾಂಬಳೆ ಎಂಬ ಪ್ಯೂನ್ ಮಧ್ಯವರ್ತಿಯಾಗಿ, ಅಪ್ರಾಪ್ತನ ಕುಟುಂಬದಿಂದ ಇಬ್ಬರು ವೈದ್ಯರಿಗೆ 3 ಲಕ್ಷ ರೂ. ಲಂಚವನ್ನು ಸಂಗ್ರಹಿಸಿದ್ದ. ಸಸೂನ್ ಆಸ್ಪತ್ರೆಯ ಡಾ. ಅಜಯ್ ತವಾಡೆ ಮತ್ತು ಡಾ. ಹರಿ ಹಾರ್ನರ್ ಅವರನ್ನು ಪುಣೆ ಕ್ರೈಂ ಬ್ರಾಂಚ್ ನಿನ್ನೆ ಬಂಧಿಸಿದೆ.

ತನಿಖೆಯಿಂದ ಡಾ. ತವಡೆ ಮತ್ತು ಹದಿಹರೆಯದ ಆರೋಪಿಯ ತಂದೆ ಅಪಘಾತದ ದಿನ ಫೋನ್‌ನಲ್ಲಿ ಮಾತನಾಡಿದ್ದಾರೆ ಎಂದು ತಿಳಿದುಬಂದಿದೆ. ಬಾಲಾಪರಾಧಿಯ ತಂದೆ ವೈದ್ಯರಿಗೆ ಕರೆ ಮಾಡಿ ರಕ್ತದ ಮಾದರಿ ವರದಿಗಳನ್ನು ಬದಲಿಸಲು ಆಮಿಷ ಒಡ್ಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಪುಟ 2

### ಮೇಲ್ಮನೆ ಚುನಾವಣೆಗೆ ಅಧಿಸೂಚನೆ ಪ್ರಕಟ

## ನಾಮಪತ್ರ ಸಲ್ಲಿಕೆ ಆರಂಭ



**ಬೆಂಗಳೂರು:** ವಿಧಾನಸಭೆಯಿಂದ ವಿಧಾನಪರಿಷತ್‌ನ 11 ಸ್ಥಾನಗಳಿಗೆ ಘೋಷಣೆಯಾಗಿರುವ ದ್ವೈವಾರ್ಷಿಕ ಚುನಾವಣೆಗೆ ಚುನಾವಣಾ ಆಯೋಗವು ಸೋಮವಾರ ಅಧಿಸೂಚನೆ ಪ್ರಕಟಿಸಿದೆ. 11 ಮಂದಿಯ ಅವಧಿಯು ಮುಂದಿನ ತಿಂಗಳು 17ರಂದು ಮುಕ್ತಾಯಗೊಳ್ಳುವ ಹಿನ್ನಲೆಯಲ್ಲಿ ಚುನಾವಣೆ ಘೋಷಣೆಯಾಗಿದೆ. ನಿನ್ನೆ ಅಧಿಸೂಚನೆ ಪ್ರಕಟವಾಗಿದ್ದು, ಮೊದಲ ದಿನ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ.

ವಿಧಾನಸಭೆಯ ಸಂಖ್ಯಾಬಲದ ಆಧಾರದ ಮೇಲೆ ಆಡಳಿತಾರೂಢ ಕಾಂಗ್ರೆಸ್‌ಗೆ ಏಳು ಸ್ಥಾನ, ಪ್ರತಿಪಕ್ಷಗಳಾದ ಬಿಜೆಪಿಗೆ ಮೂರು ಮತ್ತು ಜೆಡಿಎಸ್‌ಗೆ ಒಂದು ಸ್ಥಾನ ಲಭಿಸಲಿವೆ. ಇದುವರೆಗೆ ಯಾವುದೇ ಪಕ್ಷವೂ ತನ್ನ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಲ್ಲ. ಲೋಕಸಭಾ ಚುನಾವಣೆ ಕೊನೆಯ ಹಂತದಲ್ಲಿರುವುದರಿಂದ ಮತ್ತು ಆಕಾಂಕ್ಷಿಗಳ ಸಂಖ್ಯೆ ತೀವ್ರವಾಗಿರುವುದರಿಂದ ಆಯ್ಕೆ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಜೂ.3ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಜೂ.4ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಜೂ.6ರಂದು ನಾಮಪತ್ರಗಳನ್ನು ಹಿಂಪಡೆಯಲು ಕಡೆಯ ದಿನವಾಗಿದ್ದು, ಜೂ.13ರಂದು ಮತದಾನ ನಡೆಯಲಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ಜರುಗಲಿದ್ದು, ಅದೇ ದಿನ ಸಂಜೆ 5 ಗಂಟೆಗೆ ಮತ ಎಣಿಕೆ ನಡೆಯಲಿದೆ. ಪುಟ 2

## ಬೇಸಿಗೆ ರಜೆಯ ನಂತರ ಅಂಗನವಾಡಿಯತ್ತ ತೆರಳಿದ ಚಿಣ್ಣರು- ಸಿಹಿ ತಿನ್ನಿಸಿ ಆತ್ಮೀಯ ಸ್ವಾಗತ ಕೋರಿದ ಸಿಇಒ

ಮಂಡ್ಯ: ಜಿಲ್ಲಾಡಳಿತ. ಜಿಲ್ಲಾಪಂಚಾಯಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಂಗನವಾಡಿ ಕೇಂದ್ರಗಳು ಪುನರಾರಂಭವಾಗಿದ್ದು, ಇಂದಿನಿಂದ ಪುಟ್ಟ ಪುಟ್ಟ ಮಕ್ಕಳು ಅಂಗನವಾಡಿ ಕೇಂದ್ರಗಳತ್ತ ತೆರಳಿದರು. ಇದೇ ಸಂದರ್ಭದಲ್ಲಿ ಮಂಡ್ಯ ತಾಲ್ಲೂಕಿನ ಎಂ,ಜಿ. ಬಡಾವಣೆಯ ಅಂಗನವಾಡಿ ಕೇಂದ್ರದಲ್ಲಿ ಅಧಿಕಾರಿಗಳು ಮಕ್ಕಳಿಗೆ ಸಿಹಿಯನ್ನು ನೀಡಿ, ಆತ್ಮೀಯವಾಗಿ ಬರಮಾಡಿಕೊಂಡರು. ಮಂಡ್ಯ ನಗರದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಖ್ ತನ್ವೀರ್ ಅಸೀಫ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಎಸ್. ರಾಜಮೂರ್ತಿ ರವರ ನೇತೃತ್ವದಲ್ಲಿ ಕೇಕ್ ಕತ್ತರಿಸಿ ಮಕ್ಕಳಿಗೆ ತಿನ್ನಿಸಿ ಶುಭಹಾರೈಸಿದರು. ಅಂಗನವಾಡಿಗೆ ಬಂದ ಮಕ್ಕಳಿಗೆ ಗುಲಾಬಿ ಹೂವುಗಳನ್ನು ನೀಡಿ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಕಲಿಕಾಕೇಂದ್ರ ಹಾಗೂ ತರಗತಿ ಕೊಠಡಿಗೆ ಚಾಲನೆ ನೀಡಿ. ಮಕ್ಕಳಿಗೆ ಗುಣಮಟ್ಟ ಶಿಕ್ಷಣವನ್ನು ನೀಡಲು ಅಂಗನವಾಡಿ ಶಿಕ್ಷಕಿಯರಿಗೆ ಸೂಕ್ತ ತರಬೇತಿಯನ್ನು ನೀಡುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸಿಇಓ ಅವರು ನಿರ್ದೇಶನ ನೀಡಿದರು.
ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶೇಖ್ ತನ್ವೀರ್ ಅಸೀಫ್ ಮಾತನಾಡಿ ಬೇಸಿಗೆ ರಜಾ ನಂತರ ಮಕ್ಕಳು ಮತ್ತೆ ಮರಳಿ ಅಂಗನವಾಡಿ ಕೇಂದ್ರಗಳತ್ತ ಬಂದಿದ್ದಾರೆ. ಜಿಲ್ಲೆಯಲ್ಲಿರುವ 588 ಅಂಗನವಾಡಿ ಕೇಂದ್ರಗಳನ್ನು ಸ್ವಚ್ಛಗೊಳಿಸಿ ಸಿದ್ದಗೊಳಿಸಲಾಗಿದೆ ಮಕ್ಕಳಿಗೆ ಕುದಿಸಿ ಆರಿಸಿದ ನೀರನ್ನು ಒದಗಿಸುವಂತೆ ಸೂಚನೆ ನೀಡಲಾಗಿದೆ. ಪೋಷಕರು ತಮ್ಮ ಮಕ್ಕಳನ್ನು ಹತ್ತಿರದ ಅಂಗನವಾಡಿ ಕೇಂದ್ರಗಳಿಗೆ ಕಳುಹಿಸಿ ಪೌಷ್ಠಿಕಾಂಶ ಆಹಾರದ ಜೊತೆಗೆ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ಆರ್.ಕುಮಾರಸ್ವಾಮಿ ನೇತೃತ್ವದಲ್ಲಿ ಮಂಡ್ಯ ತಾಲ್ಲೋಕಿನ ಹೊಸ ಬೂದನೂರು. ಮಂಡ್ಯ ನಗರದಲ್ಲಿರುವ ಶಂಕರಮಠ . ಎಸ್.ಡಿ.ಜಯರಾಂ ಬಡಾವಣೆಯಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಮಕ್ಕಳಿಗೆ ಹೂ. ಸಿಹಿ ವಿತರಿಸಿ ಆತ್ಮೀಯವಾಗಿ ಶಾಲೆಗೆ ಬರಮಾಡಿಕೊಂಡರು.

## ಯುವತಿಯ ಪತ್ತೆಗೆ ಸಹಕರಿಲು ಮನವಿ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಕಲ್ಲಕುಂಟೆ ಗ್ರಾಮದ ನಿವಾಸಿ ತೇಜಸ್ವಿನಿ ಎಂಬ ಯುವತಿಯು ಎರಡನೇ ವರ್ಷದ ಬಿ.ಎ ವ್ಯಾಸಂಗ ಮಾಡುತ್ತಿದ್ದು. ಎಂದಿನಂತೆ ಮೇ 20 ರಂದು ಕಾಲೇಜಿಗೆ ಹೋದವರು ಕಾಣೆಯಾಗಿರುವ ಬಗ್ಗೆ ದೂರು ದಾಖಲಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಮನವಿ ಮಾಡಲಾಗಿದೆ. ತೇಜಸ್ವಿನಿ, ವಯಸ್ಸು 20, ಬಣ್ಣ ಗೋದಿ ಮೈ ಬಣ್ಣ, ಸಾದರಣ ಮೈ ಕಟ್ಟು, ಕೋಲು ಮುಖ, 5 ಅಡಿ ಎತ್ತರವಿದ್ದು, ಕೆಂಪು ಬಣ್ಣದ ಟಾಪ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ಕನ್ನಡ ಮತ್ತು ತೆಲುಗು ಮಾತನಾಡುತ್ತಾಳೆ. ನಾಪತ್ತೆಯಾಗಿರು ಬಗ್ಗೆ ಅವರ ತಂದೆ ಗಂಗಧರಪ್ಪ ಎಂಬುವರು ಚಿಕ್ಕಬಳ್ಳಾಪುರ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ತೇಜಸ್ವಿನಿ ಅವರನ್ನು ಪತ್ತೆಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ. ಈ ಯುವತಿಯ ಬಗ್ಗೆ ಮಾಹಿತಿ ಸಿಕ್ಕರೆ ಹತ್ತಿರದ ಹಾಗೂ ಚಿಕ್ಕಬಳ್ಳಾಪುರ ನಗರದ ಮಹಿಳಾ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಮಹಿಳಾ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

## ಅಂಗೀಕರಿಸಲು ತುರ್ತು ಅರ್ಜಿ ಸಲ್ಲಿಸಿ

**ಬೆಂಗಳೂರು ಗ್ರಾಮಾಂತರ:** ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಾವಣೆಯಾದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ವಕ್ಫ್ ಸಂಸ್ಥೆಗಳು ಕರ್ನಾಟಕ ಉಚ್ಚನ್ಯಾಯಾಲಯದ ಆದೇಶದಂತೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಮಾದರಿ ನಿಯಮಾವಳಿಯ ನಮೂನೆ ನಂ.-42(ಬೈಲಾ) ನ್ನು ಅಂಗೀಕರಿಸಿಕೊಳ್ಳುವುದು ಕಡ್ಡಾಯವಾಗಿದೆ. ಈ ವರೆಗೂ ಮಾದರಿ ನಿಯಮಾವಳಿಯನ್ನು ಕರ್ನಾಟಕ ರಾಜ್ಯ ವಕ್ಸ್ ಮಂಡಳಿಯಿಂದ ಅಂಗೀಕರಿಸಿಕೊಳ್ಳದ ವಕ್ಫ್ ಸಂಸ್ಥೆಗಳು ಕೂಡಲೆ ಮಾದರಿ ನಿಯಮಾವಳಿಯ ನಮೂನೆ ನಂ. 42(ಬೈಲಾ)ನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಜಿಲ್ಲಾ ವಕ್ಫ್ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಅಂಗೀಕಾರಕ್ಕಾಗಿ ಅತೀ ಜರೂರಾಗಿ ಸಲ್ಲಿಸಬೇಕು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ವಕ್ಫ್ ಅಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ

**ಮೈಸೂರು:** ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ 2024-25ನೇ ಸಾಲಿನ ಡಿಪ್ಲೊಮೋ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಪ್ರಿಶಿಷನ್ ಮ್ಯಾನುಫ್ಯಾಕ್ಚರಿಂಗ್, ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಕೋರ್ಸ್ ಗಳಿಗೆ ಅರ್ಜಿಯನ್ನು ಅಹ್ವಾನಿಸಲಾಗಿದೆ. ಪ್ರವೇಶಾತಿಯನ್ನು ಆನ್ಲೈನ್ ಮೂಲಕ ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ'' ಮೂಲಕ ನಡೆಸಲಾಗುತ್ತಿದ್ದು, ಆನ್ಲೈನ್ ಮೂಲಕ ಅರ್ಜಿಯನ್ನು ಜೂ.03 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂ: 155267 ವೆಬ್ಸೈಟ್: : https://gttc.karnataka.gov.in ಮತ್ತು http://cetonline.karnataka.gov.in ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುನಿಕೃಷ್ಣ ನಾಪತ್ತೆ



**ದೇವನಹಳ್ಳಿ:** ಚನ್ನರಾಯಪಟ್ಟಣದ ಮುನಿಕೃಷ್ಣ ಮೇ 24ರಿಂದ ಕಾಣೆಯಾಗಿದ್ದಾರೆ. ಈ ವ್ಯಕ್ತಿಯನ್ನು ಎಲ್ಲಾದರೂ ಕಂಡರೆ 9900734202. 9482388226 ಈ ನಂಬರ್ ಸಂಪರ್ಕಿಸಬಹುದು.

### ತಾಲೂಕಿನಾದ್ಯಂತ ಭರ್ಜರಿ ಮಳೆ | ಹೆಗ್ಗಡಹಳ್ಳಿ ಗ್ರಾಮವೊಂದರಲ್ಲೇ ಸುಮಾರು ಐದು ಮನೆ ನೆಲಸಮ

# ಮಳೆಗೆ ಕುಸಿದ ಮನೆಗಳು: ಮಲ್ಲಿಕಾರ್ಜುನ್ ನೆರವಿನ ಹಸ್ತ

**ಕೆ.ಆರ್.ಪೇಟೆ:** ತಾಲ್ಲೂಕಿನಾದ್ಯಂತ ಸುರಿಯುತ್ತಿರುವ ಮಳೆಯು ಹಲವು ಮನೆಗಳನ್ನು ಬಲಿ ತೆಗೆದುಕೊಂಡಿದ್ದು ಅಂಥಹ ಸಂತ್ರಸ್ಥರ ನೆರವಿಗೆ ಸಮಾಜಸೇವಕ ಹಾಗೂ ಆರ್.ಟಿ.ಓ ಅಧಿಕಾರಿ ಮಲ್ಲಿಕಾರ್ಜುನ್ ನೆರವಿನ ಹಸ್ತ ಚಾಚಿದ್ದಾರೆ. ಕಸಬಾ ಹೋಬಳಿಯ ಹೆಗ್ಗಡಹಳ್ಳಿ ಗ್ರಾಮವೊಂದರಲ್ಲೇ ಸುಮಾರು ಐದು ಮನೆಗಳು ಬಿದ್ದು ಹೋಗಿದ್ದು ಗ್ರಾಮೀಣ ಪ್ರದೇಶದ ಜನರ ಬದುಕಿಗೆ ಕೊಳ್ಳಿಇಟ್ಟಂತಾಗಿದೆ. ಗ್ರಾಮದ ನೇತ್ರಾವತಿಆನಂದ್, ಚಂದ್ರುರೇಖಾ, ಪುಟ್ಟಲಕ್ಷ್ಮಿರಂಗನಾಥ್, ರಾಣಿ ಲೇಟ್ ಮಹೇಶ್, ಜಯಮ್ಮಮಂಜೇಗೌಡ ಸೇರಿದಂತೆ ಹಲವು ಕುಡುಂಬಗಳು ಕೃಷಿ ಹಾಗೂ ಹೈನುಗಾರಿಕೆ ಮತ್ತು ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಕುಟುಂಬಗಳು ಮಳೆಯ ಅನಾಹುತದಿಂದಾಗಿ ತಾವು ವಾಸಿಸುತ್ತಿದ್ದ ಮನೆಗಳು, ಮತ್ತು ದನಕರುಗಳನ್ನು ಕಟ್ಟುಹಾಕಲು ಬಳಸುತ್ತಿದ್ದ ಕೊಟ್ಟಿಗೆಗಳನ್ನು ಆಪೋಷನ ತೆಗೆದುಕೊಂಡಿದೆ. ಇದರಿಂದಾಗಿ ರೈತರಿಗೆ ತೀವ್ರವಾದ ಸಮಸ್ಯೆಗಳಾಗಿದ್ದು ಇಷ್ಟುದಿನ ಬರಗಾಲದೊಂದಿಗೆ ಸಂಕಷ್ಟದ ಜೀವನ ಸಾಗಿಸುತ್ತಿದ್ದ ಕುಟುಂಬಗಳ ಪಾಲಿಗೆ ಬರಸಿಡಿಲು ಬಡಿದಂತಾಗಿದೆ. ತಾಲ್ಲೂಕು ಆಡಳಿತ ಕೂಡಲೇ ಗ್ರಾಮಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ನಮಗೆ ಸರ್ಕಾರದ ವತಿಯಿಂದ ಪರಿಹಾರ ಒದಗಿಸಬೇಕು ಎಂದು ಮನೆ ಕಳೆದುಕೊಂಡ ಎಲ್ಲಾ ರೈತರು ತಾಲ್ಲೂಕು ಆಡಳಿತವನ್ನು ಒತ್ತಾಯಿಸಿದ್ದಾರೆ. ಟನೆಯ ಬಗ್ಗೆ ಮಾಹಿತಿ ಮಾಹಿತಿ ಪಡೆದ ಸಮಾಜಸೇವಕ ಹಾಗೂ ಆರ್.ಟಿಓ ಅಧಿಕಾರಿ ಮಲ್ಲಿಕಾರ್ಜುನ್ ಗ್ರಾಮಕ್ಕೆ ಭೇಟಿನೀಡಿ ಮನೆ ಕಳೆದುಕೊಂಡ ರೈತ ಕುಟುಂಬಗಳಿಗೆ ಧೈರ್ಯ ತುಂಬುವ ಮೂಲಕ ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದ್ದಾರೆ.



ತಾಲ್ಲೂಕಿನ ಕಸಬಾ ಹೋಬಳಿಯ ಹೆಗ್ಗಡಹಳ್ಳಿ ಗ್ರಾಮದಲ್ಲಿ ಮಳೆಯಿಂದಾಗಿ ಸುಮಾರು ಐದು ಮನೆಗಳು ಬಿದ್ದು ಹೋಗಿದ್ದು ಸಮಾಜಸೇವಕ ಹಾಗೂ ಆರ್ .ಟಿ.ಓ ಅಧಿಕಾರಿ ಮಲ್ಲಿಕಾರ್ಜುನ್ ನೆರವಿನ ಹಸ್ತ ಚಾಚಿದ್ದಾರೆ.

> “ಗ್ರಾಮದಲ್ಲಿ 5-6 ಮನೆಗಳು ಮನೆಯಿಂದಾಗಿ ಹಾನಿಗೊಳಗಾಗಿದ್ದು ಸಂಕಷ್ಟದಲ್ಲಿರುವ ರೈತರಿಗೆ ಸಹಾಐ ಮಾಡಬೇಕೆಂದು ಮನವಿ ಮಾಡಿದ ಹಿನ್ನೆಲೆಯಲ್ಲಿ ಸಮಾಜಸೇವಕ ಮಲ್ಲಿಕಾರ್ಜುನ್ ಗ್ರಾಮಕ್ಕೆ ಆಗಮಿಸಿ ಬಡರೈತ ಕುಟುಂಬಗಳಿಗೆ ಧೈರ್ಯ ತುಂಬುವ ಮೂಲಕ ಆರ್ಥಿಕ ಸಹಾಯ ಮಡಿದ್ದಾರೆ.
>
> | ರಾಜೇಶ್ ಹೆಗ್ಗಡಹಳ್ಳಿ ಗ್ರಾಪಂ ಮಾಜಿ ಸದಸ್ಯ. ಕೆ.ಆರ್.ಪೇಟೆ ತಾಲೂಕು

## ಕುಟುಂಬಕ್ಕೆ ನೆರವು ಒದಗಿಸಬೇಕೆಂದು ಮನವಿ

**ಕೆ.ಆರ್.ಪೇಟೆ:** ಕಳೆದ ಒಂದು ವಾರಗಳಿಂದ ಸುರಿಯುತ್ತಿರುವ ಮಳೆಗೆ ಪಟ್ಟಣದ ಅಂಬೇಡ್ಕರ್ ನಗರದ ನಿವಾಸಿ ಕೆಂಪಮ್ಮ ಕೋಂ ಬೊಮ್ಮಯ್ಯ ಎಂಬುವವರ ವಾಸದಮನೆ ಬಿದ್ದುಹೋಗಿದ್ದು ತಾಲ್ಲೂಕು ಆಡಳಿತ ಕೂಡಲೇ ಪರಿಶೀಲನೆ ನಡೆಸಿ ಬೀದಿಪಾಲಾಗಿರುವ ಆ ಕುಟುಂಬಕ್ಕೆ ನೆರವು ಒದಗಿಸಬೇಕೆಂದು ಪುರಸಭಾ ಸದಸ್ಯ ಕೆ.ಆರ್.ರವೀಂದ್ರಬಾಬು ತಾಲ್ಲೂಕು ಆಡಳಿತಕ್ಕೆ ಮನವಿ ಮಾಡಿದ್ದಾರೆ. ಕಳೆದ ಒಂದು ವಾರದಿಂದ ಎಡೆಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ಶುಕ್ರವಾರ ರಾತ್ರಿ ಕೆಂಪಮ್ಮ ಕೋಂ ಬೊಮ್ಮಯ್ಯ ಎಂಬುವವರ ಮನೆಯ ಬಹುತೇಕ ಭಾಗ ಸಂಪೂರ್ಣವಾಗಿ ನೆಲಕ್ಕುರುಳೀದೆ. ಅತ್ಯಂತ ಬಡಕುಟುಂಬವಾಗಿರುವ ಇವರಿಗೆ ಈ ಮನೆ ಬಿಟ್ಟರೆ ಬೇರೆ ಸ್ಥಳವಿಲ್ಲ.



ಮಳೆಯ ಅವಾಂತರ ತಾಲ್ಲೂಕಿನಾದ್ಯಂತ ಸಾಕಷ್ಟು ಆತಂಕಗಳನ್ನು ಸೃಷ್ಟಿಸಿದ್ದು ಪಟ್ಟಣದಲ್ಲಿ ನೆಲೆಯಾಗಿರುವ ಹಾಗೂ ಬಡತನದಿಂದ ಜೀವನ ಸಾಗಿಸುತ್ತಿರುವ ಕೆಂಪಮ್ಮ ಕೋಂ ಬೊಮ್ಮಯ್ಯ ಕುಟುಂಬಕ್ಕೆ ಶೀಘ್ರವಾಗಿ ನೆರವು ಒದಗಿಸಬೇಕೆಂದು ಮನೆ ಕಳೆದುಕೊಂಡ ಸಂತ್ರಸ್ತರು ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ಗ್ರಾಮಾಭಿವೃದ್ಧಿ ಅಧಿಕಾರಿ ಜಗದೀಶ್ ಭೇಟಿನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮಕ್ಕಾಗಿ ತಾಲ್ಲೂಕು ಆಡಳಿತಕ್ಕೆ ಮಾಹಿತಿ ಒದಗಿಸಿದ್ದಾರೆ.

### ಸೋರುವ ಸೂರಿನಲ್ಲಿ ಒಂದೊಂದು ದಿನ ಕಳೆಯುವುದೂ ಕಷ್ಟಕರ ಸ್ಥಿತಿ

# ಮಳೆಗೆ ಸೋಲಿಗರ ಕಾಲನಿ ತತ್ತರ

**ಚಾಮರಾಜನಗರ:** ಒಂದೆಡೆ ಹೊಸ ಮನೆ ನಿರ್ಮಾಣಗೊಳ್ಳುವವರೆಗೂ ಜೋಪಡಿ, ಶಿಥಿಲ ಗೊಂಡಿರುವ ಮನೆಯಲ್ಲಿ ಬದುಕಬೇಕಾದ ಪರಿಸ್ಥಿತಿ, ಮತ್ತೊಂದೆಡೆ ಮಳೆಯಿಂದಾಗಿ ಸೋರುವ ಸೂರಿನಲ್ಲಿ ಒಂದೊಂದು ದಿನ ಕಳೆಯುವುದೂ ಕಷ್ಟಕರವಾದ ಸ್ಥಿತಿ.

ಇದು ಚಾಮರಾಜನಗರ ತಾಲೂಕಿನ ಹೆಬ್ಬಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿತ್ತಲಗುಡ್ಡ ಗ್ರಾಮದ ಸೋಲಿಗರ ಕಾಲನಿಯ ದುಸ್ಥಿತಿಯಾಗಿದೆ.

ಹಿತ್ತಲಗುಡ್ಡ ಗ್ರಾಮದಲ್ಲಿ ಸುಮಾರು 35 ಕುಟುಂಬಗಳು, 70ಕ್ಕೂ ಹೆಚ್ಚು ಜನರು ವಾಸ ಮಾಡುತ್ತಿದ್ದಾರೆ. ಇವರಲ್ಲಿ ಹಲವರ ಮನೆಗಳು ಕುಸಿದು ಬೀಳುವ ಸ್ಥಿತಿಯಲ್ಲಿವೆ. ಈ ಹಿನ್ನೆಲೆಯಲ್ಲಿ ಕೆಲವು ತಿಂಗಳ ಹಿಂದೆ ಗ್ರಾಮ ಪಂಚಾಯ್ತಿ ವತಿಯಿಂದ 2022-23 ನೇ ಸಾಲಿನ ಅಂಬೇಡ್ಕರ್ ನಿವಾಸ ಯೋಜನೆಯಡಿ 14 ಮನೆಗಳ ನಿರ್ಮಾಣಕ್ಕೆ ಅವಕಾಶ ಸಿಕ್ಕಿತ್ತು. ಇದರಲ್ಲಿ 10 ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆಗಳನ್ನು ಕಟ್ಟಿಸಿಕೊಡಲಾಗುತ್ತಿದೆ. ನಿವೇಶನದಲ್ಲಿದ್ದ ಹಳೆಯ ಮನೆ ಯನ್ನು ಕೆಡವಲಾಗಿದೆ. ಹೊಸ ಮನೆ ಕಟ್ಟುವ ಕಾರ್ಯ ಪೂರ್ಣಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಸೂರು ಇಲ್ಲದವರು ನಿರ್ಮಾಣ ಹಂತದ ಮನೆಗಳ ಮುಂದೆ ತೆಂಗಿನ ಗರಿಯಿಂದ ಜೋಪಡಿ ಹಾಕಿಕೊಂಡಿದ್ದಾರೆ. ಅಕ್ಕ ಪಕ್ಕದ ಸಂಬಂಧಿಕರ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಹೊಸ ಮನೆ ಪೂರ್ಣಗೊಳ್ಳುವವರೆಗೂ ಸೋಲಿಗರಿಗೆ ವಸತಿ ಸೌಲಭ್ಯ ದೊರೆಯುವುದಿಲ್ಲ. ಈಗ ಮಳೆ ಸುರಿಯುತ್ತಿರುವುದರಿಂದ ಇವರು ಇರುವ ಜಾಗದಲ್ಲಿ ಇನ್ನಷ್ಟು ಕಷ್ಟ ಅನುಭವಿಸುತ್ತಿದ್ದಾರೆ.

ಹೀನಾಯ ಸ್ಥಿತಿಯ ವಾಸ: ಚಾಮರಾಜನಗರ ತಾಲ್ಲೂಕಿನ ಹೆಬ್ಬಸೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ವ್ಯಾಪ್ತಿಯ ಹಿತ್ತಲ ಗುಡ್ಡದ ಕೆಂಪಮ್ಮ ಮತ್ತು ಯೋಗೇಶ್ಗೆ ವಸತಿ ಯೋಜನೆಯಡಿ ಹೊಸದಾಗಿ ಮನೆ ನಿರ್ಮಾಣ ಮಾಡಿಕೊಡಲಾಗುತ್ತಿದೆ. ಆದರೆ ಕಾಮಗಾರಿ ಇದು ಇನ್ನೂ ಪೂರ್ಣಗೊಂಡಿಲ್ಲ. ವಾಸಕ್ಕಾಗಿ ನಿರ್ಮಾಣ ಹಂತದಲ್ಲಿರುವ ಮನೆಯ ಮುಂದೆಯೇ ತೆಂಗಿನ ಗರಿಯಿಂದ ಕಟ್ಟಿಕೊಂಡಿರುವ ಗುಡಿಸಲಿನಲ್ಲಿ ಕೆಂಪಮ್ಮ, ಯೋಗೇಶ್ ಇದ್ದಾರೆ. ಎಲ್ಲೆಡೆ ಜೋರು ಮಳೆ ಸುರಿಯುತ್ತಿದೆ. ಈ ಜೋಪಡಿಯಲ್ಲಿ ಸೋರುವ ಮಳೆ ನೀರಿನಿಂದ ತಪ್ಪಿಸಿಕೊಂಡು ಬದುಕಬೇಕು. ಎಷ್ಟು ಬೇಗ ಮನೆ ನಿರ್ಮಾಣವಾಗುವುದೋ ಅಷ್ಟು ಬೇಗ ಇವರ ಈ ಹೀನಾಯ ಸ್ಥಿತಿಯ ವಾಸ ತಪ್ಪಲಿದೆ.

ದೊರೆಯುವುದಿಲ್ಲ. ಈಗ ಮಳೆ ಸುರಿಯುತ್ತಿರುವುದರಿಂದ ಇವರು ಇರುವ ಜಾಗದಲ್ಲಿ ಇನ್ನಷ್ಟು ಕಷ್ಟ ಅನುಭವಿಸುತ್ತಿದ್ದಾರೆ.



### ಹೀನಾಯ ಸ್ಥಿತಿಯ ವಾಸ

ವಸತಿ ಯೋಜನೆಯಡಿ ಹೊಸದಾಗಿ ಮನೆ ನಿರ್ಮಾಣ ಮಾಡಿಕೊಡಲಾಗುತ್ತಿದೆ. ಆದರೆ ಕಾಮಗಾರಿ ಇದು ಇನ್ನೂ ಪೂರ್ಣಗೊಂಡಿಲ್ಲ. ವಾಸಕ್ಕಾಗಿ ನಿರ್ಮಾಣ ಹಂತದಲ್ಲಿರುವ ಮನೆಯ ಮುಂದೆಯೇ ತೆಂಗಿನ ಗರಿಯಿಂದ ಕಟ್ಟಿಕೊಂಡಿರುವ ಗುಡಿಸಲಿನಲ್ಲಿ ಕೆಂಪಮ್ಮ, ಯೋಗೇಶ್ ಇದ್ದಾರೆ. ಎಲ್ಲೆಡೆ ಜೋರು ಮಳೆ ಸುರಿಯುತ್ತಿದೆ. ಈ ಜೋಪಡಿಯಲ್ಲಿ ಸೋರುವ ಮಳೆ ನೀರಿನಿಂದ ತಪ್ಪಿಸಿಕೊಂಡು ಬದುಕಬೇಕು. ಎಷ್ಟು ಬೇಗ ಮನೆ ನಿರ್ಮಾಣವಾಗುವುದೋ ಅಷ್ಟು ಬೇಗ ಇವರ ಈ ಹೀನಾಯ ಸ್ಥಿತಿಯ ವಾಸ ತಪ್ಪಲಿದೆ.

### ಪತ್ನಿ ನಿಧನ, ಪತಿ-ಪುತ್ರಗಿಲ್ಲ ಆಸರೆ

ಹಿತ್ತಲಗುಡ್ಡದ ರಾಜಮ್ಮ ನಿಧನದಿಂದಾಗಿ ಈಕೆಯ ಪತಿ ಮತ್ತು ಮಗ ಇಂದಿಗೂ ವಸತಿ ವಂಚಿತರಾಗಿದ್ದಾರೆ. ಈ ಹಿಂದೆ ರಾಜಮ್ಮ ಹೆಸರು ಮನೆ ನಿರ್ಮಾಣಕ್ಕೆ ಆಯ್ಕೆಯಾಗಿತ್ತು. ಹಳೇ ಮನೆ ಕೆಡವಿ ಹೊಸ ಮನೆ ಕಟ್ಟಲು ಅಡಿಪಾಯ ಹಾಕಲಾಗಿತ್ತು. ಅದಷ್ಟರಲ್ಲಿ ರಾಜಮ್ಮ ಅನಾರೋಗ್ಯ ದಿಂದ ನಿಧನರಾದರು. ಮನೆ ನಿರ್ಮಾಣ ಕೆಲಸ ಶುರುವಾಗಲೇ ಇಲ್ಲ. ಇದ್ದ ಮನೆಯನ್ನೂ ಕೆಡವಿ ಅಲ್ಲಿ ಹಾಕಿದ್ದ ಅಡಿಪಾಯ ನೋಡಿಕೊಂಡೇ ಪತಿ ಸಿದ್ದೇಗೌಡ, ಪುತ್ರ ಮನು ಇಂದಿಗೂ ಇದ್ದಾರೆ. ರಾಜಮ್ಮ ಅವರ ಮರಣ ಪ್ರಮಾಣ ಪತ್ರ ಸಲ್ಲಿಕೆ ಮಾಡಿ ಸಿದ್ದೇಗೌಡ ಹೆಸರಿನಲ್ಲಿ ಮನೆ ನಿರ್ಮಾಣಕ್ಕೆ ಅನುದಾನ ತರುವ ಕೆಲಸವನ್ನು ಗ್ರಾಮ ಪಂಚಾಯಿತಿ ಬೇಗ ಮಾಡುತ್ತಿಲ್ಲ. ಮಹಿಳೆಯರ ಹೆಸರಿನಲ್ಲೇ ನಿವೇಶನ ಇರಬೇಕೆಂದಿದ್ದರೆ ಪರ್ಯಾಯ ವ್ಯವಸ್ಥೆಯನ್ನೂ ಹುಡುಕುತ್ತಿಲ್ಲ. ಹೀಗಾಗಿ ಸಿದ್ದೇಗೌಡ ಮತ್ತು ಮನು ಇಬ್ಬರೂ ಗ್ರಾಮದಲ್ಲೇ ಇರುವ ಶಿಥಿಲಗೊಂಡಿರುವ ಮನೆಯಲ್ಲೇ ವಾಸ ಮಾಡುತ್ತಿದ್ದಾರೆ.

### ನೆಲಕ್ಕುರುಳುವ ಸ್ಥಿತಿಯಲ್ಲಿರುವ ಗೋಡೆ

ಬಹು ವರ್ಷಗಳಿಂದಲೂ ಶಿಥಿಲಗೊಂಡಿರುವ ಮನೆಯಲ್ಲಿ ವಾಸವಿದ್ದ ಗ್ರಾಮದ ಜಡೆ ಮಾದಮ್ಮನಿಗೆ ಇದರಿಂದ ಮುಕ್ತಿ ದೊರೆಯುವ ಕಾಲ ಇನ್ನು ಕೂಡಿ ಬಂದಿಲ್ಲ. ಮಾದಮ್ಮನ ಹಳೆಯ ಮನೆ ವಾಸಕ್ಕೆ ಯೋಗ್ಯವಾಗಿರಲಿಲ್ಲ. ಆದರೂ ಹಲವು ವರ್ಷ ಜಡೆಮಾದಮ್ಮ ಇಲ್ಲೇ ಇದ್ದರು. ಈಗ ಈ ಜಾಗದಲ್ಲಿ ಹೊಸ ಮನೆ ನಿರ್ಮಾಣವಾಗುತ್ತಿದೆ. ಜಡೆ ಮಾದಮ್ಮ ಈ ಮನೆಯ ಮುಂದೆ ಶಿಥಿಲಗೊಂಡಿರುವ ಮತ್ತೊಂದು ಮನೆ ಇದೆ. ಇಲ್ಲೇ ಜಡೆ ಮಾದಮ್ಮ ವಾಸ. ನೆಲಕ್ಕುರುಳುವ ಸ್ಥಿತಿಯಲ್ಲಿರುವ ಗೋಡೆ, ಮುರಿದು ಹೋಗಿರುವ ಬಾಗಿಲು, ಗಾಳಿ-ಮಳೆಗೆ ಹಾರಿ ಹೋಗುವ ಹೆಂಚುಗಳಿಂದ ಕೂಡಿರುವ ಈ ಶಿಥಿಲ ಮನೆಯಲ್ಲಿ ಮಳೆಗಾಲದ ವಾಸ ಪ್ರಾಣಕ್ಕೆ ಅಪಾಯ ತಂದೊಡ್ಡುವಂತಿದೆ.

> “ಬೀಳುವ ಸ್ಥಿತಿಯಲ್ಲಿದ್ದ ಮನೆ ಯಲ್ಲಿದ್ದೆ. ಈಗ ಹೊಸದಾಗಿ ಮನೆ ನಿರ್ಮಾಣ ಮಾಡಿಕೊಡುತ್ತಿದ್ದಾರೆ. ಅಲ್ಲಿಯ ವರೆಗೂ ಮತ್ತೆ ಶಿಥಿಲ ಗೊಂಡಿರುವ ಮತ್ತೊಂದು ಮನೆಯಲ್ಲಿ ಇರಬೇಕಾಗಿದೆ. ಬೇಗ ಕಾಮಗಾರಿ ಪೂರ್ಣಗೊಳಿಸಿಕೊಟ್ಟರೆ ಅನುಕೂಲ ವಾಗಲಿದೆ.
>
> | ಜಡೆ ಮಾದಮ್ಮ ಹಿತ್ತಲಗುಡ್ಡ ಚಾಮರಾಜನಗರ

> “ಮನೆಗಳನ್ನು ಬೇಗ ನಿರ್ಮಾಣ ಮಾಡಲು ಗಾಮ್ರಪಂನಿಂದ ಬಿಲ್ಗಳನ್ನು ಪಾವತಿ ಮಾಡಿದ್ದೇವೆ. ಗ್ರಾಮಸ್ಥರಿಗೆ ಸೋಲಿಗ ಸಮುದಾಯ ದವರೇ ನಿಂತು ಮನೆ ಕಟ್ಟಿಸಿಕೊಡುತ್ತಿದ್ದಾರೆ. ಜಯಶ್ರೀ ಹೆಸರು ಬದಲಾ ವಣೆಯಾಗಿರು ವುದನ್ನು ಸರಿಪಡಿಸಿ ಕೊಡುತ್ತೇವೆ. ರಾಜಮ್ಮ ಮರಣ ಪ್ರಮಾಣ ಪತ್ರದೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಇದನ್ನೂ ರೆಡಿ ಮಾಡಿಸುತ್ತೇವೆ.
>
> | ರಂಜಿತಾ ಪಿಡಿಒ, ಹೆಬ್ಬಸೂರು ಗ್ರಾಪಂ, ಚಾಮರಾಜನಗರ

## ಪುಸ್ತಕ ಅವಲೋಕನ ಬರಹ : ವಿಜೇತರಿಗೆ ಬಹುಮಾನ ವಿತರಣೆ

**ಹುಳಿಯಾರು:** ಹುಳಿಯಾರು ಪದವಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಐಚ್ಚಿಕ ಕನ್ನಡದ ವಿದ್ಯಾರ್ಥಿಗಳಿಗೆ ''ಪುಸ್ತಕ ಅವಲೋಕನ ಕಾರ್ಯಾಗಾರ'' ಹಮ್ಮಿಕೊಂಡು ಬಹುಮಾನ ವಿತರಿಸಲಾಯಿತು.

ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ತಮಗೆ ಹಂಚಿಕೆಯಾದ ಪುಸ್ತಕಗಳನ್ನು ಅವಲೋಕನ ಮಾಡಿ ಮಂಡನೆ ಮಾಡಿದ್ದರು. ಇವರಲ್ಲಿ ಡಾ.ಪಿ.ವಿ. ಕೃಷ್ಣಮೂರ್ತಿ ಅವರ ''ಶಾಸನ ಮಂಥನ'' ಕೃತಿಯ ಅವಲೋಕನ ಬರಹಕ್ಕೆ ಸ್ಫೂರ್ತಿ ಜಿ.ಆರ್., ತೃತೀಯ ಬಿ.ಎ., ಇವರು ಪ್ರಥಮ ಬಹುಮಾನ ಪಡೆದುಕೊಂಡರು.

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಅವರ ''ಜಾನಪದೀಯ ನೆಲೆಗಳು'' ಎಂಬ ಕೃತಿಯ ಅವಲೋಕನವನ್ನು ಮಂಡಿಸಿದ ಕಾವ್ಯ ಕೆ., ತೃತೀಯ ಬಿ.ಎ., ಇವರು ದ್ವಿತೀಯ ಬಹುಮಾನವನ್ನು, ಡಾ. ಮುದ್ದುವೀರಪ್ಪ ಅವರ ''ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು'' ಎಂಬ ಕೃತಿಯ ಅವಲೋಕನವನ್ನು ಮಂಡಿಸಿದ ಸ್ವಾತಿ ಎನ್., ತೃತೀಯ ಬಿ.ಎ., ಇವರು ತೃತೀಯ ಬಹುಮಾನವನ್ನು ಪಡೆದಿರುತ್ತಾರೆ.

ಡಾ. ಶ್ರೀಪಾದ ಭಟ್ ಅವರ ''ಕರ್ನಾಟಕ ಸಹ್ಯಾದ್ರಿ ಬೆಟ್ಟಗಳು'' ಕೃತಿಯ ಅವಲೋಕನವನ್ನು ಮಂಡಿಸಿದ ದರ್ಶಿನಿ ಕೆ.ಎಂ., ದ್ವಿತೀಯ ಬಿ.ಎ., ಇವರಿಗೆ ಸಮಾಧಾನಕರ ಬಹುಮಾನ ನೀಡಲಾಗಿದ್ದು, ತೀರ್ಪುಗಾರರಾಗಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಮೋಹನ್ ಮಿರ್ಲೆ ಹಾಗೂ ಉಪನ್ಯಾಸಕರಾದ ಚಂದ್ರಹಾಸ ಬಿ.ಆರ್. ಮತ್ತು ತಿಪ್ಪೇಸ್ವಾಮಿ ಎಂ.ಕೆ. ಕಾರ್ಯನಿರ್ವಹಿಸಿರುತ್ತಾರೆ. ಬಹುಮಾನಿತ ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿರುತ್ತಾರೆ.



ಹುಳಿಯಾರು ಪದವಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಐಚ್ಛಿಕ ಕನ್ನಡದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ''ಪುಸ್ತಕ ಅವಲೋಕನ ಕಾರ್ಯಾಗಾರ''ದಲ್ಲಿ ಪುಸ್ತಕಗಳನ್ನು ಅವಲೋಕನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

# ಹುಳಿಯಾರಿನಲ್ಲಿ ಒಂಟಿ ವಾನರನ ಉಪಟಳ

**ಹುಳಿಯಾರು:** ಹುಳಿಯಾರು ಪಟ್ಟಣದಲ್ಲಿ ಒಂದು ವಾರದಿಂದ ಒಂಟಿ ವಾನರನ ಉಪಟಳ ಹೆಚ್ಚಾಗಿದೆ. ಈಗಾಗಲೇ ಐದಾರು ಮಂದಿಯನ್ನು ಕಡಿದಿರುವುದರಿಂದ ಗ್ರಾಮಸ್ಥರು ಭಯಬೀತರಾಗಿದ್ದಾರೆ. ಅರಣ್ಯ ಇಲಾಖೆಯವರು ಕೋತಿ ಸೇರೆಯಿಡಿದು ನಿರ್ಭಯವಾಗಿ ಜನ ಓಡಾಡುವಂತೆ ಮಾಡಬೇಕಿದೆ. ಒಂದು ವಾರದ ಹಿಂದೆ ಪಟ್ಟಣಕ್ಕೆ ಬಂದಿರುವ ಈ ಕೋತಿಯ ಕಾಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮೊದಮೊದಲು ಅಂಗಡಿಗಳಿಗೆ ನುಗ್ಗುತ್ತಿದ್ದ ಕೋತಿ ಇಷ್ಟ ಬಂದ ಪದಾರ್ಥಗಳನ್ನು ತಿಂದು ಹೋಗುತ್ತಿತ್ತು. ಆದರೆ ಈಗ ಹೋಟೆಲ್, ಅಂಗಡಿಗಳಿಗೆ ನುಗ್ಗಿ ದಾಂದಲೆ ಮಾಡುತ್ತಿದೆ. ಸಿಕ್ಕಿದನ್ನೆಲ್ಲಾ ಕಿತ್ತು ಚೆಲ್ಲಾಟಿ ಅಪಾರ ನಷ್ಟ ಉಂಟು ಮಾಡುತ್ತಿದೆ. ಕೋತಿಗಳ ಈ ಕಾಟದಿಂದಾಗಿ ಜನರು ಹೈರಾಣಾಗಿ ಹೋಗಿದ್ದಾರೆ. ನಿತ್ಯ ಒಂದೊಂದು ಬಡಾವಣೆಯಲ್ಲಿ ಇದರ ಕಾಟದ



ವರದಿಯಾಗುತ್ತಿದ್ದು ಮರದಿಂದ ಮಾಳಿಗೆಗೆ, ಗೋಡೆಯಿಂದ ಅಂಗಡಿಗಳಿಗೆ ಜಿಗಿಯುತ್ತ ದಾಂಧಲೆ ನಡೆಸುತ್ತಿವೆ. ಓಡಿಸಲು ಬಂದವರ ಮೇಲೆ ಎಗರಿ ಕಚ್ಚುತ್ತಿದೆ. ಬಸ್ ನಿಲ್ದಾಣದಲ್ಲಂತೂ ಪ್ರಾಯಾಣಿಕರ ನೆಮ್ಮದಿ ಕಿತ್ತುಕೊಳ್ಳುತ್ತಿದೆ. ಬಸ್ ಒಳಗೆ ಹತ್ತಿ ಎಲ್ಲರನ್ನೂ ಗಾಭರಿ ಮಾಡುತ್ತಿದೆ. ಪ್ರಾಯಾಣಿಕರ ಕೈ ಚೀಲ ಕಿತ್ತುಕೊಳ್ಳುವುದು, ಮಕ್ಕಳ ಮೇಲೆ ಎಗರುವುದು ಹೀಗೆ ಈ ಕಪಿಯ ಚೇಷ್ಟೆಯಿಂದಾಗಿ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿದ್ದಾರೆ. ಮನೆಯ ಮುಂದೆ ಒಣಹಾಕಿದ ದವಸ-ಧಾನ್ಯ, ಧಾನ್ಯಗಳೆಲ್ಲ ಕೋತಿ ಪಾಲಾಗುತ್ತಿವೆ. ಬಟ್ಟೆಗಳನ್ನು ಎತ್ತಿಕೊಂಡು ಹೋಗುತ್ತಿವೆ. ಮನೆಯ ಮೇಲೆ ಕೋತಿಗಳು ಮಾಡುತ್ತಿರುವ ದಾಂಧಲೆಯಿಂದಾಗಿ ಜನರು ರೋಸಿ ಹೋಗಿದ್ದಾರೆ. ಕೋತಿಯ ಕಾಟದಿಂದ ಮುಕ್ತಿ ಕೊಡಿಸುವಂತೆ ಅರಣ್ಯ ಇಲಾಖೆಗೆ ಹುಳಿಯಾರು ಜನ ಮನವಿ ಮಾಡಿದ್ದಾರೆ.

### ಹೂವನ್ನೂ ಬಿಡಲ್ಲ, ಗುಟಕಾನೂ ಬಿಡಲ್ಲ

> “ಹಸಿವಾಗಿ ಬಂದಿದೆ ಎಂದು ಬಾಳೆಹಣ್ಣಿನವರು ಬಾಳೆಹಣ್ಣು ಕೊಡುತ್ತಾರೆ. ಗೂಡಂಗಡಿಯವರು ಬ್ರೆಡ್, ಬಿಸ್ಕೇಟ್, ದಿನಸಿ ಅಂಗಡಿಯವರು ಕಡ್ಲೇಬೀಜ ಹೀಗೆ ಅನೇಕರು ಅನೇಕ ಆಹಾರ ಕೊಡುತ್ತಾರೆ. ಆದರೂ ಸಹ ಹೂವಿನ ಅಂಗಡಿಗೆ ಬಂದು ಹೂವಿನ ಹಾರ ಕಿತ್ತಾಕುತ್ತೆ. ಗೂಡಂಗಡಿಗೆ ಬಂದು ಗುಟಕ ಸರ ಕಿತ್ತು ಚೆಲ್ಲಾಪಿಲ್ಲಿ ಮಾಡುತ್ತೆ. ದಿನಸಿ ಅಂಗಡಿಯಲ್ಲಿ ಕೈಗೆ ಸಿಕ್ಕಿದನ್ನೆಲ್ಲಾ ಕಿತ್ತು ಚೆಲ್ಲಾಪಿಲ್ಲಿ ಮಾಡುತ್ತಿದೆ. ಹೋಟೆಲ್ ನುಗ್ಗಿ ತಿಂಡಿ ತಿನ್ನುತ್ತಿರುವವರ ಮುಂದೆ ಕೂರುತ್ತದೆ. ಇದರಿಂದ ಸಾವಿರಾರು ರೂ. ನಷ್ಟ ಅನುಭವಿಸುವಂತಾಗಿದೆ.
>
> ಮಂಜುನಾಥ್
> ಹೂವಿನ ವ್ಯಾಪಾರಿ, ಹುಳಿಯಾರು

# ಶ್ರೀ ಸುತ್ತೂರು ಕ್ಷೇತ್ರ ಭಕ್ತಿ ಜ್ಞಾನದ ಸಂಸ್ಥಾನ: ಡಾ.ಕೆ.ಅನಂತರಾಮು

**ಮೈಸೂರು:** ಶ್ರೀ ಸುತ್ತೂರು ಕ್ಷೇತ್ರವು ಭಕ್ತಿ ಜ್ಞಾನದ ಸಂಸ್ಥಾನ ಎಂದು ಮೈಸೂರಿನ ನಿವೃತ್ತ ಪ್ರಾಧ್ಯಾಪಕರಾದ ಡಾ.ಕೆ. ಅನಂತರಾಮುರವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಮೇ 20 ರಿಂದ 24ರವರೆಗೆ ಶ್ರೀ ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ' ಕೃತಿಯ ಬಗೆಗೆ ಏರ್ಪಡಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ತಿಳಿಸಿದರು.

ಜಗತ್ತು ಜಡ, ದುಃಖ ಹಾಗೂ ಅಶಾಶ್ವತ. ಪರಮಾತ್ಮನೇ ಚೈತನ್ಯ, ಆನಂದ ಹಾಗೂ ಶಾಶ್ವತ. ಇಡೀ ಜಗತ್ತಿನ ಪ್ರತಿಯೊಂದು ಜೀವಿಯೂ ಪರಮಾತ್ಮನಿಂದಾಗಿದ್ದು, ಸೃಷ್ಠಿಯು ಪ್ರಕೃತಿಯೊಂದಿಗೆ ಲೀನವಾಗುತ್ತದೆ, ಎಲ್ಲಾ ಜೀವರಾಶಿಗಳಲ್ಲಿಯೂ ಪರಮಾತ್ಮನಿರುವುದರಿಂದ ನಾವೆಲ್ಲರೂ ಪರಮಾತ್ಮರೆ, ಪರಮಾತ್ಮ ಹಾಗೂ ಯೋಗಿ ಬೇರೆ ಅಲ್ಲ. ಯೋಗಿಯು ಸಚ್ಚಿದಾನಂದ ಸ್ವರೂಪ, ಜಗತ್ತಿನ ಬೇರೆ ಯಾವ ವಾಸನೆಯು ಅವನ ಸಾಮಿಪ್ಯ ಬರುವುದಿಲ್ಲ. ಸದ್ಗುರುವಿನ ಕೃಪೆಯಿಂದ ವಿಕಲ್ಪ ಸಮಾಧಿ ಸ್ಥಿತಿಯನ್ನು ತಲುಪಿ ನಿರ್ಮಲ ಆನಂದವನ್ನು ಪಡೆಯುತ್ತಾನೆ. ಜೀವಾತ್ಮನ ಸುಖ-ದುಃಖಗಳು ಪರಮಾತ್ಮನಿಗೆ ತಟ್ಟುವುದಿಲ್ಲ ಎಂದು ತಿಳಿದು ಭಗವಂತನಲ್ಲಿ ಲೀನನಾಗುತ್ತಾನೆ. ಅಧ್ಯಯನ ಶಿಬಿರವು ಶಿಬಿರಾರ್ಥಿಗಳಿಗೆ ಭಕ್ತಿ, ಜ್ಞಾನ, ಆರೋಗ್ಯ,



ಆನಂದ, ಪ್ರವಾಸ, ಗುರುದರ್ಶನ, ಪುಣ್ಯಕ್ಷೇತ್ರ ದರ್ಶನ ಮೊದಲಾದ ದಶ ಲಾಭಗಳನ್ನು ನೀಡಿದೆ. ಸುತ್ತೂರಿನಲ್ಲಿ ಅನ್ನ ಬ್ರಹ್ಮ ಹಾಗೂ ಶಬ್ದ ಬ್ರಹ್ಮನ ವೈಭವವೇ ನಡೆಯಿತು. ಗುರು ಕಾರುಣ್ಯದಿಂದ ಎಲ್ಲರೂ ಆನಂದಮಯವಾಗಿದ್ದೆವು ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನವನ್ನು ಕರುಣಿಸುತ್ತಾ ಮೋಕ್ಷ ಸಾಧನೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನು ಗುರು ಮಾರ್ಗದರ್ಶನದಿಂದ ಅರಿಯಬೇಕು. ಮನಸ್ಸಿನ ರಾಗ-ದ್ವೇಷಗಳನ್ನು ತೊರೆದು ಮುಕ್ತವಾಗಿ ಬದುಕಬೇಕು. ಮಾಡುವ ಪ್ರತಿಯೊಂದು ಉತ್ತಮ ಕಾರ್ಯದಲ್ಲೂ ಭಗವಂತನನ್ನು ಕಾಣಬೇಕು. ವ್ಯಕ್ತಿಗೆ ವೈಯಕ್ತಿಕ ಸಾಧನೆಯು ಬಹಳ ಮುಖ್ಯವಾಗಿದ್ದು, ಕೇಳಿದ ಉತ್ತಮ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಈ ಅಧ್ಯಯನ ಶಿಬಿರವು ಮನಸ್ಸಿನ ಸಂಶಯಗಳಿಗೆ ಉತ್ತರ ಕಂಡುಕೊಳ್ಳಲು ಸಹಾಯಕವಾಗಿದ್ದು, ಶ್ರೀ ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ' ಆಧ್ಯಾತ್ಮಿಕ ಸಾಧನೆಗೆ ದಾರಿದೀಪವಾಗಿದೆ ಎಂದು ನುಡಿದರು.

ಶಿಬಿರಾರ್ಥಿಗಳ ಪರವಾಗಿ ಕೆಸವತ್ತೂರು ಶ್ರೀ ಸಿದ್ಧಲಿಂಗೇಶ್ವರ ಮಠದ ಶ್ರೀ ಬಸವರಾಜೇಂದ್ರಸ್ವಾಮಿಗಳು, ಬೆಂಗಳೂರು ಸಿದ್ದಾರೂಢ ಮಠದ ಮಾತೆ ಉಮಾಭಾರತಿ, ಶಿರಗುಪ್ಪದ ಶ್ರೀ ಬಸವಭೂಷಣಸ್ವಾಮಿಗಳು, ಜಮಖಂಡಿಯ ಶ್ರೀಮತಿ ಜ್ಞಾನಮಾಲ, ಶಹಾಪುರದ ಶ್ರೀ ಚೆನ್ನಾರೆಡ್ಡಿ, ಬೆಂಗಳೂರಿನ ಶ್ರೀಮತಿ ನಂದಿತಾ, ಮೈಸೂರಿನ ಶ್ರೀ ಎಂ. ಸೋಮೇಶ್ ಹಾಗೂ ಶ್ರೀಮತಿ ಶಾಂತ, ಧಾರವಾಡದ ಶ್ರೀಮತಿ ಲಲಿತಮ್ಮ ತಾಯಿ, ವಿಜಯಪುರದ ಯೋಗೇಶ್ವರಿ ಮಾತಾಜಿರವರುಗಳು ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ, ಈ ರೀತಿಯ ಅಧ್ಯಯನ ಶಿಬಿರವು ಸಾಧಕರುಗಳಿಗೆ ಸಾಧನೆಯ ಮಾರ್ಗದಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿರುತ್ತದೆ ಎಂದು ತಿಳಿಸುತ್ತಾ ಶಿಬಿರವನ್ನು ಅತ್ಯಂತ ವ್ಯವಸ್ಥಿತವಾಗಿ ಏರ್ಪಡಿಸಿರುವುದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಎಸ್. ನಂದೀಶ್‌ರವರು ಶಿಬಿರದ ವರದಿ ಮಂಡಿಸಿದರು. ಚುಂಚನಹಳ್ಳಿ ಮಠದ ಶ್ರೀ ಚನ್ನಬಸವಸ್ವಾಮಿಗಳು ಸ್ವಾಗತಿಸಿದರು, ಶ್ರೀ ಅಂದಯ್ಯ ಶಿರೂರಮಠ ವಂದಿಸಿದರು. ಶ್ರೀಮತಿ ಮಮತಾ ಶಿವಪ್ರಸಾದ್ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಬಿ. ಮಾದಪ್ಪ ಕಾರ್ಯಕ್ರಮ ನಿರೂಪಿಸಿದರು.

ಶಿಬಿರದಲ್ಲಿ ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಿಂದ ಆಗಮಿಸಿರುವ 183 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 24 ರಂದು ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ಕರುಣಿಸುತ್ತಿರುವುದು. ಡಾ.ಕೆ. ಅನಂತರಾಮು ಹಾಗೂ ಶಿಬಿರಾರ್ಥಿಗಳಿದ್ದಾರೆ.

## ಸಂಕಷ್ಟಹರ ಚತುರ್ಥಿ ಆಚರಣೆ

**ಹುಳಿಯಾರು:** ಪಟ್ಟಣದ ಶ್ರೀ ಪ್ರಸನ್ನ ಗಣಪತಿ ದೇವಾಲಯದಲ್ಲಿ ಸಂಕಷ್ಟಹರದ ಚತುರ್ಥಿ ಅಂಗವಾಗಿ ವಿಶೇಷ ಪೂಜೆ ಹಾಗೂ ಹೋಮ ನಡೆಯಿತು. ಸಂಕಷ್ಟಹರ ಚತುರ್ಥಿ ನಿಮಿತ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಮುಂಜಾನೆ ಮಹಾಗಣಪತಿ ಪೂಜೆ, ಪುಣ್ಯಾಹ, ಕಳಸಸ್ಥಾಪನೆ, ದೇವನಾಂದಿ, ಪಂಚಾಮೃತಾಭಿಷೇಕ, ನವಗ್ರಹ ಹೋಮ, ಸಂಕಷ್ಟಹರ ಗಣಪತಿ ಹೋಮ ನಡೆದು ಪೂರ್ಣಾಹುತಿ ಹಾಗೂ ಮಹಾಮಂಗಳಾರತಿ ಸಮರ್ಪಿಸಿದ ನಂತರ ಅಮೃತಾನ್ನ ಪ್ರಸಾದ ವಿತರಿಸಲಾಯಿತು. ಸಂಕಷ್ಟಹರ ವ್ರತ ಮಾಡಿದರೆ ಕುಟುಂಬದವರಿಗೆ ಆಯುಷ್ಯಾರೋಗ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ. ಹಾಗಾಗಿ ಮಹಿಳೆಯರು ಸಂಕಷ್ಟಿ ವ್ರತವಿದ್ದು ಸಂಜೆ ಗಣಪತಿ ದರ್ಶನ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದರು. ಅಲ್ಲದೆ ಸಂಕಷ್ಟ ಚತುರ್ಥಿ ಅಂಗವಾಗಿ ಗಣಪತಿಗೆ ವಿಶೇಷ ಅರಿಶಿಣ - ಕುಂಕುಮ ಅಲಂಕಾರ ಮಾಡಲಾಗಿತ್ತು. ಸಂಜೆ ಗಣೇಶನಿಗೆ ಅಭಿಷೇಕ, ಅರ್ಚನೆ ಹಾಗೂ ವಿಶೇಷ ಅಲಂಕಾರ ಮಾಡಿ ಪೂಜಿಸಲಾಯಿತು. ದೇವಾಲಯ ಸಮಿತಿಯವರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತಾಧಿಗಳು ಉಪಸ್ಥಿತರಿದ್ದು ಸ್ವಾಮಿಯ ದರ್ಶನ ಪಡೆದು ಕೃತಾರ್ಥರಾದರು.






ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರಿಯಿಂದ ಆಯೋಜಿಸಲಾದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಲುವಾಗಿ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಜಗದೀಪ್ ಧನಕರ್ ಹಾಗೂ ಶ್ರೀಮತಿ ಸುದೇಶ್ ಧನಕರ್ ಅವರು ಇಂದು ಅಪರಾಹ್ನ ಬೆಂಗಳೂರಿಗೆ ಆಗಮಿಸಿದರು. ಗೌರವಾನ್ವಿತರನ್ನು ರಾಜ್ಯದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಹೆಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಸ್ವಾಗತಿಸಿದರು. ಈ ಸಮಯದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯಲ್, ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್, ನಗರ ಪೊಲೀಸ್ ಆಯುಕ್ತರಾದ ಬಿ ದಯಾನಂದ್ ಉಪಸ್ಥಿತರಿದ್ದರು.

# ಅಂಚೆ ಮತ ಎಣಿಕೆ ಜಾಗರೂಕತೆಯಿಂದ ನಡೆಸಿ

**ಮಂಡ್ಯ:** ಮಂಡ್ಯ ಲೋಕಸಭಾ ಸಾರ್ವತ್ರಿಕ ಚುನಾವಣೆ 2024 ರ ಮತ ಎಣಿಕೆ ಕಾರ್ಯ ಜೂನ್ 4 ರಂದು ನಡೆಯಲಿದ್ದು, ಅಂಚೆ ಮತಪತ್ರಗಳ ಎಣಿಕೆಯು ಸಹ ಬಹಳ ಜಾಗರೂಕತೆಯಿಂದ ನಡೆಸಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ಅಂಚೆ ಮತ ಎಣಿಕೆ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತಿಳಿಸಿದರು.




ಜಿಲ್ಲಾ ಪಂಚಾಯತ್ನ ಕಾವೇರಿ ಸಭಾಂಗಣದಲ್ಲಿ ಅಂಚೆ ಮತ ಎಣಿಕೆ ಅಧಿಕಾರಿ/ ಸಿಬ್ಬಂದಿಗಳಿಗೆ ಆಯೋಜಿಸಲಾಗಿದ್ದ ಚುನಾವಣಾ ತರಬೇತಿಯಲ್ಲಿ ಮಾತನಾಡಿದರು.

ಅಂಚೆ ಮತ ಎಣಿಕೆ ಪ್ರಕ್ರಿಯೆಯಲ್ಲಿ ಒಟ್ಟು 11 ಟೇಬಲ್ ಗಳ ವ್ಯವಸ್ಥೆ ಮಾಡಲಾಗಿದ್ದು, ಪ್ರತಿ ಟೇಬಲ್ ಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಅಂಚೆ ಮತ ಪತ್ರ ಎಣಿಕೆಯ ಸಹಾಯಕ ಚುನಾವಣಾ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಅಂಚೆ ಮತ ಎಣಿಕೆಯು ಬಹಳ ಸೂಕ್ಷ್ಮವಾಗಿದ್ದು, ಎಲ್ಲಾ ಮತ ಎಣಿಕೆ ಅಧಿಕಾರಿಗಳು, ಮೇಲ್ವಿಚಾರಕರುಗಳು ಹಾಗೂ ಸಿಬ್ಬಂದಿಗಳು ಗಂಭೀರವಾಗಿ ಪರಿಗಣಿಸಿ ಸಂಪೂರ್ಣ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಮತ ಎಣಿಕೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳು ತರಬೇತಿಯಲ್ಲಿ ಸರಿಯಾದ ಸಲಹೆ ಹಾಗೂ ಮಾರ್ಗದರ್ಶನವನ್ನು ಪಡೆಯಿರಿ. ಮತ ಎಣಿಕೆಯ ದಿನದಂದು ಕೌಂಟಿಂಗ್ ಟೇಬಲ್ ನ ಸಂಖ್ಯೆ, ಅಧಿಕಾರಿ ಹೆಸರು, ಎಣಿಕೆ ಮೇಲ್ವಿಚಾರಕರ ಹೆಸರು, ನೀಡುವ ಪೋಸ್ಟಲ್ ಬ್ಯಾಲೆಟ್ ಬಂಡಲ್ ನ ಒಟ್ಟು ಸಂಖ್ಯೆಯನ್ನು ನೀಡಲಾಗುವ ನಮೂನೆಯಲ್ಲಿ ತಪ್ಪದೇ ನಮೂದಿಸಬೇಕು ಎಂದು ತಿಳಿಸಿದರು. ಮತ ಎಣಿಕೆ ಮೇಲ್ವಿಚಾರಕರ ಜವಾಬ್ದಾರಿಯು ಬಹಳ ಮುಖ್ಯವಾಗಿದ್ದು, ಮತ ಎಣಿಕೆಯ ದಿನ ಎಲ್ಲಾ ಸಿಬ್ಬಂದಿಗಳು ನಿಗದಿಪಡಿಸುವ ಸಮಯಕ್ಕೆ ಸರಿಯಾಗಿ ಹಾಜರಿರಬೇಕು. ಮತ ಎಣಿಕೆಯನ್ನು ನಿಖರವಾಗಿ ನಮೂದಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೇಕ್ ತನ್ವಿರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ. ಎಚ್. ಎಲ್. ನಾಗರಾಜು ಉಪಸ್ಥಿತರಿದ್ದರು.

# ಸಾಹಿತಿ ಡಾ. ಭೇರ್ಯ ರಾಮ ಕುಮಾರ್ ಅವರಿಗೆ ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ

**ದಾವಣಗೆರೆ:** ವಿಶ್ವವೀರಶೈವ ಲಿಂಗಾಯತ ಏಕೀಕರಣ ಪರಿಷತ್ ಇಂದು ನಡೆಸಿದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ದತ್ತಿ ಪ್ರಶಸ್ತಿ ಪುರಸ್ಕೃತ ಸಾಹಿತಿಗಳಾದ ಡಾ. ಭೇರ್ಯ ರಾಮ ಕುಮಾರ್ ,ಹಿರಿಯ ಸಾಹಿತಿಗಳಾದ ಎನ್. ವಿ.ರಮೇಶ್ , ಹಿರಿಯ ಸಾಹಿತಿ ಎಸ್.ಎನ್.ಸಂಗನಾಳ್ ಮಠ್ ಅವರೂ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರಿಗೆ ಕಾಯಕ ಯೋಗಿ ಬಸವಶ್ರೀ ಪ್ರಶಸ್ತಿ ನೀಡಿ ಅವರುಗಳ ಸೇವೆಯನ್ನು ಗೌರವಿಸಲಾಯಿತು. ಕಮ್ಮತ್ತ ಹಳ್ಳಿ ವಿರಕ್ತ ಮಠದ ಶ್ರೀ ಡಾ.ಗುರು ಬಸವ ಸ್ವಾಮೀಜಿಯವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಗಳಾದ ಅರಳಿ ನಾಗರಾಜ್ ಅವರು ಜ್ಯೋತಿ ಬೆಳಗಿಸಿ, ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಹಿರಿಯ ಸಾಹಿತಿ ಹಾಗೂ ನ್ಯಾಯವಾದಿಗಳಾದ ಡಾ.ರೇವಣ್ಣ ಬಳ್ಳಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಜಿ. ಕೆ.ಶಾಕುಂತಲ ಹಾಗೂ ಶ್ರೀಮತಿ ಕುಸುಮ ಲೋಕೇಶ್ ಬಸವಣ್ಣ ಅವರ ಜೀವನ ಹಾಗೂ ವಚನಗಳನ್ನು ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ನ್ಯಾಯಮೂರ್ತಿ ಅರಳಿ ನಾಗರಾಜ್ ಅವರಿಗೆ ಜಗಜ್ಯೋತಿ ಬಸವಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. 2004 ರ ಸಾಲಿನಲ್ಲಿ ಶೇಕಡಾ 90 ಕೂ ಹೆಚ್ಚು ಅಂಕ ಗಳಿಸಿದ 90 ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು.

# ಡಿಪ್ಲೊಮಾ ಪ್ರವೇಶಾತಿಗೆ ಅರ್ಜಿ

**ಮಂಡ್ಯ:** ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ, ಸಿಪೆಟ್ ಸಂಸ್ಥೆಯು 2024-25ನೇ ಸಾಲಿನ ಸಿಪೆಟ್ ಉದ್ಯೋಗಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ, ಕೋರ್ಸ್ ಗಳಾದ ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ, ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ 3 ವರ್ಷದ ಕೋರ್ಸ್ಗಳ ಪ್ರವೇಶಾತಿಗಾಗಿ ಆನ್ ಲೈನ್ /ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.(ವಿಜ್ಞಾನ) ಪರೀಕ್ಷೆಯಲ್ಲಿ ತೇರ್ಗಡೆಯಾದ ಆಸಕ್ತ ವಿದ್ಯಾರ್ಥಿಗಳು ಮೇ 31 ರೊಳಗೆ www.cipet.gov.in ವೆಬ್ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821-2510618, 9480253024, 9791431827, 9466585669 ನ್ನು ಸಂಪರ್ಕಿಸಬಹುದು ಎಂದು ಮೈಸೂರು ಸಿಪೆಟ್ ಉದ್ಯೋಗಾದಾರಿತ ಡಿಪ್ಲೊಮಾ ಸಂಸ್ಥೆಯ ಪ್ರಿನ್ಸಿಪಾಲ್ ನಿರ್ದೇಶಕರು ಮತ್ತು ಮುಖ್ಯಸ್ಥರು ತಿಳಿಸಿರುತ್ತಾರೆ.

# ಮಳವಳ್ಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಅರ್ಜಿ

**ಮಂಡ್ಯ:** ಮಳವಳ್ಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ 2024-25ನೇ ಸಾಲಿಗೆ ಎಸ್ ಎಸ್ ಎಲ್ ಸಿ ಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಡಿ.ಎಂ.ಎಂ, ವಿದ್ಯುತ್ ಕರ್ಮಿ, ವಿದ್ಯನ್ಮಾನ ದುರಸ್ತಿಗಾರ, ಜೋಡಣೆಗಾರ, ಚರಕೀಯ, ಎಂ.ಇ.ವಿ, ಐ.ಆರ್.ಡಿ.ಎಂ ವೃತ್ತಿಗಳಿಗೆ ಪ್ರವೇಶಾತಿಗಾಗಿ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜೂನ್ 3 ರವರೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, ಅರ್ಜಿಯನ್ನು www.cite.karnataka.gov.in ವೆಬ್ಸೈಟ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 9880175939, 9731715151 ನ್ನು ಸಂಪರ್ಕಿಸಬಹುದು ಎಂದು ಮಳವಳ್ಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿರುತ್ತಾರೆ.

# ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ

**ಮಂಡ್ಯ:** ನಾಗಮಂಗಲ ತಾಲ್ಲೂಕಿನ ಸೋಮನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಗಣಿತ ವಿಷಯದ ಅತಿಥಿ ಶಿಕ್ಷಕರ ಖಾಲಿ ಇರುವ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಬಿ.ಎಸ್ಸಿ, ಬಿ.ಎಡ್ ವಿದ್ಯಾರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ಮೇ 30 ರೊಳಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರು ಮೊ.ಸಂ:9900452195 ಅನ್ನು ಸಂಪರ್ಕಿಸಬಹುದು ಎಂದು ನಾಗಮಂಗಲ ತಾಲ್ಲೂಕು ಸೋಮನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ

**ಚಿಕ್ಕಬಳ್ಳಾಪುರ:** ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ. ಸಿಪೆಟ್ ಸಂಸ್ಥೆಯು ಭಾರತ ಸರ್ಕಾರದ ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದೆ. ಸಂಸ್ಥೆಯು ದೇಶದ ಪಾಲಿಮರ್/ಪೆಟ್ರೋಕೆಮಿಕಲ್ಸ್/ ಪ್ಲಾಸ್ಟಿಕ್ಸ್ ಕೈಗಾರಿಕಾ ವಲಯಕ್ಕೆ ಬೇಕಾದ ಮಾನವ ಸಂಪನ್ಮೂಲಕ್ಕೆ ಶೈಕ್ಷಣಿಕ ತರಬೇತಿ ನೀಡಲಾಗುತ್ತಿದೆ ಮತ್ತು ಕರ್ನಾಟಕದ ವಿದ್ಯಾರ್ಥಿಗಳು ಪಾಲಿಮರ್ ಕೈಗಾರಿಕಾ ವಲಯದಲ್ಲಿ ಜಾಗತಿಕವಾಗಿ ಗುರುತಿಸಲ್ಪಟ್ಟಿದ್ದಾರೆ. 2024-25ನೇ ಸಾಲಿನ ಉದ್ಯೋಗಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ, ಕೋರ್ಸ್ ಗಳ ಪ್ರವೇಶಕ್ಕೆ ಆನ್ ಲೈನ್ /ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (ಆಕಖ) , ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ 3 ಥಿಜಚಿಡಿ ಕೋರ್ಸ್ ಗಳಿಗೆ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.(ವಿಜ್ಞಾನ) ಪರೀಕ್ಷೆಯಲ್ಲಿ ತೇರ್ಗಡೆಯಾದವರು/ಹಾಜರಾದವರು ಆನ್ ಲೈನ್ /ಆಫ್ ಲೈನ್ ಮೂಲಕ ಅರ್ಜಿಯನ್ನು ಮೇ 31 ರೊಳಗೆ ಸಲ್ಲಿಸಬಹುದು. ಮಾಹಿತಿಗಾಗಿ ವೆಬ್‌ಸೈಟ್ ಮೂಲಕ ನೋಂದಣಿ: www.cipet.gov.in ಅನ್ನು ಅಥವಾ ದೂ: 0821-2510618, 9480253024, 9791431827, 9466585669 ಗೆ ಸಂಪರ್ಕಿಸಬಹುದೆಂದು ಸಿಪೆಟ್ ಸಂಸ್ಥೆಯ ನಿರ್ದೇಶಕರು ಆರ್.ಟಿ. ನಾಗರಳ್ಳಿ ತಿಳಿಸಿದ್ದಾರೆ.

# ವಿಧಾನಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ

**ಬೆಂಗಳೂರು:** ಕರ್ನಾಟಕ ವಿಧಾನಸಭೆಯ ಸದಸ್ಯರಿಂದ ವಿಧಾನಪರಿಷತ್ತಿಗೆ ಆಯ್ಕೆಗೊಂಡ ಹನ್ನೊಂದು ಸದಸ್ಯರು ಜೂನ್ 17 ರಂದು ನಿವೃತ್ತರಾಗಲಿರುವುದರಿಂದ ಅವರ ಸ್ಥಾನಗಳನ್ನು ತುಂಬಲು ವಿಧಾನಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆಯನ್ನು ನಡೆಸಲು ಭಾರತದ ಚುನಾವಣಾ ಆಯೋಗವು ನಿರ್ಧರಿಸಿದೆ.

ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸುವ ದಿನಾಂಕ 27 ಮೇ, 2024 ಸೋಮವಾರ, ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ 03 ಜೂನ್, 2024 ಸೋಮವಾರ, ನಾಮಪತ್ರ ಪರಿಶೀಲನೆ ಜೂನ್ 04 ಮಂಗಳವಾರ, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ 06 ಜೂನ್, 2024 ಗುರುವಾರ, ಮತದಾನದ ದಿನಾಂಕ 13 ಜೂನ್ 2024 ಗುರುವಾರ, ಮತದಾನದ ಸಮಯ ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ, ಮತಗಳ ಎಣಿಕೆ 13 ಜೂನ್ 2024 ಗುರುವಾರ ಸಂಜೆ 5 ಗಂಟೆಯಿಂದ, ಚುನಾವಣೆ ಮುಕ್ತಾಯವಾಗುವ ದಿನಾಂಕ 15 ಜೂನ್ 2024 ಶನಿವಾರ.

ಈ ದ್ವೈವಾರ್ಷಿಕ ಚುನಾವಣೆಗೆ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಗಳಾದ ಶ್ರೀಮತಿ ಎಂ.ಕೆ.ವಿಶಾಲಾಕ್ಷಿ ಅವರು ಚುನಾವಣಾಧಿಕಾರಿಯಾಗಿ ಹಾಗೂ ಕರ್ನಾಟಕ ವಿಧಾನಸಭೆಯ ನಿರ್ದೇಶಕರಾದ ಬಿ.ಎಸ್. ಮಹಾಲಿಂಗೇಶ್ ಅವರು ಸಹಾಯಕ ಚುನಾವಣಾಧಿಕಾರಿಯಾಗಿರುತ್ತಾರೆ. ಚುನಾವಣೆಗೆ ಸ್ಪರ್ಧಿಸಲಿಚ್ಚಿಸುವ ಅಭ್ಯರ್ಥಿಗಳು 27 ಮೇ, 2024 ರಿಂದ 3 ಜೂನ್ 2024 ರವರೆಗೆ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿಯವರ ಕಛೇರಿಯಲ್ಲಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, 2 ಜೂನ್ 2024 ರ ಭಾನುವಾರ ಸಾರ್ವತ್ರಿಕ ರಜಾ ದಿನವಾಗಿರುವುದರಿಂದ ಆ ದಿನದಂದು ನಾಮಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ. ಪ್ರತಿಯೊಬ್ಬ ಅಭ್ಯರ್ಥಿಯು ತಮ್ಮ ನಾಮಪತ್ರದ ದಸ್ತಾವೇಜನ್ನು ನಿಗದಿತ ನಮೂನೆ 2ಡಿ ಯಲ್ಲಿ ಸಲ್ಲಿಸಬೇಕು. ಮತ್ತು ಅವರ ಉಮೇದುವಾರಿಕೆಗೆ ಸೂಚಕರಾಗಿ ಕನಿಷ್ಠ ಹತ್ತು ಜನ ಹಾಲಿ ವಿಧಾನಸಭಾ ಸದಸ್ಯರು ಸಹಿ ಮಾಡಿರಬೇಕು. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಾಮಪತ್ರದೊಂದಿಗೆ ರೂ. 5,000/- ಗಳನ್ನು ಹಾಗೂ ಇತರ ಅಭ್ಯರ್ಥಿಗಳು ರೂ. 10,000/- ಗಳನ್ನು ಠೇವಣಿ ಇಡಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಚುನಾವಣಾಧಿಕಾರಿ / ಸಹಾಯಕ ಚುನಾವಣಾಧಿಕಾರಿಯವರನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಸಾವರ್ಕರ್ ನಿಜವಾದ ಮಹಾತ್ಮ

## ರಂಗಕರ್ಮಿ ಸೇತುರಾಂ ಅಭಿಪ್ರಾಯ | ಸಾವರ್ಕರ್ ಸಮಗ್ರ ಸಂಪುಟ-1 ಲೋಕಾರ್ಪಣೆ

**ಬೆಂಗಳೂರು:** ಆತ್ಮದ ಲೆಕ್ಕದಲ್ಲಿ ನೋಡುವುದಾದರೆ ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್ಕರ್ ಅವರನ್ನೇ ನಿಜವಾಗಿಯೂ ಮಹಾತ್ಮ ಎನ್ನಬೇಕಾಗುತ್ತದೆ ಎಂದು ಖ್ಯಾತ ರಂಗಕರ್ಮಿ, ಲೇಖಕ ಎಸ್.ಎನ್. ಸೇತುರಾಂ ಅಭಿಪ್ರಾಯಪಟ್ಟರು.

ಸಾವರ್ಕರ್ ಸಾಹಿತ್ಯ ಸಂಘ ಹಾಗೂ ದಿ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ದಿ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಭಾನುವಾರ ಆಯೋಜನೆಯಾಗಿದ್ದ ಸಾವರ್ಕರ್ ಸಮಗ್ರ ಸಂಪುಟದ-1ರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಅನೇಕರು ಅನೈತಿಕ ಬದುಕು ಬದುಕಿ ತಮ್ಮ ದೇಹದ ಕುರಿತು ಬರೆದುಕೊಂಡಿದ್ದನ್ನೇ ಆತ್ಮಚರಿತ್ರೆ ಎಂದು ಹೇಳಿದರು. ಆದರೆ ಆತ್ಮಕಥೆ ಎನ್ನುವುದು ಸಾವರ್ಕರ್ ಅವರದ್ದು ಮಾತ್ರವೆ ಎನ್ನುವುದು ಈ ಕೃತಿ ಓದಿದ ನಂತರ ತಿಳಿಯಿತು. ಬ್ರಿಟಿಷರೇ ಹುಟ್ಟುಹಾಕಿದ ಕಾಂಗ್ರೆಸ್, ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರನ್ನೇ ದೇಶದ್ರೋಹಿಗಳು ಎಂದು ಹೇಳಿತು. ನಾವು ಅನಾಗರೀಕರು, ಬ್ರಿಟಿಷರು ಬಂದಿದ್ದೇ ನಮ್ಮನ್ನು ನಾಗರೀಕರಾಗಿಸಲು, ಅದಕ್ಕಾಗಿಯೇ ಅವರು ಆಳ್ವಿಕೆ ನಡೆಸುತ್ತಿದ್ದಾರೆ ಎಂದು ನಮ್ಮಲ್ಲೂ ಅನೇಕರು ಹೇಳುತ್ತಿದ್ದರು. ನಮ್ಮತನವನ್ನೇ ಮರೆಯುವ ನಪುಂಸಕತೆಯ ಜತೆಗೆ ಸುಳ್ಳು ಹೇಳುವ ಭಂಡತನವೂ ನಮಗೆ ಬ್ರಿಟಿಷರಿಂದಲೇ ಬಂದಿದೆ. ಬ್ರಿಟನ್ನಿನ ಸಂಸತ್ ಸ್ಥಾನಗಳು ಮಾರಾಟವಾಗುತ್ತವೆ, ಹಸಿವಿನಿಂದ ಜನರು ಸಾಯುತ್ತಿದ್ದಾರೆ, ಅಪರಾಧ ಚಟುವಟಿಕೆಗಳು ಎಷ್ಟು ಸಾಮಾನ್ಯವೆಂದರೆ ಅದರ ಬಗ್ಗೆ ತನಿಖೆಯೇ ನಡೆಯುವುದಿಲ್ಲ ಎಂದು ಸಾವರ್ಕರ್ ಬರೆದಿದ್ದಾರೆ. ಆದರೆ ನಮ್ಮಲ್ಲಿ ಅನೇಕರು ಇಂತಹ ಬ್ರಿಟಿಷರಿಂದ ನ್ಯಾಯವನ್ನು ಅಪೇಕ್ಷಿಸುತ್ತಿದ್ದರು, ಅವರೊಂದಿಗೆ ಮಾತುಕತೆ ನಡೆಸೋಣ ಎಂದು ಕಾಂಗ್ರೆಸ್ ಹೇಳುತ್ತಿತ್ತು. ಇಂತಹ ಜನರಿಂದ ನಮಗೆ ಸ್ವಾತಂತ್ರ್ಯ ಬಂದಿದ್ದಲ್ಲ, ಶಸ್ತ್ರಗಳ ಹೋರಾಟದಿಂದಲೇ ಎನ್ನುವುದನ್ನು ಸಾವರ್ಕರ್ ನಮ್ಮ ಮುಂದಿಟ್ಟರು. ಸ್ವಾತಂತ್ರ್ಯ ಎನ್ನುವದು ಎಲ್ಲ ರೀತಿಯ ಜೀವನ, ಧರ್ಮಾಚರಣೆಗೂ ಮೂಲವಾದದ್ದು ಎನ್ನುವುದು ಈ ಪುಸ್ತಕದಿಂದ ತಿಳಿಯುತ್ತದೆ. ಆತ್ಮದ ಲೆಕ್ಕದಲ್ಲಿ ಹೇಳುವುದಾದರೆ ಸಾವರ್ಕರ್ ಅವರನ್ನು ಮಹಾತ್ಮ ಎನ್ನಬೇಕು. ಸುಳ್ಳು ಹೇಳಿ ಅದನ್ನು ಪ್ರಪಂಚದ ಮುಂದೆ ಒಪ್ಪಿಕೊಂಡೆ, ಮದುವೆ ಆಗಿದ್ದರೂ ಬ್ರಹ್ಮಚರ್ಯ ಅನುಸರಿಸಿದೆ ಎನ್ನುವುದು ದೊಡ್ಡ ವಿಷಯವಲ್ಲ ಎಂದರು. ನಾಗ ಹೆಚ್. ಹುಬ್ಬಿ ಅವರು ಅತ್ಯಂತ ಸರಳವಾಗಿ ಹಾಗೂ ಆಯಾಸವಾಗದೆ ಓದಿಸಿಕೊಂಡುಹೋಗುವಂತೆ ಅನುವಾದ ಮಾಡಿದ್ದಾರೆ ಎಂದು ಶ್ಲಾಘಿಸಿದರು.



ಸಂಪುಟ-1ರ ಪರಿಚಯ ಮಾಡಿಕೊಟ್ಟ ಸಮಗ್ರ ಸಂಪುಟ ಯೋಜನೆಯ ಪ್ರಧಾನ ಸಂಪಾದಕಡಾ. ಜಿ. ಬಿ.ಹರೀಶ, ಸಾವರ್ಕರ್ ಅವರ ಸಾಹಿತ್ಯವನ್ನು ಹಾಳುಗೆಡಹುವ ಸ್ವತಂತ್ರ ಭಾರತದ ಮೊದಲ ಸರ್ಕಾರದ ಎಲ್ಲ ಪ್ರಯತ್ನಗಳ ನಂತರವೂ ಹತ್ತು ಸಂಪುಟಗಳಷ್ಟು ಸಾಹಿತ್ಯ ಉಳಿದುಕೊಂಡಿದೆ. ಸಾವರ್ಕರ್ ಪುಸ್ತಕಗಳನ್ನು ಓದಿದ ಮಕ್ಕಳಾಗಲಿ, ಯಾರೇ ಆಗಲಿ ಧೈರ್ಯವಂತರಾಗುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಸಂಪುಟದಲ್ಲಿ ಸಾವರ್ಕರ್ ತಮ್ಮ ಆತ್ಮಚರಿತ್ರೆಯನ್ನು ಬರೆಯಲು ಮುಂದಾಗಿದ್ದಾರಾದರೂ ತಮ್ಮ ವೈಯಕ್ತಿಕ ಜೀವನದ ಬದಲಿಗೆ ಭಾರತದ ಚರಿತ್ರೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ತಾವು ಯಾವುದೋ ಒಂದು ಕುಟುಂಬದಲ್ಲಿ ಜನಿಸಿದ ವ್ಯಕ್ತಿ ಮಾತ್ರವಲ್ಲ, ವಾಸುದೇವ ಬಲವಂತ ಫಡಕೆ, ಶಿವಾಜಿ ಮಹಾರಾಜರ ವಾರಸಿಕೆಯವರು ಎಂದು ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಂಡಿದ್ದಾರೆ. ನೆಹರೂ, ಗಾಂಧಿ ಅವರಂತೆ ಲೆಕ್ಕಾಚಾರ ಮಾಡಿಕೊಂಡು, ತಮ್ಮ ಜೀವನವನ್ನು ಸುಭದ್ರಗೊಳಿಸಿಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಬಂದವರು ಸಾವರ್ಕರ್ ಅಲ್ಲ. ಡಾ. ಕೇಶವ ಬಲಿರಾಂ ಹೆಡಗೇವಾರ್, ಬಿ.ಎಸ್. ಮೂಂಜೆ ಅವರಂತೆ ತಮ್ಮ ಜೀವನವನ್ನು ಅರ್ಪಿಸಿಕೊಂಡು ಸ್ವಾತಂತ್ರ್ಯಕ್ಕಿಳಿದರು. ದೇಶದ ಶತ್ರುಗಳೇ ನನ್ನ ಶತ್ರುಗಳು ಎನ್ನುವ ಸ್ಪಷ್ಟ ಮೂಲಭೂಮಿಕೆಯ ಆಧಾರದಲ್ಲಿ ಸ್ವದೇಶಿ ಹಾಗೂ ವಿದೇಶಿ ವ್ಯಕ್ತಿಗಳನ್ನು ಸಾವರ್ಕರ್ ನೋಡುವ ರೀತಿಯೇ ವಿಶಿಷ್ಟವಾದದ್ದು. ಜೀವನವನ್ನೇ ಅರ್ಪಿಸಿಕೊಂಡು ಹೋರಾಟ ಮಾಡಿದವರು ಹಾಗೂ ಬಿಡುವಾದಾಗ ಹೋರಾಟ ಮಾಡಿದವರು ಎನ್ನುವಂತೆ ನಾವು ಇಂದು ವರ್ಗೀಕರಣ ಮಾಡಿಕೊಳ್ಳಲೇಬೇಕಿದೆ. ಆಗ ಮಾತ್ರವೇ ಯಾರ-ಯಾರ ವ್ಯಕ್ತಿತ್ವಗಳನ್ನು ಹೇಗೆ ನೋಡಬೇಕು ಎನ್ನುವುದರ ಸ್ಪಷ್ಟತೆಯನ್ನು ಕೊಡುತ್ತದೆ.ನಾಗ ಎಚ್. ಹುಬ್ಬಿ ಅವರು ಅತ್ಯಂತ ಸಮರ್ಥವಾಗಿ, ಸರಳವಾಗಿ ಈ ಕೃತಿಯನ್ನು ಅನುವಾದ ಮಾಡಿದ್ದಾರೆ. ಭಾರತದ ಇತಿಹಾಸ ರಚನೆಯ ಪ್ರಕ್ರಿಯೆಯಲ್ಲಿ ಈ ಹತ್ತೂ ಸಂಪುಟಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ್ ಮಾತನಾಡಿ, ಭಾರತದ ಸಂಸ್ಕೃತಿಯನ್ನು ಮೃತ್ಯುಂಜಯ ಸಂಸ್ಕೃತಿ ಎನ್ನಲಾಗುತ್ತದೆ. ಜಗತ್ತಿನಲ್ಲಿ ಸಾಂಸ್ಕೃತಿಕ ನಿರಂತರತೆ ಇರುವುದು ಇದಕ್ಕೆ ಮಾತ್ರ. ಕಾಲದ ಹೊಡೆತಕ್ಕೆ ಸಿಕ್ಕಿ ಅನೇಕ ಸಂಸ್ಕೃತಿಗಳು ವಿಕೃತಿಯಾಗಿರುತ್ತವೆ ಅಥವಾ ನಾಶವಾಗಿರುತ್ತವೆ. ಭಾರತದಲ್ಲಿ ಮಾತ್ರ ಸಂಸ್ಕೃತಿಯ ಮೂಲಸೆಲೆ ಉಳಿದುಕೊಂಡಿದೆ. ಇಸ್ಲಾಮಿ ಆಕ್ರಮಣಕಾರರ ಭೌತಿಕ ದಾಳಿ ಜತೆಗೆ ಬ್ರಿಟಿಷರ ಬೌದ್ಧಿಕ ದಾಳಿಗೂ ಒಳಗಾದ ಭಾರತ ಉಳಿಯಲು ಪ್ರಮುಖವಾಗಿ ಸೈನಿಕರು, ವಿದ್ವಾಂಸರು ಹಾಗೂ ಸಾಮಾನ್ಯ ಜನರು ಕಾರಣ. ಸಾವರ್ಕರ್ ಅವರು ಯೋಧ ಪರಂಪರೆ ಹಾಗೂ ವಿದ್ವಾಂಸ ಪರಂಪರೆಗೆ ಸೇರಿದವರು. ನಮ್ಮದು ಸೋಲಿನ ಇತಿಹಾಸವಲ್ಲ, ಕ್ಷಾತ್ರದ ಪರಂಪರೆ ಎಂದು ತೋರಿಸಿದವರು ಸಾವರ್ಕರ್. ಸಾವರ್ಕರ್ ವಿಚಾರ ಎಲ್ಲ ಭಾಷೆಗಳಲ್ಲೂ ಪ್ರಕಟವಾಗಬೇಕಿದೆ ಎಂದರು. ಲೇಖಕಿ ಹಾಗೂ ಸಮಗ್ರ ಸಂಪುಟದ ಸಂಪಾದಕ ಮಂಡಳಿ ಸದಸ್ಯೆ ಡಾ. ಎಸ್.ಆರ್. ಲೀಲಾ ಮಾತನಾಡಿ, ಸಾವರ್ಕರ್ ನಮಗೆ ಹೊಸಬರಲ್ಲ. ಶಿವರಾಮು ಅವರು ಆತ್ಮಾಹುತಿ ಕೃತಿ ಬರೆಯುವ ಸಾಕಷ್ಟು ಮುನ್ನವೇ 1924ರಲ್ಲಿ ಕುವೆಂಪು ಅವರು ಸಾವರ್ಕರ್ ಕುರಿತು ಎರಡು ಸಾನೆಟ್ ಬರೆದಿದ್ದರು. ಸಾವರ್ಕರ್ ಅವರು ಭಾರತದ ಅತ್ಯುನ್ನತ ಆತ್ಮ ಎಂದು ಕರೆದಿದ್ದಾರೆ ಎಂದರು.

# ಜೂ. 26 ರಂದು ಪರಿಸರ ಸಾರ್ವಜನಿಕ ಸಭೆ

**ಚಿಕ್ಕಬಳ್ಳಾಪುರ:** ಮೇ॥ ಯರ್ಾಂಕ್ ಸಿಲಿಕಾನ್ ಮತ್ತು ಇಂಡಸ್ಟ್ರೀಸ್ ಪ್ರೈ, ಲಿಮಿಟೆಡ್, ರವರು ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಸೋಮನೇಹಳ್ಳಿ ಹೋಬಳಿಯ ಶಿಂಗನಹಳ್ಳಿ ಗ್ರಾಮದ ಸರ್ವೆ ನಂ 45 ರಲ್ಲಿ 15.18 ಎಕರೆ ಪ್ರದೇಶದಲ್ಲಿ ಕಟ್ಟಡಕಲ್ಲು ಗಣಿಗಾರಿಕೆಯ ಯೋಜನೆಯನ್ನು ಸ್ಥಾಪಿಸಲು ಉದ್ದೇಶಿಸಿರುವುದರಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂನ್ 26 ರಂದು ಬೆಳಿಗ್ಗೆ 11 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಸಭೆಯಲ್ಲಿ ಪಾಲ್ಗೊಂಡು ಅಭಿಪ್ರಾಯ, ಅಹವಾಲುಗಳನ್ನು ತಿಳಿಸಲು ಸುತ್ತಮುತ್ತಲಿನ ಸಾರ್ವಜನಿಕರನ್ನು ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಪರಿಸರ ಅಧಿಕಾರಿ ಟಿ.ಎಂ. ಸಿದ್ದೇಶ್ವರ ಬಾಬು ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಂದಿ ಗ್ರಾಮದ ಯುವತಿಯ ಪತ್ತೆಗೆ ಮನವಿ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ನಂದಿ ಗ್ರಾಮದ ನಿವಾಸಿ ಸಿ. ಶಿಲ್ಪ ಎಂಬ ಯುವತಿ ನಗರದಲ್ಲಿರುವ ವಿಲ್ ಕಾರ್ಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಎಂದಿನಂತೆ ಮೇ 23 ರಂದು ಕೆಲಸಕ್ಕೆ ಹೋದವರು ಕಾಣೆಯಾಗಿರುವ ಬಗ್ಗೆ ದೂರು ದಾಖಲಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಮನವಿ ಮಾಡಲಾಗಿದೆ. 22 ವರ್ಷ ವಯಸ್ಸಿನ ಸಿ.ಶಿಲ್ಪ, ಗೋದಿ ಮೈ ಬಣ್ಣ, ಸಾದರಣ ಮೈ ಕಟ್ಟು, ಗುಂಡು ಮುಖ, 5.2 ಅಡಿ ಎತ್ತರವಿದ್ದು, ಕೆಂಪು ಬಣ್ಣದ ಟಾಪ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ಬಲ ಕೈ ಮೇಲೆ ಟಠಟ ಜಚಿಜ ಎಂಬ ಹಚ್ಚೆ ಗುರುತು ಇದೆ. ಕನ್ನಡ ಮತ್ತು ತೆಲಗು ಮಾತನಾಡುತ್ತಾಳೆ. ನಾಪತ್ತೆಯಾಗಿರು ಬಗ್ಗೆ ಅವರ ತಂದೆ ಚಂದ್ರಾಚಾರಿ ಎಂಬುವರು ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಶಿಲ್ಪ.ಸಿ ಅವರನ್ನು ಪತ್ತೆಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

# ಬರ ಪರಿಹಾರ ರೈತರ ಸಾಲಕ್ಕೆ ಹೊಂದಾಣಿಕೆ ಮಾಡುವಂತಿಲ್ಲ

**ಮಂಡ್ಯ:** ರೈತರಿಗೆ ಸರ್ಕಾರ ಬಿಡುಗಡೆ ಮಾಡುವ ಬರ ಪರಿಹಾರದ ಹಣವನ್ನು ಬ್ಯಾಂಕ್ ಅಧಿಕಾರಿಗಳು ರೈತರ ಯಾವುದೇ ಸಾಲಕ್ಕೆ ಹೊಂದಾಣಿಕೆ ಮಾಡಬಾರದು ಎಂದು ಜಿಲ್ಲಾಧಿಕಾರಿ ಡಾ: ಕುಮಾರ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು.ರೈತರು ತೀವ್ರ ಬರದಿಂದಾಗಿ ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ಬ್ಯಾಂಕುಗಳು ರೈತರ ಬರ ಪರಿಹಾರ ಹಣವನ್ನು ಸಾಲಕ್ಕೆ ಹೊಂದಾಣಿಕೆ ಮಾಡದಂತೆ ಸೂಕ್ತ ನಿರ್ದೇಶನ ನೀಡಲಾಗಿದೆ. ಒಂದು ವೇಳೆ ಸಾಲಕ್ಕೆ ಹೊಂದಣಿಕೆ ಮಾಡಿಕೊಂಡಿದ್ದರೆ ಅದನ್ನು ರೈತರ ಖಾತೆಗೆ ಹಿಂದಿರುಗಿಸಿ. ಈ ಬಗ್ಗೆ ದೂರು ಬರದಂತೆ ನೋಡಿಕೊಳ್ಳಿ ಎಂದರು.

ಕಳೆದ ಸಾಲಿನಲ್ಲಿ ಪ್ರಾಣಿ ದಾಳಿಯಿಂದ ಉಂಟಾದ ಬೆಳೆ ನಷ್ಟ ಕುರಿತಂತೆ 568 ಪ್ರಕರಣಗಳು ವರದಿಯಾಗಿದೆ. ಇವುಗಳಿಗೆ ಪಾವತಿಯಾಗಿರುವ ಪರಿಹಾರ ಕುರಿತಂತೆ ವರದಿ ನೀಡುವಂತೆ ತಿಳಿಸಿದರು.

ಮಳೆ, ಗಾಳಿಯಿಂದ ಮರದ ಕೊಂಬೆಗಳು ವಿದ್ಯುತ್ ಸಂಪರ್ಕಲೈನ್ ಮೇಲೆ ಬೀಳುತ್ತಿದ್ದು, ವಿದ್ಯುತ್ ಅಡಚಣೆ ಉಂಟಾಗುತ್ತಿದೆ ಎಂದು ದೂರುಗಳು ಬರುತ್ತಿತ್ತು, ತೊಂದರೆ ಉಂಟು ಮಾಡುವ ಮರದ ಕೊಂಬೆಗಳನ್ನು ತೆರವುಗೊಳಿಸಿ. ಮಳೆ, ಗಾಳಿಯಿಂದ ವಿದ್ಯುತ್ ಕಂಬಗಳು ಬಿದ್ದಲ್ಲಿ ಅದಷ್ಟು ಬೇಗ 24 ಗಂಟೆಯೊಳಗಾಗಿ ಸರಿಪಡಿಸಿ ಎಂದರು.



ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಉಪ ವಿಭಾಗಾಧಿಕಾರಿ ಮಹೇಶ್, , ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಕೃಷ್ಣಕುಮಾರ್, ಲೀಡ್ ಬ್ಯಾಂಕ್ ಮ್ಯಾನೇಜರ್ ಅರುಣ್ ಕುಮಾರ್, ಅರಣ್ಯ ಇಲಾಖೆಯ ಅಧಿಕಾರಿ ಶಿಲ್ಪ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ರೂಪಶ್ರೀ, ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ ಸುರೇಶ್ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ಅಂಗವಾಗಿ ಆಯೋಜನೆ

# ರಾಜ್ಯಮಟ್ಟದ ಛಾಯಾ ಚಿತ್ರಸ್ಪರ್ಧೆ ವಿಜೇತರು

**ಬೆಂಗಳೂರು:** ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ಅಂಗವಾಗಿ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ಮಾಧ್ಯಮ ಹಾಗೂ ಹವ್ಯಾಸಿ ಛಾಯಾಗ್ರಾಹಕರಿಗಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಛಾಯಾಚಿತ್ರ ಸ್ಪರ್ಧೆಯ ವಿಜೇತರನ್ನು ಇಂದು ಘೋಷಿಸಲಾಗಿದೆ.

ಪ್ರಜಾವಾಣಿ/ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯ ಮಂಗಳೂರು ಛಾಯಾಗ್ರಾಹಕ ಹೆಚ್.ಫಕ್ರುದ್ದೀನ್ ಪ್ರಥಮ, ಬಾಗಲಕೋಟೆಯ ಹಳ್ಳಿ ಸಂದೇಶ ಪತ್ರಿಕೆಯ ಇಂದ್ರಕುಮಾರ್ ಬಿ ದಸ್ತೇನವರ ದ್ವಿತಿಯ, ಮೂಡಬಿದಿರೆಯ ಹವ್ಯಾಸಿ ಛಾಯಾಗ್ರಾಹಕ ಜಿನೇಶ್ ಪ್ರಸಾದ್ ತೃತೀಯ, ಸಮಾಧಾನಕರ ಬಹುಮಾನಕ್ಕೆ ಇಬ್ಬರು ಆಯ್ಕೆಯಾಗಿದ್ದು, ಉಡುಪಿಯ ಉದಯವಾಣಿ ಪತ್ರಿಕೆಯ ಅಸ್ಟ್ರೋ ಮೋಹನ್ ಹಾಗೂ ಬೆಂಗಳೂರಿನ ಸಂಜೆ ಸಮಯ ಪತ್ರಿಕೆಯ ಶ್ರೀಮತಿ ಪೂರ್ಣಿಮ ರವಿ ಮತ್ತು ವಿಶೇಷ ಬಹುಮಾನಕ್ಕೆ ಸಹ ಇಬ್ಬರು ಆಯ್ಕೆಯಾಗಿದ್ದು, ಮೈಸೂರಿನ ವಿಜಯವಾಣಿ ಪತ್ರಿಕೆಯ ಕೆ.ಹೆಚ್ ಚಂದ್ರು, ಹಾಗೂ ಕಲಬುರಗಿಯ ವಿಜಯ ಕರ್ನಾಟಕ ಪತ್ರಿಕೆಯ ಶಿವಶರಣಪ್ಪ ಬೆನ್ನೂರ್ ಅವರು ವಿಜೇತರಾಗಿದ್ದಾರೆ.

ರಾಜ್ಯಮಟ್ಟದ ಈ ಛಾಯಾಚಿತ್ರ ಸ್ಪರ್ಧೆಯ ಆಯ್ಕೆ ಸಮಿತಿಯಲ್ಲಿ ಅಧ್ಯಕ್ಷರಾಗಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಮಾಧ್ಯಮ ವಿಭಾಗದ ವಿಶೇಷ ಅಧಿಕಾರಿ ಎ.ವಿ.ಸೂರ್ಯಸೇನ್, ಐ.ಎಫ್.ಎಸ್, ಸದಸ್ಯರಾಗಿ ರಾಜ್ಯಮಟ್ಟದ ಸ್ವೀಪ್ ಹಿರಿಯ ಸಮಾಲೋಚಕರಾದ ನಿವೃತ್ತ ಐ.ಎ.ಎಸ್ ಅಧಿಕಾರಿ ಪಿ.ಎಸ್.ವಸ್ತ್ರದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಛಾಯಾಚಿತ್ರ ವಿಭಾಗದ ಅಧಿಕಾರಿ ಚಂದ್ರಶೇಖರ್, ನಿವೃತ್ತ ಹಾಗೂ ಹಿರಿಯ ಛಾಯಾಗ್ರಾಹಕರಾದ ವಿಶ್ವನಾಥ್ ಸುವರ್ಣ ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ಹಿರಿಯ ಸಹಾಯಕ ನಿರ್ದೇಶಕರಾದ ಜಡಿಯಪ್ಪ ಗೆದ್ಲಗಟ್ಟಿ ಅವರನ್ನು ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ನೇಮಿಸಲಾಗಿತ್ತು.

**ಬಹುಮಾನಗಳ ವಿವರ**

**ಪ್ರಶಸ್ತಿ ವಿಜೇತರಾದ ಮಂಗಳೂರಿನ ಪ್ರಜಾವಾಣಿ/ಡೆಕ್ಕನ್ ಹೆರಾಲ್ಡ್ನ ಹೆಚ್ ಫಕ್ರುದ್ದೀನ್ ಪ್ರಥಮ ಬಹುಮಾನ ರೂ. 25,000/-, ಬಾಗಲಕೋಟೆಯ ಹಳ್ಳಿ ಸಂದೇಶ ಪತ್ರಿಕೆಯ ಇಂದ್ರಕುಮಾರ್ ಬಿ ದಸ್ತೇನವರ ದ್ವಿತೀಯ ಬಹುಮಾನ ರೂ. 15,000/- ಮೂಡಬಿದಿರೆ ಹವ್ಯಾಸಿ ಛಾಯಾಗ್ರಾಹಕ ಜಿನೇಶ್ ಪ್ರಸಾದ್ ತೃತೀಯ ಬಹುಮಾನ ರೂ. 10,000/-, ಉಡುಪಿಯ ಉದಯವಾಣಿ ಪತ್ರಿಕೆಯ ಅಸ್ಟ್ರೋ ಮೋಹನ್ ಹಾಗೂ ಬೆಂಗಳೂರಿನ ಸಂಜೆ ಸಮಯ ಪತ್ರಿಕೆಯ ಶ್ರೀಮತಿ ಪೂರ್ಣಿಮ ರವಿ ಸಮಾಧಾನಕರ ಬಹುಮಾನ ರೂ. 3000/- ಮತ್ತು ಮೈಸೂರಿನ ವಿಜಯವಾಣಿ ಪತ್ರಿಕೆಯ ಕೆ.ಹೆಚ್ ಚಂದ್ರು, ಹಾಗೂ ಕಲಬುರಗಿಯ ವಿಜಯ ಕರ್ನಾಟಕ ಪತ್ರಿಕೆಯ ಶಿವಶರಣಪ್ಪ ಬೆನ್ನೂರ್ ರೂ. 2500/- ವಿಶೇಷ ಬಹುಮಾನಕ್ಕೆ ಆಯ್ಕೆಯಾಗಿದ್ದಾರೆ.**

ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ಮತದಾನ ಕರ್ನಾಟಕ ರಾಜ್ಯದಲ್ಲಿ ಏಪ್ರಿಲ್ 26 ಮತ್ತು ಮೇ 7 ರಂದು ಎರಡು ಹಂತದಲ್ಲಿ ಜರುಗಿತ್ತು. ಜಗತ್ತಿನ ಅತಿದೊಡ್ಡ ಪ್ರಜಾಪಭುತ್ವ ದೇಶವಾಗಿರುವ ನಮ್ಮ ಭಾರತದಲ್ಲಿ ಚುನಾವಣೆಯನ್ನು 'ಪ್ರಜಾಪ್ರಭುತ್ವದ ಹಬ್ಬ'ದಂತೆ ಆಚರಿಸಲಾಗುತ್ತಿದೆ. ಕಳೆದ ಲೋಕಸಭಾ ಚುನಾವಣೆ ? 2019 ಹಾಗೂ ಸಾರ್ವತ್ರಿಕ ಕರ್ನಾಟಕ ವಿಧಾನಸಭೆ ಚುನಾವಣೆ-2023 ರ ಸಂದರ್ಭದಲ್ಲಿ ಸಹ ಮಾಧ್ಯಮಗಳಲ್ಲಿ ಕಾರ್ಯನಿವರ್ಹಿಸುತ್ತಿರುವ ಮತ್ತು ಹವ್ಯಾಸಿ ಪತ್ರಿಕಾ ಛಾಯಾಗ್ರಾಹಕರಿಗಾಗಿ ಮತದಾನದ ವಿಷಯದ ಬಗ್ಗೆ ರಾಜ್ಯ ಮಟ್ಟದ ಛಾಯಾ ಚಿತ್ರ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಳೆದ ಎರಡು ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಛಾಯಾ ಚಿತ್ರ ಸ್ಪರ್ಧೆಯ ಮೂಲಕ ಚುನಾವಣಾ ಸಂಬಂಧಿತ ಅತ್ಯುತ್ತಮ ಹಾಗೂ ಸಂಗ್ರಹಯೋಗ್ಯ ಛಾಯಾಚಿತ್ರಗಳನ್ನು ಭಾರತ ಚುನಾವಣಾ ಆಯೋಗ ಪ್ರಶಂಸಿಸುವುದರ ಜೊತೆಗೆ ತನ್ನ ವರದಿ ಹಾಗೂ ಪುಸ್ತಕಗಳ ಮುಖಪುಟಗಳಲ್ಲಿ ನಮ್ಮ ರಾಜ್ಯದ ಈ ಛಾಯಾಚಿತ್ರಗಳನ್ನು ಬಳಸಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ನಿಮಿತ್ತ ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅತ್ಯುತ್ತಮ ಛಾಯಾಚಿತ್ರ ತೆಗೆದ ಛಾಯಾಗ್ರಾಹಕರಿಗೆ ಪ್ರಮಾಣ ಪತ್ರ, ಹಾಗೂ ನಗದು ಬಹುಮಾನವನ್ನು ನೀಡಲಾಗುತ್ತದೆ.

ರಾಜ್ಯಮಟ್ಟದ ಈ ಸ್ಪರ್ಧೆಯಲ್ಲಿ ಮಾಧ್ಯಮಗಳಲ್ಲಿ ಕಾರ್ಯ ನಿವರ್ಹಿಸುತ್ತಿರುವ ಮತ್ತು ಹವ್ಯಾಸಿ ಪತ್ರಿಕಾ ಛಾಯಾಗ್ರಾಹಕರು ಸೇರಿ ಒಟ್ಟು 219 ಜನರು ಭಾಗವಹಿಸಿದ್ದರು. ಛಾಯಾಗ್ರಾಹಕರು ತಾವು ತೆಗೆದ ಗರಿಷ್ಠ 5 ಅತ್ಯುತ್ತಮ ಛಾಯಾಚಿತ್ರಗಳನ್ನು ಕಳುಹಿಸಿದ್ದರು. ಪ್ರಶಸ್ತಿಗೆ ಆಯ್ಕೆಯಾದ ಎಲ್ಲರಿಗೂ ಮುಖ್ಯ ಚುನಾವಣಾಧಿಕಾರಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ನರ್ಸರಿಗಳಲ್ಲಿ ಲಭ್ಯವಿರುವ ಸಸಿಗಳ ವಿವರ

**ಬೆಂಗಳೂರು ಗ್ರಾಮಾಂತರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಅಗತ್ಯ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ರೈತರು ತೋಟಗಾರಿಕೆ ಇಲಾಖೆಯ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಲಭ್ಯವಿರುವ ತೆಂಗು, ಮಾವು, ಸೀಬೆ, ನುಗ್ಗೆ, ಕರಿಬೇವು, ನೆಲ್ಲಿ ಮತ್ತು ನಿಂಬೆ ಕಸಿ/ಸಸಿಗಳನ್ನು ತೋಟಗಾರಿಕೆ ಇಲಾಖೆ ನಿಗದಿಪಡಿಸಿದ ದರದಲ್ಲಿ ಖರೀದಿಸಲು ರೈತರಿಗೆ ಅರಿವು ಮೂಡಿಸಲಾಗುತ್ತಿದೆ. 2024 ರ ಎಪ್ರಿಲ್ ಅಂತ್ಯಕ್ಕೆ ತೋಟಗಾರಿಕೆ ಇಲಾಖೆಯಡಿ ಒಟ್ಟಾರೆ ಉಳಿಕೆ ಕಸಿ/ಸಸಿಗಳ ವಿವರ: ದೇವನಹಳ್ಳಿ ತಾಲ್ಲೂಕಿನ ಕನ್ನಮಂಗಲ ನರ್ಸರಿಯಲ್ಲಿ ಮಾವು-4859, ಸೀಬೆ-3524, ನಿಂಬೆ-1900, ತೆಂಗು-9407, ಪಪ್ಪಾಯ-1985 , ನುಗ್ಗೆ-2039, ಕರಿಬೇವು-1702, ಅಡಿಕೆ-5000 ಇತರೆ (ಅಲಂಕಾರಿಕ ಗಿಡಗಳು)-8574 ಒಟ್ಟು-38990 ಗಿಡಗಳಿವೆ. ನಗರೂರು ನರ್ಸರಿಯಲ್ಲಿ ತೆಂಗು-7080, ಇತರೆ (ಅಲಂಕಾರಿಕ ಗಿಡಗಳು)-15600 ಒಟ್ಟು-22680 ಗಿಡಗಳಿವೆ. ದೊಡ್ಡಬಳ್ಳಾಪುರ ನರ್ಸರಿಯಲ್ಲಿ ತೆಂಗು-2604, ಅಡಿಕೆ-750, ನುಗ್ಗೆ-570, ಕರಿಬೇವು-860 ಒಟ್ಟು-4784 ಗಿಡಗಳಿವೆ. ತಿಪ್ಪಗೊಂಡನಹಳ್ಳಿ ನರ್ಸರಿಯಲ್ಲಿ ಮಾವು-7059, ಸೀಬೆ-4200, ಸಪೋಟಾ-1970, ನಿಂಬೆ-4071, ತೆಂಗು-2853, ಅಡಿಕೆ- 15415, ನುಗ್ಗೆ-2515, ಕರಿಬೇವು-2704, ಇತರೆ(ಅಲಂಕಾರಿಕ ಗಿಡಗಳು)- 2500 ಒಟ್ಟು-43287 ಗಿಡಗಳಿವೆ. ಕೆ.ಪೂಜೇನಹಳ್ಳಿ ನರ್ಸರಿಯಲ್ಲಿ ಮಾವು-1135, ಸೀಬೆ-3000, ತೆಂಗು-2000, ಅಡಿಕೆ-2729 ಒಟ್ಟು-8864 ಗಿಡಗಳಿವೆ. ಒಟ್ಟು ಜಿಲ್ಲೆಯಲ್ಲಿ 13053 ಮಾವು, 10724 ಸೀಬೆ, 5971 ನಿಂಬೆ, 23944 ತೆಂಗು,1985 ಪಪ್ಪಾಯ, 23894 ಅಡಿಕೆ, 5124 ನುಗ್ಗೆ, 5266 ಕರಿಬೇವು, 1970 ಸಪೌಟಾ, 26674 ಇತರೆ(ಅಲಂಕಾರಿಕ ಗಿಡಗಳು), ಒಟ್ಟು 1,18,605 ಗಿಡಗಳಿವೆ. ಹೆಚ್ಚಿನ ಮಾಹಿತಿಗಾಗಿ: ಗೋಪಾಲ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾ.ವ)ಬೆಂಗಳೂರು ಗ್ರಾಮಾಂತರ ಜಿಲ್ಲೆ, ತೋಟಗಾರಿಕೆ ಕ್ಷೇತ್ರ: 8660733025, ಶಾಮಣ್ಣ.ಎಸ್.ಎನ್, ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾ.ವ)ಕನ್ನಮಂಗಲ ಮಾವು ಉತ್ಕೃಷ್ಟ ಕೇಂದ್ರ: 7338011518, ವಿಜಯ್ ಕುಮಾರ್ ಸಹಾಯಕ ತೋಟಗಾರಿಕೆ ನಿರ್ದೇಶಕರು(ರಾ.ವ) ತಿಪ್ಪಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ: 9035720179, ಶಿವಾನಂದ್, ತೋಟಗಾರಿಕೆ ಸಹಾಯಕರು ದೊಡ್ಡಬಳ್ಳಾಪುರ ತೋಟಗಾರಿಕೆ ಕ್ಷೇತ್ರ: 9164021289 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತೋಟಗಾರಿಕೆ ಉಪನಿರ್ದೇಶಕರಾದ ಗುಣವಂತ.ಜೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಜೆ ಟಿಪ್ಸ್

## ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ ಕ್ಯಾಟರ್‌ಪಿಲ್ಲರ್

CATERPILLAR®

ಕ್ಯಾಟರ್‌ಪಿಲ್ಲರ್ ಭಾರತದಲ್ಲಿ ಐವತ್ತಕ್ಕೂ ಹೆಚ್ಚು ವರ್ಷಗಳಿಂದ ಉತ್ಪಾದನೆ ನಡೆಸುತ್ತಿದೆ. ಪ್ರಸ್ತುತ ಆಫ್-ಹೈವೇ ಟ್ರಕ್ ಗಳು, ದೊಡ್ಡ ಗಣಿಗಾರಿಕೆ ಟ್ರಕ್ ಗಳು, ಹೈಡ್ರಾಲಿಕ್ ಎಕ್ಸ್‌ವೇಟರ್ ಗಳು, ಮೋಟಾರ್ ಗ್ರೇಡರ್ಸ್, ಸ್ಕಿಡ್ ಸ್ಟೀರ್ ಲೋಡರ್ಸ್, ಬ್ಯಾಕ್ಹೋ ಲೋಡರ್ ಗಳು, ಎಂಜಿನ್ ಗಳು ಮತ್ತು ಜನರೇಟರ್ ಸೆಟ್ ಗಳು ಭಾರತದಲ್ಲಿ ಅವರು ತಮ್ಮ ಸೌಲಭ್ಯಗಳಲ್ಲಿ ಉತ್ಪಾದಿಸುತ್ತಿರುವ ಕೆಲ ಉತ್ಪನ್ನಗಳು. ಅತ್ಯಾಧುನಿಕ ಉತ್ಪಾದನಾ ಸೌಲಭ್ಯಗಳ ಹೊರತಾಗಿ, ಕಂಪನಿಯು ಹೈಟೆಕ್ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಹೊಂದಿದೆ, ಜೊತೆಗೆ ದೇಶಾದ್ಯಂತ ಹಲವಾರು ಜಾಗತಿಕ ಬೆಂಬಲ ಸಂಸ್ಥೆಗಳನ್ನು ಹೊಂದಿದೆ. ಕ್ಯಾಟ್ ಯಂತ್ರಗಳು ಭಾರತದಲ್ಲಿ ಹಲವು ದಶಕಗಳಿಂದ ಹಲವಾರು ಮಹತ್ತರ ಮೂಲಸೌಕರ್ಯ ಯೋಜನೆಗಳ ಭಾಗವಾಗಿದೆ. 1950ರಲ್ಲಿ ಭಾಕ್ರಾ ಅಣೆಕಟ್ಟು ನಿರ್ಮಾಣದಿಂದ ಇತ್ತೀಚೆಗೆ ಉದ್ಘಾಟಿಸಲಾದ ಅಟಲ್ ಟನಲ್ ವರೆಗೆ ಕ್ಯಾಟ್ ಉತ್ಪನ್ನಗಳು ಮತ್ತು ಸೇವೆಗಳನ್ನು ಅದರ ವಿಶ್ವಾಸಾರ್ಹತೆ, ಕಾರ್ಯಾಚರಣೆಯ ದಕ್ಷತೆ ಮತ್ತು ಹಣದ ಮೌಲ್ಯಕ್ಕಾಗಿ ಆದ್ಯತೆ ನೀಡಲಾಗುತ್ತದೆ. ಅಣೆಕಟ್ಟುಗಳಿಂದ ಸೇತುವೆಗಳು, ವಿಮಾನ ನಿಲ್ದಾಣಗಳಿಂದ ಬಂದರುಗಳು, ಹೆದ್ದಾರಿಗಳಿಂದ ಗಣಿಗಾರಿಕೆಯ ತಾಣಗಳವರೆಗೆ ಈ ಉತ್ಪನ್ನ ಮತ್ತು ಪರಿಹಾರಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ

ಈ ಉತ್ಪನ್ನಗಳ ಹೊರತಾಗಿ, ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಸಂಪನ್ಮೂಲಗಳ ಬಳಕೆಯನ್ನು ಹೆಚ್ಚಿಸಲು ಕಂಪನಿಯು ಉತ್ಪಾದನೆಯಲ್ಲಿ ಅನೇಕ ನವೀನ ತಂತ್ರಜ್ಞಾನಗಳು ಮತ್ತು ಪ್ರಕ್ರಿಯೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದು, ನೀರಿನ ಬಳಕೆ ಮತ್ತು ತ್ಯಾಜ್ಯ ನಿರ್ವಹಣೆಯು ಶಕ್ತಿಯ ದಕ್ಷತೆಯನ್ನು ಹೆಚ್ಚಿಸಲು ಅದರ ಕಾರ್ಯಾಚರಣೆಯ ಶ್ರೇಷ್ಠತೆಯ ಕಾರ್ಯತಂತ್ರದ ಅವಿಭಾಜ್ಯ ಭಾಗವಾಗಿದೆ.

3,500ಕ್ಕೂ ಹೆಚ್ಚು ಎಂಜಿನಿಯರ್ ಗಳು ಚೆನ್ನೈನ ಕ್ಯಾಟರ್ಪಿಲ್ಲರ್ ಆರ್ ಅಂಡ್ ಡಿ ಸೆಂಟರ್ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಹಲಸಿನ ಬೀಜದ ಹಲ್ವಾ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ಹಲಸಿನ ಬೀಜ - 30, ಬೆಲ್ಲ - 200 ಗ್ರಾಂ, ತುಪ್ಪ, ದ್ರಾಕ್ಷಿ, ಗೋಡಂಬಿ, ಏಲಕ್ಕಿ - 3

### ಮಾಡುವ ವಿಧಾನ

ಮೊದಲಿಗೆ ಕುಕ್ಕರ್ ನಲ್ಲಿ ಹಲಸಿನ ಬೀಜಕ್ಕೆ ನೀರು ಹಾಕಿ ಬೇಯಲು ಇಡಿ. 8 ವಿಸಿಲ್ ಕೂಗಿಸಿ. ಬಳಿಕ ಬೆಂದ ಹಲಸಿನ ಬೀಜ ತಣಿದ ಬಳಿಕ ಹೊರಗಿನ ಸಿಪ್ಪೆ ತೆಗೆಯಿರಿ.ಇನ್ನೊಂದು ಪಾತ್ರೆಯಲ್ಲಿ ಬೆಲ್ಲ ಹಾಕಿ ಸ್ವಲ್ಪ ನೀರು ಹಾಕಿ ಬೆಲ್ಲ ಕರಗಿಸಿ. ಸಿಪ್ಪೆ ತೆಗೆದ ಹಲಸಿನ ಬೀಜವನ್ನು ಮಿಕ್ಸಿ ಜಾರಿಗೆ ಹಾಕಿ, ಇದಕ್ಕೆ ಕರಗಿಸಿದ ಬೆಲ್ಲವನ್ನೂ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಬಳಿಕ ಒಂದು ಪಾತ್ರೆಗೆ ಅರ್ಧ ಕಪ್ ನಷ್ಟು ತುಪ್ಪ ಹಾಕಿ ರುಬ್ಬಿರುವ ಮಿಶ್ರಣವನ್ನು ಹಾಕಿ, ಸ್ವಲ್ಪ ನೀರು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಮಧ್ಯಮ ಉರಿಯಲ್ಲಿಟ್ಟು ಬೇಯಿಸಿ. ತುಪ್ಪ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ತಳ ಬಿಡುತ್ತಾ ಬರುವಾಗ ತುಪ್ಪದಲ್ಲಿ ಹುರಿದ ದ್ರಾಕ್ಷಿ, ಗೋಡಂಬಿಯನ್ನು ಸೇರಿಸಿ. ಕುಟ್ಟಿ ಪುಡಿ ಮಾಡಿರುವಂತಹ ಏಲಕ್ಕಿಯನ್ನು ಸೇರಿಸಿ ಮಿಕ್ಸ್ ಮಾಡಿ. ಬಳಿಕ ಸರ್ವಿಂಗ್ ಪ್ಲೇಟ್ ಗೆ ತುಪ್ಪ ಸವರಿ ಅದಕ್ಕೆ ಹಲ್ವಾ ಹಾಕಿ ಚೆನ್ನಾಗಿ ಸೆಟ್ ಮಾಡಿ, ಒಂದು ಗಂಟೆಗಳ ಕಾಲ ಹಾಗೆಯೇ ಇಡಿ. ನಂತರ ಬೇಕಾದ ಆಕೃತಿಗೆ ಕಟ್ ಮಾಡಿಕೊಂಡರೆ ಸವಿಯಲು ಹಲಸಿನ ಬೀಜದ ಹಲ್ವಾ ರೆಡಿ.

## 3ಡಿ ಫಾರ್ಮೆಟ್‌ನಲ್ಲಿ ತೆರೆಗೆ ಅಪ್ಪಳಿಸಲಿದೆ ಪ್ರಭಾಸ್ ನಟನೆಯ ಕಲ್ಕಿ 2898 ಎಡಿ



ಟಾಲಿವುಡ್ ರೆಬೆಲ್ ಸ್ಟಾರ್ ಪ್ರಭಾಸ್ ನಟನೆಯ ಕಲ್ಕಿ 2898 ಎಡಿ ಸಿನಿಮಾ ಇದೇ ಜೂನ್ 27ರಂದು ತೆರೆಗೆ ಅಪ್ಪಳಿಸಲು ಸಜ್ಜಾಗಿದೆ. ಸಿನಿಪ್ರೇಕ್ಷಕರಲ್ಲಿ ಭಾರೀ ಕುತೂಹಲ ಕೆರಳಿಸಿರುವ ಸಿನಿಮಾ ಕುರಿತು ಚಿತ್ರತಂಡ ಬುಜ್ಜಿ ಕಾರನ್ನು ಪರಿಚಯಿಸಿದ ರೀತಿ ಕಂಡು, ಅಭಿಮಾನಿಗಳು ಆಶ್ಚರ್ಯಗೊಂಡಿದ್ದಾರೆ.

ಬಾಹುಬಲಿ ಖ್ಯಾತಿಯ ಪ್ರಭಾಸ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ ಕಲ್ಕಿ 2898 ಎಡಿ ಚಿತ್ರೀಕರಣ ಸಂಪೂರ್ಣವಾಗಿ ಮುಕ್ತಾಯಗೊಂಡಿದೆ. ರೆಬೆಲ್ ಸ್ಟಾರ್ ಈ ಚಿತ್ರದಲ್ಲಿ ವಿಭಿನ್ನವಾಗಿ ಕಾಣಿಸಿಕೊಂಡಿದ್ದು, ಅಭಿಮಾನಿಗಳಲ್ಲಿ ಭಾರೀ ಕುತೂಹಲ ಹುಟ್ಟಿಹಾಕಿದೆ.

ಬುಜ್ಜಿ ಕಾರನ್ನು ತಮಗೆ ಬೇಕಾದ ರೀತಿಯಲ್ಲಿ ವಿನ್ಯಾಸಗೊಳಿಸಿರುವ ಕಲ್ಕಿ ಚಿತ್ರತಂಡ, ಈ ಮೂಲಕ ಸಿನಿರಸಿಕರನ್ನು ಮಾತ್ರವಲ್ಲದೇ ಉದ್ಯಮಿಗಳು, ರಾಜಕಾರಣಿಗಳ ಗಮನಸೆಳೆಯುವಲ್ಲಿ ಯಶಸ್ವಿಯಾಗಿದೆ. ಈ ಚಿತ್ರವು ಭಾರತ ಮಾತ್ರವಲ್ಲದೇ ವಿದೇಶದಲ್ಲಿಯೂ ಏಕಕಾಲಕ್ಕೆ ತೆರೆಕಾಣಲಿದೆ. ಸದ್ಯ ಈ ಸಿನಿಮಾ 3ಡಿ ಫಾರ್ಮೆಟ್ನಲ್ಲಿಯೂ ರಿಲೀಸ್ ಆಗಲಿದೆ ಎಂಬ ಮಾಹಿತಿ ಇದೀಗ ಹೊರಬಿದ್ದಿದೆ. ಬಿಗ್ಬಿ ಅಮಿತಾಬ್ ಬಚ್ಚನ್, ದೀಪಿಕಾ ಪಡುಕೋಣೆ, ಕಮಲ್ ಹಾಸನ್ ಮತ್ತು ದಿಶಾ ಪಟಾನಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಾಗ್ ಅಶ್ವಿನ್ ಈ ಚಿತ್ರವನ್ನು ನಿರ್ದೇಶಿಸಿದ್ದು, ವೈಜಯಂತಿ ಮೂವೀಸ್ ಅಡಿಯಲ್ಲಿ ಅಶ್ವಿನಿ ದತ್ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಪ್ರಭಾಸ್ ನಟನೆಯ ಕಲ್ಕಿ 2898 ಎಡಿ ಸಿನಿಮಾ ತಂಡದಿಂದ ಬ್ರೇಕಿಂಗ್ ಸುದ್ದಿ ಹೊರಬಿದ್ದಿದೆ. ಅದೇನೆಂದರೆ, ಈ ವರೆಗೂ ಈ ಸಿನಿಮಾ ಬಿಡುಗಡೆ ಯಾವಾಗ ಎಂಬ ಪ್ರಶ್ನೆ ಎದುರಾಗುತ್ತಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ಬಹುನಿರೀಕ್ಷಿತ ಪ್ಯಾನ್ ಇಂಡಿಯನ್ ಸಿನಿಮಾಗಳಲ್ಲಿ ಒಂದೆನಿಸಿಕೊಂಡಿರುವ ಕಲ್ಕಿ 2898 ಸಿನಿಮಾ ಈಗಾಗಲೇ ಸಾಕಷ್ಟು ನಿರೀಕ್ಷೆಯನ್ನು ಹುಟ್ಟುಹಾಕಿದೆ. ಅದರಲ್ಲೂ ಪ್ರಭಾಸ್ ಸಿನಿಮಾ ಅಂದಮೇಲೆ ಅಲ್ಲಿ ನಿರೀಕ್ಷೆ ಆಕಾಶ ಮುಟ್ಟಿರುತ್ತದೆ.

ನಾಗಅಶ್ವಿನ್ ನಿರ್ದೇಶನದಲ್ಲಿ ಮೂಡಿ ಬಂದಿರುವ ಸೈನ್ಸ್ ಫಿಕ್ಷನ್ ಕಥೆಯುಳ್ಳ ಕಲ್ಕಿ 2898 ಂಆ ಸಿನಿಮಾವನ್ನು ವೈಜಯಂತಿ ಫಿಲಂಸ್ ಅದ್ದೂರಿಯಾಗಿಯೇ ನಿರ್ಮಾಣ ಮಾಡಿದೆ. ಬಹುಕೋಟಿ ವೆಚ್ಚದಲ್ಲಿ ಮೂಡಿಬಂದಿರುವ ಈ ಸಿನಿಮಾದಲ್ಲಿ ಬಹುತಾರಾಗಣವೂ ಹೈಲೈಟ್ ಪ್ರಭಾಸ್ ನಾಯಕನಾದರೆ, ಅಮಿತಾಬ್ ಬಚ್ಚನ್, ದೀಪಿಕಾ ಪಡುಕೋಣೆ, ಕಮಲ್ ಹಾಸನ್, ದಿಶಾ ಪಟಾಣಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇದೀಗ ಇದೇ ಚಿತ್ರದ ಬಿಡುಗಡೆ ದಿನಾಂಕವನ್ನು ಘೋಷಣೆ ಮಾಡಿದೆ ಚಿತ್ರತಂಡ ಈಗ ಈ ವಿಚಾರವನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ನಿರ್ಮಾಣ ಸಂಸ್ಥೆ, ಉತ್ತಮ ನಾಳೆಗಾಗಿ ಎಲ್ಲಾ ಶಕ್ತಿಗಳು ಒಗ್ಗೂಡುತ್ತವೆ ಎಂಬ ಕ್ಯಾಪ್ಷನ್ ನೀಡಿ ಹೊಸ ಪೋಸ್ಟರ್ ಜತೆಗೆ ಬಿಡುಗಡೆ ದಿನಾಂಕವನ್ನು ಘೋಷಣೆ ಮಾಡಿದೆ.



## ಮುಟ್ಟಿನ ಸಮಯದಲ್ಲಿ ಹೊಟ್ಟೆನೋವಿನಿಂದ ಬಳಲುತ್ತೀರಾ?



### ಹೆಲ್ತ್ ಟಿಪ್ಸ್

ಮುಟ್ಟಿನ ಸಮಯದಲ್ಲಿ ಕೆಲವು ಮಹಿಳೆಯರು ಅಸಹನೀಯ ನೋವನ್ನು ಅನುಭವಿಸುತ್ತಾರೆ. ಅಂತಹ ನೋವಿನಿಂದ ಮುಕ್ತಿ ಪಡೆಯಲು ನಾವಿಂದು ಸುಲಭ ಪರಿಹಾರವನ್ನು ನಿಮಗೆ ತಿಳಿಸಿಕೊಡಲಿದ್ದೇವೆ. ಅನೇಕ ಮನೆಮದ್ದುಗಳಿವೆ. ಇದನ್ನು ಬಳಸಿಕೊಂಡು ಪಿರಿಯಡ್ಸ್ ನೋವಿನಿಂದ ಪರಿಹಾರವನ್ನು ಪಡೆಯಬಹುದು. ಔಷಧಿಗಳ ಹೊರತಾಗಿ, ಈ ನೋವಿನಲ್ಲಿ ಸಹಾಯಕವಾಗಬಲ್ಲ ಅನೇಕ ವಿಧದ ಚಹಾಗಳಿವೆ.

**ಶುಂಠಿ ಚಹಾ:** ಶುಂಠಿ ಚಹಾವನ್ನು ಕುಡಿಯುವುದು ರುಚಿಗಷ್ಟೇ ಅಲ್ಲದೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ಇದನ್ನು ಕುಡಿಯುವುದು ವಿಶೇಷವಾಗಿ ಪೀರಿಯಡ್ಸ್ ಸಮಯದಲ್ಲಿ ಬಹಳ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

**ಅರಿಶಿನ ಹಾಲು:** ಶತಮಾನಗಳಿಂದಲೂ ಅರಿಶಿನವನ್ನು ಆರೋಗ್ಯಕ್ಕೆ ಬಹಳ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ. ಅರಿಶಿನವು ಕರ್ಕ್ಯುಮಿನ್ ಎಂಬ ಅಂಶವನ್ನು ಹೊಂದಿದ್ದು, ಇದು ಉರಿಯೂತ ಮತ್ತು ನೋವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಅರಿಶಿನವನ್ನು ಬಿಸಿ ಹಾಲಿನೊಂದಿಗೆ ಬೆರೆಸಿ ಕುಡಿಯುವುದರಿಂದ ಪಿರಿಯಡ್ಸ್ ನೋವಿನಿಂದ ಮುಕ್ತಿ ಪಡೆಯಬಹುದು.

**ಪುದೀನ ಚಹಾ:** ಪುದೀನಾ ಸೆಳೆತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪುದೀನಾ ಚಹಾವನ್ನು ಕುಡಿಯುವುದರಿಂದ ಪಿರಿಯಡ್ಸ್ ನೋವಿನ ಸಮಯದಲ್ಲಿ ಪರಿಹಾರವನ್ನು ಪಡೆಯಬಹುದು. ಇದಲ್ಲದೆ, ಪುದೀನ ಚಹಾವು ತೂಕ ನಷ್ಟಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ.

**ದಾಲ್ಚಿನ್ನಿ ಚಹಾ:** ದಾಲ್ಚಿನ್ನಿ ಸೇವನೆಯು ಆರೋಗ್ಯಕ್ಕೆ ತುಂಬಾ ಒಳ್ಳೆಯದು ಎಂದು ಪರಿಗಣಿಸಲಾಗಿದೆ. ದಾಲ್ಚಿನ್ನಿ ಉರಿಯೂತದ ಮತ್ತು ಆಂಟಿ-ಸ್ಪಾಸ್ಮೊಡಿಕ್ ಗುಣಲಕ್ಷಣಗಳನ್ನು ಹೊಂದಿದೆ, ಇದು ಅವಧಿಯ ನೋವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಗ್ರೀನ್ ಟೀ:** ಇದು ಆಂಟಿ ಆಕ್ಸಿಡೆಂಟ್'ಗಳನ್ನು ಹೊಂದಿರುತ್ತದೆ. ದೇಹದಲ್ಲಿ ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಪೀರಿಯಡ್ಸ್ ನೋವಿನಿಂದ ಪರಿಹಾರವನ್ನು ನೀಡುತ್ತದೆ.

## ಬೆಂಗಳೂರಿನಲ್ಲಿ ಪಿನ್‌ಕೋಡ್ ಆ್ಯಪ್, ಸಿಂಪ್ಲಿ ನಾಮ್ಧಾರಿಸ್ ಜೊತೆ ಪಾಲುದಾರಿಕೆ




ಪಿನ್ಕೋಡ್, ಫೋನ್ಪೇನಿಂದ ಭಾರತದ ಮೊದಲ ಸ್ಟೋರ್-ಕಾಮರ್ಸ್ ಆ?ಯಪ್ ಆಗಿದ್ದು, ಇದು ಸಿಂಪ್ಲಿ ನಾಮ್ಧಾರಿಸ್ನೊಂದಿಗೆ ಪಾಲುದಾರಿಕೆ ಹೊಂದಲಿದೆ ಎಂದು ಘೋಷಿಸಿತು - ಭಾರತದ ಏಕೈಕ 100% ವೆಜ್ ಓಮ್ನಿ ಚಾನೆಲ್ ರೀಟೇಲರ್, ಪಿನ್ಕೋಡ್ ಆ?ಯಪ್ನಲ್ಲಿ ವಿವಿಧ ರೀತಿಯ ದಿನಸಿ, ತಾಜಾ ಹಣ್ಣುಗಳು ಮತ್ತು ತರಕಾರಿಗಳು ಮತ್ತು ಇತರ ಪ್ರೀಮಿಯಂ ಈಒಅಉ ಉತ್ಪನ್ನಗಳನ್ನು ತರಲಿದೆ.

ಪಿನ್ಕೋಡ್ 2 ಮಿಲಿಯನ್ ನೋಂದಾಯಿತ ಬಳಕೆದಾರರನ್ನು ಹೊಂದಿದೆ, ಇಲ್ಲಿಯವರೆಗೆ 1.5 ಮಿಲಿಯನ್ಗಿಂತಲೂ ಹೆಚ್ಚು ಆರ್ಡರ್ಗಳನ್ನು ಪ್ರಕ್ರಿಯೆಗೊಳಿಸಿದ್ದು, ವೇಗವಾಗಿ ಬೆಳೆಯುತ್ತಿದೆ. ವ್ಯಾಪಾರಿಗಳಿಗೆ ಪಿನ್ಕೋಡ್, ಉಚಿತ ಡೆಲಿವರಿ, ಸೀಸನಲ್ ಇನ್ಸೆಂಟಿವ್ಗಳನ್ನು ನೀಡಲಿದ್ದು, ಆರ್ಡರ್ಗಳನ್ನು ಪೂರೈಸುವಲ್ಲಿ ವಿಶ್ವಾಸಾರ್ಹತೆಯನ್ನು ಹೊಂದಿದೆ. ವ್ಯಾಪಾರಿಗಳು ಡಿಜಿಟಲ್ ಮಾರುಕಟ್ಟೆಯಲ್ಲಿ ತಡೆರಹಿತ ಪರಿವರ್ತನೆಯನ್ನು ನಿರೀಕ್ಷಿಸಲು ಅನುವು ಮಾಡಿಕೊಡುತ್ತದೆ. ಪಿನ್ಕೋಡ್, ತರಬೇತಿ, ಮೀಸಲು ಡ್ಯಾಶ್ಬೋರ್ಡ್ಗಳನ್ನು ನೀಡಲಿದ್ದು, ದಿನನಿತ್ಯದ ಕಾರ್ಯಾಚರಣೆಗಳಿಗಾಗಿ ಮೊಬೈಲ್ ಆ?ಯಪ್ನ ಮೂಲಕ ಎಲ್ಲ ರೀತಿಯ ಬೆಂಬಲವನ್ನು ಒದಗಿಸುತ್ತದೆ. ವ್ಯಾಪಾರಿಗಳು ತಮ್ಮ ಡಿಜಿಟಲ್ ಸ್ಟೋರ್ಗಳನ್ನು ತಮ್ಮದೇ ರೀತಿಯಲ್ಲಿ ನಡೆಸಬಹುದೆಂಬ ಖಚಿತತೆಯನ್ನು ನೀಡುತ್ತದೆ. ಗ್ರಾಹಕರು ತಮ್ಮ ಮನೆಗಳಿಂದಲೇ ಅನುಕೂಲಕ್ಕೆ ತಕ್ಕಂತೆ ತಮ್ಮ ಪ್ರದೇಶದಲ್ಲಿನ ಜನಪ್ರಿಯ ಸ್ಟೋರ್ಗಳು ಮತ್ತು ಸೂಪರ್ಮಾರ್ಕೆಟ್ಗಳನ್ನು ಹುಡುಕಲು ಮತ್ತು ಶಾಪಿಂಗ್ ಮಾಡಲು ಅನುಮತಿಸುತ್ತದೆ.

ಪಾಲುದಾರಿಕೆಯ ಕುರಿತು ಮಾತನಾಡಿದ ಪಿನ್ಕೋಡ್ನ ಸಿಇಒ ವಿವೇಕ್ ಲೋಚೆಬ್, ಡಣಠಣ;ಬೆಂಗಳೂರಿನ ಪ್ರಮುಖ ಓಮ್ನಿ ಚಾನೆಲ್ ರೀಟೇಲ್ ವ್ಯಾಪಾರಿಗಳಲ್ಲಿ ಒಂದಾಗಿರುವ ಸಿಂಪ್ಲಿ ನಾಮ್ಧಾರಿಸ್ನೊಂದಿಗೆ ನಮ್ಮ ಪಾಲುದಾರಿಕೆಯನ್ನು ಘೋಷಿಸಲು ನಾವು ಉತ್ಸುಕರಾಗಿದ್ದೇವೆ. ನಾಮ್ಧಾರಿಸ್ ಭಾರತದಲ್ಲಿ ತಾಜಾ ಹಣ್ಣುಗಳು ಮತ್ತು ತರಕಾರಿಗಳ ಅತಿದೊಡ್ಡ ರಫ್ತುದಾರರಲ್ಲಿ ಒಬ್ಬರಾಗಿದ್ದಾರೆ ಮತ್ತು ಈಗ ಅವರ ಉತ್ಪನ್ನಗಳು ಪಿನ್ಕೋಡ್ನಲ್ಲಿಯೂ ದೊರೆಯುತ್ತವೆ. ಪಿನ್ಕೋಡ್ ಇ-ಕಾಮರ್ಸ್ನ ಬೆಳವಣಿಗೆಯ ಜೊತೆಗೆ ಸ್ಥಳೀಯ ವ್ಯವಹಾರಗಳನ್ನು ಅಭಿವೃದ್ಧಿಪಡಿಸಲು ಮತ್ತು ಅವುಗಳನ್ನು ಸಶಕ್ತಗೊಳಿಸಲು ಕಾರ್ಯನಿರ್ವಹಿಸುತ್ತಿದೆ. ನಮ್ಮೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ, ಆನ್ಲೈನ್ ಬೇಡಿಕೆಯನ್ನು ಹೆಚ್ಚಿಸಲು ನಮ್ಮ ವ್ಯಾಪಕವಾದ ನೆಟ್ವರ್ಕ್ ಅನ್ನು ನಿಯಂತ್ರಿಸುವಾಗ ಆನ್ಲೈನ್ ಆಗಲು ಅಗತ್ಯವಿರುವ ಎಲ್ಲ ಪರಿಣತಿಯನ್ನು ನಾವು ಅವರಿಗೆ ಒದಗಿಸುತ್ತೇವೆ. ಇದರಿಂದ ವ್ಯಾಪಾರಿಗಳು ತಮ್ಮ ಸ್ಟೋರ್ಗಳನ್ನು ತಮ್ಮಿಷ್ಟದಂತೆ ಡಿಜಿಟಲೈಸ್ ಮಾಡಬಹುದು ಎಂದು ಹೇಳಿದರು. ಸಿಂಪ್ಲಿ ನಾಮ್ಧಾರಿಸ್ ಸಿಇಒ ಗುರುಮುಖ್ ಸಿಂಗ್ ರೂಪ್ರಾ ಮಾತನಾಡಿ, ಪಿನ್ಕೋಡ್ನೊಂದಿಗಿನ ನಮ್ಮ

ಪಾಲುದಾರಿಕೆಯು ಹೆಚ್ಚಿನ ಆನ್ಲೈನ್ ಗ್ರಾಹಕರನ್ನು ತಲುಪಲು ನಮಗೆ ಸಾಧ್ಯತೆಗಳನ್ನು ತೆರೆಯುತ್ತದೆ. ಇ-ಕಾಮರ್ಸ್ ಪ್ಲಾಟ್ಫಾರ್ಮ್ಗಳು ಅವರು ನೀಡುವ ಅನುಕೂಲದಿಂದಾಗಿ ಗ್ರಾಹಕರ ನೆಲೆಯಲ್ಲಿ ಹೆಚ್ಚು ಜನಪ್ರಿಯವಾಗುತ್ತಿವೆ. ನಮ್ಮದೇ ಇಕಾಮರ್ಸ್ ಪ್ಲಾಟ್ಫಾರ್ಮ್ ಜೊತೆಗೆ, ತಾಜಾ ಹಣ್ಣು ಮತ್ತು ತರಕಾರಿಗಳು, ಸ್ಟೇಪಲ್ಸ್, ಡೈರಿ, FMCGಮತ್ತು ಹೆಚ್ಚಿನವುಗಳನ್ನು ಒಳಗೊಂಡಂತೆ 5000ಕ್ಕೂ ಹೆಚ್ಚು ಉತ್ಪನ್ನಗಳ ನಮ್ಮ ವ್ಯಾಪಕ ಕ್ಯಾಟಲಾಗ್ಗೆ ಗ್ರಾಹಕರು ಪ್ರವೇಶವನ್ನು ಪಡೆಯುತ್ತಾರೆ. ಈ ಮೂಲಕ ಪಿನ್ಕೋಡ್ ಆಪ್, ಸಿಂಪ್ಲಿ ನಾಮ್ಧಾರಿಸ್ಗೆ ಆನ್ಲೈನ್ ಆರ್ಡರ್ಗಳನ್ನು ಹೆಚ್ಚಿಸುತ್ತದೆ'' ಎಂದು ಅಭಿಪ್ರಾಯಪಟ್ಟರು.

## 'ಆರೋಗ್ಯ'ದ ಜೊತೆ ಸೌಂದರ್ಯ ಹೆಚ್ಚಿಸಲಿದೆ ಈ ಎಲೆಗಳು

### ಬ್ಯೂಟಿ ಟಿಪ್ಸ್



ಮೊಡವೆ, ಕಲೆಗಳನ್ನು ಹೋಗಲಾಡಿಸಿ ಚರ್ಮದ ಅಂದವನ್ನು ಹೆಚ್ಚಿಸಲು ಹೆಚ್ಚಿನ ಮಂದಿ ರಾಸಾಯನಿಕ ಬೆರೆಸಿದ ಉತ್ಪನ್ನ ಬಳಸುತ್ತಾರೆ. ಇಂತಹ ಸೌಂದರ್ಯ ವರ್ಧಕಗಳಿಂದ ಕೆಲವರಿಗೆ ಅಲರ್ಜಿ ಉಂಟಾಗುತ್ತದೆ. ಹಾಗಾಗಿ ಇವುಗಳ ಬದಲು ನಮ್ಮ ಸುತ್ತಮುತ್ತಲೇ ಇರುವ ಕೆಲವು ಎಲೆಗಳನ್ನು ಬಳಸಿ ಸೌಂದರ್ಯವನ್ನು ಕಾಪಾಡಿಕೊಳ್ಳಬಹುದು.ಈ ಎಲೆಗಳನ್ನು ಸಾಮಾನ್ಯವಾಗಿ ಅಡುಗೆಗೂ ಬಳಸುತ್ತಾರೆ. ಇದು ಆರೋಗ್ಯ ಮತ್ತು ಸೌಂದರ್ಯ ಎರಡನ್ನೂ ಕಾಪಾಡುತ್ತದೆ. ಜೊತೆಗೆ ಇದನ್ನು ಮುಖ, ಚರ್ಮಕ್ಕೆ ಹಚ್ಚುವುದರಿಂದ ಯಾವುದೇ ಸೈಡ್ ಎಫೆಕ್ಟ್ ಇಲ್ಲದೇ ಚರ್ಮದ ಮೊಡವೆ, ಕಲೆ, ಸುಕ್ಕುಗಳನ್ನು ತೆಗೆಯಬಹುದು.

**ಮೆಂತ್ಯದ ಎಲೆ:** ಮೆಂತ್ಯದ ಎಲೆಗಳನ್ನು ಮುಖಕ್ಕೆ ಹಚ್ಚುವುದರಿಂದ ಮುಖದ ಮೊಡವೆ, ಕಲೆಗಳನ್ನು ಮಾಯವಾಗಿ ಗ್ಲೋ ಹೆಚ್ಚುತ್ತದೆ. ಇದಕ್ಕೆ ನೀವು ಮೆಂತ್ಯದ ಎಲೆಯನ್ನು ಪೇಸ್ಟ್ ಮಾಡಿ ಅದಕ್ಕೆ 2 ಚಮಚ ಜೇನುತುಪ್ಪ ಬೆರೆಸಿ ಮುಖಕ್ಕೆ ಹಚ್ಚಿ. 20 ನಿಮಿಷದ ನಂತರ ಸ್ವಚ್ಛ ನೀರಿನಲ್ಲಿ ಮುಖ ತೊಳೆಯಿರಿ.

**ಪುದೀನ ಎಲೆ:** ಪುದೀನ ಎಲೆಗಳನ್ನು ನೀವು ಮುಖದ ಅಂದವನ್ನು ಹೆಚ್ಚಿಸಲು ಬಳಸಬಹುದು. ಇದಕ್ಕಾಗಿ ನೀವು ಪುದೀನ ಪೇಸ್ಟ್ ಮಾಡಿ ಅದಕ್ಕೆ ಸೌತೆಕಾಯಿ ಮತ್ತು ಜೇನುತುಪ್ಪ ಬೆರೆಸಿ ಮುಖಕ್ಕೆ ಹಚ್ಚಿ. 20 ನಿಮಿಷದ ನಂತರ ಸ್ವಚ್ಛ ನೀರಿನಲ್ಲಿ ಮುಖ ತೊಳೆಯಿರಿ.

**ತುಳಸಿ ಎಲೆ:** ತುಳಸಿ ಎಲೆಯೂ ಸೌಂದರ್ಯವರ್ಧಕವಾಗಿದೆ. ಇದಕ್ಕೆ ನೀವು ತುಳಸಿಯ ಎಲೆಗಳನ್ನು ಪೇಸ್ಟ್ ಮಾಡಿಕೊಳ್ಳಿ. ನಂತರ ಇದಕ್ಕೆ ನಿಂಬೆರಸದ ಕೆಲವು ಹನಿಗಳನ್ನು ಹಾಕಿ ಮುಖಕ್ಕೆ ಹಚ್ಚಿ. 20 ನಿಮಿಷದ ನಂತರ ಸ್ವಚ್ಛ ನೀರಿನಲ್ಲಿ ಮುಖ ತೊಳೆಯಿರಿ.

**ಕರಿಬೇವಿನ ಎಲೆ:** ಕರಿಬೇವಿನ ಎಲೆಗಳನ್ನು ನೀವು ಮುಖದ ಅಂದವನ್ನು ಹೆಚ್ಚಿಸಲು ಬಳಸಬಹುದು. ಇದಕ್ಕಾಗಿ ನೀವು ಕರಿಬೇವಿನ ಎಲೆಯನ್ನು ಪೇಸ್ಟ್ ಮಾಡಿ ಅದಕ್ಕೆ ಸ್ವಲ್ಪ ಮುಲ್ತಾನಿ ಮಿಟ್ಟಿ ಮತ್ತು ಒಂದು ಚಮಚ ಜೇನುತುಪ್ಪ ಬೆರೆಸಿ ಮುಖಕ್ಕೆ ಹಚ್ಚಿ. 20 ನಿಮಿಷದ ನಂತರ ಸ್ವಚ್ಛ ನೀರಿನಲ್ಲಿ ಮುಖ ತೊಳೆಯಿರಿ.

**ಕೊತ್ತಂಬರಿ ಎಲೆ:** ಕೊತ್ತಂಬರಿ ಎಲೆ ಕೂಡ ಚರ್ಮದ ಅಂದವನ್ನು ಹೆಚ್ಚಿಸಲು ತುಂಬ ಸಹಕಾರಿಯಾಗಿದೆ. ಇದಕ್ಕೆ ಕೊತ್ತಂಬರಿ ಎಲೆಗಳನ್ನು ಪೇಸ್ಟ್ ಮಾಡಿಕೊಳ್ಳಿ. ನಂತರ ಅದಕ್ಕೆ ಒಂದು ಚಮಚ ನಿಂಬೆರಸ ಹಾಕಿ ಮುಖಕ್ಕೆ ಹಚ್ಚಿಕೊಳ್ಳಿ. 20 ನಿಮಿಷದ ನಂತರ ಸ್ವಚ್ಛ ನೀರಿನಲ್ಲಿ ಮುಖ ತೊಳೆಯಿರಿ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ಪರಸ್ಥಳ ವಾಸ, ಅಧಿಕ ಧನವ್ಯಯ, ದಾಯಾದಿ ಕಲಹ, ಮನಕ್ಲೇಶ, ವ್ಯಾಸಂಗದಲ್ಲಿ ಮುನ್ನಡೆ.

**ವೃಷಭ:** ಪರರಿಂದ ಸಹಾಯ, ಋಣಭಾದೆ, ಮನಸ್ಸಿನಲ್ಲಿ ಭಯಭೀತಿ, ಯತ್ನ ಕಾರ್ಯದಲ್ಲಿ ವಿಳಂಬ.

**ಮಿಥುನ:** ಸ್ಥಿರಸ್ತಿ ಸಂಪಾದನೆ, ಶತ್ರುಗಳ ನಾಶ, ಉದ್ಯೋಗದಲ್ಲಿ ಬಡ್ತಿ, ವ್ಯಾಪಾರದಲ್ಲಿ ಲಾಭ.

**ಕಟಕ:** ದಾನ ಧರ್ಮದಲ್ಲಿ ಆಸಕ್ತಿ, ಕುಟುಂಬ ಸೌಖ್ಯ, ಕೈ ಹಾಕಿದ ಕೆಲಸಗಳಲ್ಲಿ ಜಯ, ವಿದೇಶ ಪ್ರಯಾಣ.

**ಸಿಂಹ:** ಋಣ ಭಾದೆ ಹೆಚ್ಚಾಗುತ್ತದೆ, ವಿದ್ಯಾಭ್ಯಾಸದಲಿ ತೊಂದರೆ, ಬಂಧು ಮಿತ್ರರಲ್ಲಿ ಕಲಹ, ನೀಚ ಜನರಿಂದ ದೂರವಿರಿ.

**ಕನ್ಯಾ:** ವ್ಯವಹಾರದಲ್ಲಿ ಅಧಿಕ ಲಾಭ, ತಾಳ್ಮೆಯಿಂದ ವರ್ತಿಸಿ, ದಾಂಪತ್ಯದಲ್ಲಿ ಕಿರಿಕಿರಿ.

**ತುಲಾ:** ಕೆಲಸವನ್ನು ತಾಳ್ಮೆಯಿಂದ ನಿಭಾಯಿಸಿ, ದ್ರವ್ಯ ಲಾಭ, ವಿನಾಕಾರಣ ನಿಷ್ಠುರ, ಗೆಳೆಯರಿಗೆ ಸಹಾಯ ಮಾಡುವಿರಿ.

**ವೃಶ್ಚಿಕ:** ಹೊಸ ವ್ಯಕ್ತಿಗಳ ಪರಿಚಯ, ದೇವತಾ ಕಾರ್ಯಗಳಲ್ಲಿ ಭಾಗಿ, ಶುಭದಿನ, ಕೆಲಸ ಕಾರ್ಯಗಳಲ್ಲಿ ಜಯ.

**ಧನಸ್ಸು:** ಇತರರ ಭಾವನೆಗಳಿಗೆ ಸ್ಪಂದಿಸುವಿರಿ, ನಿರೀಕ್ಷಿತ ಆದಾಯ, ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶ್ರದ್ಧೆ.

**ಮಕರ:** ನಾನಾ ರೀತಿಯ ಸಮಸ್ಯೆ, ಅಶಾಂತಿ, ವಿದ್ಯಾಭಿವೃದ್ಧಿ, ಚಂಚಲ ಮನಸ್ಸು, ಮಿತ್ರರಿಂದ ಸಹಾಯ, ಅಧಿಕ ತಿರುಗಾಟ.

**ಕುಂಭ:** ಕುಟುಂಬದಲ್ಲಿ ಪ್ರೀತಿ, ವಾಹನ ಖರೀದಿ, ಅನ್ಯ ಜನರಲ್ಲಿ ವೈಮನಸ್ಸು, ಚಂಚಲ ಮನಸ್ಸು.

**ಮೀನ:** ದೈವಿಕ ಚಿಂತನೆ, ಭಯಭೀತಿ ನಿವಾರಣೆ, ಉನ್ನತ ಸ್ಥಾನಮಾನ, ಭಾಗ್ಯ ವೃದ್ಧಿ, ಪರರ ಧನ ಪ್ರಾಪ್ತಿ.

## ವಿಶ್ವ ಹಸಿವು ದಿನ




ವಿಶ್ವ ಹಸಿವು ದಿನವನ್ನು ಪ್ರತಿ ವರ್ಷ ಮೇ 28 ರಂದು ಜಾಗತಿಕವಾಗಿ ಆಚರಿಸಲಾಗುತ್ತದೆ. ದಿ ಹಂಗರ್ ಪ್ರಾಜೆಕ್ಟ್ ಎಂಬ ಲಾಭರಹಿತ ಸಂಸ್ಥೆಯಿಂದ ರಚಿಸಲ್ಪಟ್ಟ ಈ ಉಪಕ್ರಮವು ಪ್ರಪಂಚದ ಹಸಿವನ್ನು ಕೊನೆಗೊಳಿಸಲು ಪ್ರಯತ್ನಿಸುತ್ತದೆ. ಪ್ರಪಂಚದ ಹಸಿವು ಬಹಳ ಹಿಂದಿನಿಂದಲೂ ಇರುವ ಸಮಸ್ಯೆಯಾಗಿದೆ. ಹಸಿವು ಒಂದು ತೀವ್ರವಾದ ಸ್ಥಿತಿಯಾಗಿದ್ದು, ದೇಹವು ದೀರ್ಘಕಾಲದವರೆಗೆ ಆಹಾರದ ಕೊರತೆಯನ್ನು ಹೊಂದಿದೆ. ಕಡಿಮೆ ಆದಾಯ, ಬರ, ಬರ, ಮತ್ತು ರಾಜಕೀಯ ಬಿಕ್ಕಟ್ಟುಗಳು ಸೇರಿದಂತೆ ಪ್ರಪಂಚದಾದ್ಯಂತ ಹಸಿವಿಗೆ ಹಲವಾರು ಕಾರಣಗಳಿವೆ. ಸಂಸ್ಥೆಯ ಪ್ರಕಾರ, ಸುಮಾರು 820 ಮಿಲಿಯನ್ ಜನರು ದೀರ್ಘಕಾಲದ ಹಸಿವಿನ ಭಯದಿಂದ ಬಳಲುತ್ತಿದ್ದಾರೆ. ಹಸಿದವರಿಗೆ ಆಹಾರ ನೀಡುವುದು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳುವ ಮತ್ತು ಪ್ರಶಂಸಿಸಬಹುದಾದ ಒಂದು ಉಪಕ್ರಮವಾಗಿದೆ. ಪ್ರಪಂಚದ ಹಸಿವನ್ನು ಕೊನೆಗೊಳಿಸುವುದು ನಾವೆಲ್ಲರೂ ಬಯಸುವ ವಿಷಯ. ಕಾರಣವು ಜೀವಗಳನ್ನು ಉಳಿಸಲು ಸಹಾಯ ಮಾಡುತ್ತದೆ ಮತ್ತು ಜನರಿಗೆ ಹೆಚ್ಚು ಅಗತ್ಯವಿರುವಾಗ ಭರವಸೆ ಮತ್ತು ಘನತೆಯನ್ನು ಪುನಃಸ್ಥಾಪಿಸುತ್ತದೆ. ವಿಶ್ವ ಹಸಿವಿನ ದಿನದ ಇತಿಹಾಸ ದಿ ಹಂಗರ್ ಪ್ರಾಜೆಕ್ಟ್‌ನಿಂದ 2011 ರಲ್ಲಿ ವಿಶ್ವ ಹಸಿವು ದಿನವನ್ನು ಸ್ಥಾಪಿಸಲಾಯಿತು. ಪ್ರಪಂಚದ ಹಸಿವು ಕೇವಲ ಕೆಲವು ಊಟಗಳನ್ನು ಹಂಚಿಕೊಳ್ಳುವ ಮೂಲಕ ಪರಿಹರಿಸಲಾಗುವುದಿಲ್ಲ. ಸಮರ್ಥನೀಯ ಪರಿಹಾರವನ್ನು ರಚಿಸಲು, ಸಮಸ್ಯೆಯನ್ನು ಮೂಲ ಕಾರಣದಿಂದ ನಿಭಾಯಿಸಬೇಕು. ದೇಶ ಮತ್ತು ಪರಿಸ್ಥಿತಿಗೆ ಅನುಗುಣವಾಗಿ, ಹಸಿವಿನಿಂದ ಜನರನ್ನು ನಿವಾರಿಸಲು ಸಹಾಯ ಮಾಡಲು ಉಪಕ್ರಮಗಳನ್ನು ಅಳವಡಿಸಲಾಗಿದೆ. ಆಹಾರ ತಂತ್ರಜ್ಞಾನದಲ್ಲಿನ ಸುಧಾರಣೆಗಳು ಪ್ರಪಂಚದಾದ್ಯಂತ ಹಸಿವನ್ನು ಕಡಿಮೆ ಮಾಡಲು ಸಹಾಯ ಮಾಡಿದೆ. ಆಹಾರವನ್ನು ದೀರ್ಘಕಾಲದವರೆಗೆ ಸಂರಕ್ಷಿಸಲು ಸಾಧ್ಯವಾಗುವುದರಿಂದ ಆಹಾರ ಪೂರೈಕೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಅಂತಹ ಒಂದು ಉದಾಹರಣೆಯೆಂದರೆ ಶೈತ್ಯೀಕರಣ. ಆಲಿವರ್ ಇವಾನ್ಸ್ 1805 ರಲ್ಲಿ ಮೊದಲ ಶೈತ್ಯೀಕರಣ ಯಂತ್ರವನ್ನು ಕಂಡುಹಿಡಿದನು. ಶೈತ್ಯೀಕರಣದ ಕಾರಣ, ಮಾಂಸವನ್ನು ಕೆಡದಂತೆ ಹೆಚ್ಚು ದೂರಕ್ಕೆ ಸಾಗಿಸಬಹುದು. ಮನೆಯಲ್ಲಿ ಆಹಾರವನ್ನು ಸಂರಕ್ಷಿಸಲು ಬಳಸುವ ರೆಫ್ರಿಜರೇಟರ್‌ಗಳನ್ನು 1913 ರಲ್ಲಿ ಫ್ರೆಡ್ ಡಬ್ಲ್ಯೂ. ವೋಲ್ಫ್ ಕಂಡುಹಿಡಿದರು. ಓವನ್‌ಗಳು ಸಹ ಸಹಾಯ ಮಾಡಿದವು. 1891 ರಲ್ಲಿ, ಮೊದಲ ಎಲೆಕ್ಟ್ರಿಕ್ ಓವನ್ ಅನ್ನು ಯುನೈಟೆಡ್ ಸ್ಟೇಟ್ಸ್ನಲ್ಲಿ ಮಾರಾಟ ಮಾಡಲಾಯಿತು. ಅವುಗಳನ್ನು ಮೊದಲು 1893 ರಲ್ಲಿ ಬ್ರಿಟನ್‌ನಲ್ಲಿ ಮಾರಾಟ ಮಾಡಲಾಯಿತು.

ಸಂಜೆ ಮುಗಿಲು
ಮಂಗಳವಾರ
28.5.2024



# ಸುನಾಕ್‌ಗೆ ಭಾರಿ ಆಘಾತ: 78 ಸಂಸದರ ಸಾಮೂಹಿಕ ರಾಜೀನಾಮೆ



**ಬ್ರಿಟನ್:** ಬ್ರಿಟನ್‌ನ ಸಾರ್ವತ್ರಿಕ ಚುನಾವಣೆಯನ್ನು ಜುಲೈ 4ರಂದು ನಡೆಸುವ ನಿರ್ಧಾರವನ್ನು ಪ್ರಧಾನಿ ರಿಷಿ ಸುನಾಕ್ ಪ್ರಕಟಿಸಿದ ಬೆನ್ನಲ್ಲೇ, ಸ್ವಪಕ್ಷೀಯರಿಂದಲೇ ಭಾರಿ ಆಘಾತ ಎದುರಿಸಿದ್ದಾರೆ. ಮೊದಲ ವಾರಾಂತ್ಯ ಪ್ರಚಾರದಿಂದ ಒಂದು ದಿನ ದೂರ ಉಳಿಯಲು ನಿರ್ಧರಿಸಿ, ತಮ್ಮ ಆಪ್ತ ಸಹೆಗಾರರ ಜತೆ ಸುನಾಕ್ ವಾರಾಂತ್ಯ ಕಳೆದಿದ್ದಾರೆ.

ತಮ್ಮ ಆಪ್ತರು ಹಾಗೂ ಕುಟುಂಬದ ಸದಸ್ಯರೊಂದಿಗೆ ವಿಹಾರಕ್ಕೆ ತೆರಳಿರುವ 44 ವರ್ಷದ ಸುನಾಕ್ಗೆ ಕನ್ಸರ್ವೇಟಿವ್ ಪಾರ್ಟಿಯ 78 ಸಂಸದರ ಸಾಮೂಹಿಕ ನಿರ್ಗಮನ ಭಾರೀ ಆಘಾತ ನೀಡಿದೆ.

ಮುಂಚೂಣಿ ಟೋರಿ ಮುಖಂಡರು ಹಾಗೂ ಸಂಪುಟ ಸಹೋದ್ಯೋಗಿಗಳಾದ ಮೈಕೆಲ್ ಗೋವ್ ಮತ್ತು ಆಯಂಡ್ರಿಯಾ ಲೀಡ್ಸಮ್ ಮುಂದಿನ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಿಲ್ಲ ಎಂದು ಪ್ರಕಟಿಸಿದ್ದಾರೆ.ಈ ಮೂಲಕ ಪಕ್ಷದ ಸದಸ್ಯತ್ವ ತೊರೆದ ಸಂಸದರ ಸಂಖ್ಯೆ 78ಕ್ಕೇರಿದೆ.

ಗೋವ್ ತಮ್ಮ ರಾಜೀನಾಮೆ ಪತ್ರವನ್ನು ಶುಕ್ರವಾರ ಸಂಜೆ ಜಾಲತಾಣಗಳಲ್ಲಿ ಬಿಡುಗಡೆ ಮಾಡಿದ್ದು, ದೇಶಾದ್ಯಂತ ಪ್ರಸ್ತುತ ಇರುವ ಟೋರಿಗಳಿಗೆ ಪ್ರಬಲ ಸವಾಲು ಎದುರಾಗಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ. ಸುನಾಕ್ ಸಂಪುಟದಲ್ಲಿ ವಸತಿ ಸಚಿವರಾಗಿದ್ದ ಲೀಡ್ಸಮ್ ಕೂಡಾ ಸುನಾಕ್ ಅವರಿಗೆ ಬರೆದ ಪತ್ರದ ಪ್ರತಿಯನ್ನು ಬಿಡುಗಡೆ ಮಾಡಿದ್ದಾರೆ. ಮುಂದಿನ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

# ಗಾಝಾದ ರಫಾ ಪಟ್ಟಣದ ಮೇಲೆ ಇಸ್ರೇಲ್ ವಾಯು ದಾಳಿ



**ಗಾಝಾ:** ಯುದ್ಧಪೀಡಿತ ಗಾಝಾದ ರಫಾ ಪಟ್ಟಣದ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 35 ಮಂದಿ ಹತ್ಯೆಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಗಾಝಾದಲ್ಲಿ ಸ್ಥಳಾಂತರಿತ ನಾಗರಿಕರಿಗಾಗಿ ನಿರ್ಮಿಸಿದ್ದ ತಾತ್ಕಾಲಿಕ ಡೇರೆಯ ಮೇಲೆ ಈ ದಾಳಿ ನಡೆದಿದೆ. ಹೊತ್ತಿ ಉರಿಯುತ್ತಿರುವ ಅವಶೇಷಗಳಡಿ ಹಲವು ಮಂದಿ ಸಿಕ್ಕಿಹಾಕಿಕೊಂಡಿದ್ದಾರೆ. ಹತ್ತಾರು ಮಂದಿ ಗಾಯಗೊಂಡಿದ್ದು, ಮೃತಪಟ್ಟವರಲ್ಲಿ ಬಹುತೇಕ ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ ಎಂದು ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ರಫಾ ದಲ್ಲಿ ಮಿಲಿಟರಿ ದಾಳಿಯನ್ನು ತಕ್ಷಣ ಸ್ಥಗಿತಗೊಳಿಸುವಂತೆ ಅಂತಾರಾಷ್ಟ್ರೀಯ ನ್ಯಾಯಾಲಯ ಆದೇಶ ನೀಡಿದ ಎರಡು ದಿನಗಳಲ್ಲೇ ಇಸ್ರೇಲ್ ನ ಈ ಅಮಾನವೀಯ ದಾಳಿ ನಡೆದಿದೆ. ಇಸ್ರೇಲ್ ದಾಳಿ ಆರಂಭಕ್ಕೆ ಮುನ್ನ ಗಾಝಾದ ಅರ್ಧದಷ್ಟು ಜನ ಈ ಭಾಗದಲ್ಲಿ ಆಸರೆ ಪಡೆದಿದ್ದರು

ಈ ಅತ್ಯಂತ ಭಯಾನಕ ದಾಳಿಯ ದೃಶ್ಯಾವಳಿಗಳು, ಭಾರಿ ಹಾನಿಯುಂಟಾಗಿರುವುದನ್ನು ತೋರಿಸುತ್ತವೆ. ಇಸ್ರೇಲ್ ಕೂಡಾ ಈ ದಾಳಿಯನ್ನು ದೃಢಪಡಿಸಿದ್ದು, ಹಮಾಸ್ ನ ಸ್ಥಾವರಗಳನ್ನು ಗುರಿ ಮಾಡಿ ನಡೆಸಿದ ದಾಳಿಯಲ್ಲಿ ಇಬ್ಬರು ಹಿರಿಯ ಹಮಾಸ್ ಹೋರಾಟಗಾರರು ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ದೃಢಪಡಿಸಿದೆ. ನಾಗರಿಕರಿಗೆ ಕೂಡಾ ಹಾನಿಯಾಗಿದೆ ಎಂಬ ವರದಿಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ವಿವರಿಸಿದೆ. ರಕ್ಷಣಾ ಸಚಿವ ಯೋವ್ ಗ್ಯಾಲೆಂಟ್ ಭಾನುವಾರ ರಫಾಗೆ ಭೇಟಿ ನೀಡಿದ್ದು, ಕಾರ್ಯಾಚರಣೆಯನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ತಿಳಿಸಿದ್ದರು.

# ಬಾಂಗ್ಲಾ ವಿಭಜಿಸಿ ಕ್ರಿಶ್ಚಿಯನ್ ರಾಷ್ಟ್ರ ರಚಿಸಲು ಷಡ್ಯಂತ್ರ



**ಢಾಕ:** ಈಸ್ಟ್ ತಿಮೋರ್‌ನ ರೀತಿಯಲ್ಲೇ ಬಾಂಗ್ಲಾದೇಶದ ಛತ್ತೋಗ್ರಾಮ್ ಮತ್ತು ಮ್ಯಾನ್ಮಾರ್‌ನ ಭಾಗವನ್ನು ಸೇರಿಸಿ ಕ್ರಿಶ್ಚಿಯನ್ ದೇಶವೊಂದನ್ನು ರಚಿಸುವ ಷಡ್ಯಂತ್ರ ನಡೆದಿದೆ ಎಂದು ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಆರೋಪಿಸಿದ್ದಾರೆ. ಬಾಂಗ್ಲಾದೇಶದಲ್ಲಿ ವಿದೇಶಿ ರಾಷ್ಟ್ರವೊಂದರ ವಾಯುನೆಲೆಯನ್ನು ಸ್ಥಾಪಿಸಲು ಅನುಮತಿ ನೀಡಿದರೆ ಜನವರಿಯಲ್ಲಿ ನಡೆದ ಚುನಾವಣೆಯಲ್ಲಿ ಸುಲಭವಾಗಿ ಮರು ಆಯ್ಕೆಗೊಳ್ಳುವ ಆಮಿಷವನ್ನು ತಮಗೆ ಒಡ್ಡಲಾಗಿತ್ತು.ಬಿಳಿ ವ್ಯಕ್ತಿಯೊಬ್ಬ ಈ ಆಫರ್ ನೀಡಿದ್ದ ಎಂದವರು ವಿದೇಶಿ ರಾಷ್ಟ್ರದ ಹೆಸರೆತ್ತದೆ ಹೇಳಿದ್ದಾರೆ. ಈಸ್ಟ್ ತಿಮೋರ್‌ನ ರೀತಿ ಅವರು ಬಾಂಗ್ಲಾ ಮತ್ತು ಮ್ಯಾನ್ಮಾರ್‌ನ ಪ್ರದೇಶವನ್ನು ಸೇರಿಸಿ, ಬಂಗಾಳ ಕೊಲ್ಲಿಯಲ್ಲಿ ವಾಯುನೆಲೆ ಹೊಂದಿರುವ ಕ್ರಿಶ್ಚಿಯನ್ ರಾಷ್ಟ್ರವೊಂದನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಇಂತಹ ಪಿತೂರಿಯನ್ನು ಎದುರಿಸಲು ಮತ್ತು ಪ್ರಾದೇಶಿಕ ಸ್ಥಿರತೆಗೆ ಅಡ್ಡಿಪಡಿಸುವ ಯಾವುದೇ ಪ್ರಯತ್ನವನ್ನು ತಡೆಯಲು ನಾನು ದೃಢ ನಿರ್ಧಾರ ಮಾಡಿದ್ದೇನೆ. ಅವರು ಒಂದು ದೇಶವನ್ನು ಮಾತ್ರ ಗುರಿಯಾಗಿಸಿಲ್ಲ. ಅವರ ಉದ್ದೇಶವೇನೆಂಬುದು ತನಗೆ ತಿಳಿದಿದೆ. ಅವರ ಕೊಡುಗೆಯನ್ನು ತಿರಸ್ಕರಿಸಿರುವುದರಿಂದ ತನಗೆ ಸಮಸ್ಯೆ ಎದುರಾಗಬಹುದು. ಆದರೆ ಅದಕ್ಕೆಲ್ಲಾ ಹೆದರುವ ಪ್ರಶ್ನೆಯೇ ಇಲ್ಲ ಎಂದು ಹಸೀನಾ ಹೇಳಿದ್ದಾರೆ.

# ನ್ಯೂಯಾರ್ಕ್‌ನಿಂದ ಭಾರತಕ್ಕೆ ಮರಳಿವೆ 2020 ಪ್ರಾಚೀನ ವಸ್ತು




**ನವದೆಹಲಿ:** ಭಾರತದ ದೇವಸ್ಥಾನಲ್ಲಿನ ವಿಗ್ರಹ ಹಾಗೂ ಇನ್ನೇನಾದರೂ ಪುರಾತನ ವಸ್ತುಗಳ ಕಳ್ಳತನ ಆಗುತ್ತಲೇ ಇರುತ್ತವೆ. ಇವುಗಳನ್ನು ವಿದೇಶಗಳಿಗೆ ಸ್ಮಗ್ಲಿಂಗ್ ಮಾಡಲಾಗುತ್ತದೆ.

ಅಮೆರಿಕದಲ್ಲಿ ಈ ರೀತಿ ಸ್ಮಗಲ್ ಆದ ವಸ್ತುಗಳನ್ನು ಆಯಾಯ ದೇಶಗಳಿಗೆ ಮರಳಿಸುವ ಪ್ರಯತ್ನಗಳಾಗುತ್ತಿರುತ್ತವೆ.

ಕಳೆದ ವಾರ ನ್ಯೂಯಾರ್ಕ್ನ ಮನ್ಹಟನ್ ಜಿಲ್ಲೆಯ ಅಟಾರ್ನಿ ಕಚೇರಿಯಿಂದ ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ಕಳ್ಳತನಗೊಂಡ ಪ್ರಾಚೀನ ವಸ್ತುಗಳನ್ನು ಮರಳಿಸಲಾಯಿತು.

ಪಾಕಿಸ್ತಾನ ದೇಶವೊಂದಕ್ಕೇ 133 ವಸ್ತುಗಳನ್ನು ಮರಳಿಸಲಾಗಿದೆ. ಇದೇ ಅಟಾರ್ನಿ ಕಚೇರಿಯಿಂದ ಕಳೆದ 10 ವರ್ಷದಲ್ಲಿ ಭಾರತಕ್ಕೆ 2,020 ಪ್ರಾಚೀನ ವಸ್ತುಗಳನ್ನು ಮರಳಿಸಲಾಗಿದೆ. ಬೇರೆಲ್ಲಾ ದೇಶಗಳಿಗೆ ಸಿಕ್ಕಿರುವುದಕ್ಕಿಂತ ಇದು ಹೆಚ್ಚು.

ಭಾರತ ಸರ್ಕಾರ ಹಾಗೂ ಕೆಲ ಭಾರತೀಯರು ತಮ್ಮ ದೇಶದಿಂದ ಕದ್ದು ಹೋದ ಪ್ರಾಚೀನ ವಸ್ತುಗಳನ್ನು ಮರಳಿ ತರಲು ನಿರಂತರ ಪ್ರಯತ್ನ ಮಾಡಿದ ಫಲ ಇದು. ನ್ಯೂಯಾರ್ಕ್ನ ಮನ್ಹಟನ್ ಡಿಸ್ಟ್ರಿಕ್ ಅಟಾರ್ನಿ ಕಚೇರಿಯಿಂದ ಕಳೆದ 10 ವರ್ಷದಲ್ಲಿ ಯಾವುದೇ ದೇಶಕ್ಕೆ ಮರಳಿಸಲಾದ ಅತಿಹೆಚ್ಚು ಪ್ರಾಚೀನ ವಸ್ತುಗಳು. ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಇಟಲಿ ದೇಶಕ್ಕೆ 621 ವಸ್ತುಗಳು ಮರಳಿವೆ. ಆದರೆ, ಇಟಲಿಯ ಪ್ರಾಚೀನ ವಸ್ತುಗಳು ಅತಿ ಹೆಚ್ಚು ಮೌಲ್ಯದವಾಗಿವೆ. 80 ಮಿಲಿಯನ್ ಡಾಲರ್ಗೂ ಹೆಚ್ಚು ಮೌಲ್ಯದ 621 ಪ್ರಾಚೀನ ವಸ್ತುಗಳನ್ನು ಇಟಲಿ ಪಡೆದಿದೆ.

### ಪಶ್ಚಿಮ ಬಂಗಾಳ, ಈಶಾನ್ಯ ರಾಜ್ಯಗಳಲ್ಲಿ ಭಾರೀ ಮಳೆ

# ಶಾಂತವಾಗುತ್ತಿದೆ ರೆಮಾಲ್ ಚಂಡಮಾರುತ



**ಕೋಲ್ಕತ್ತಾ:** ಬಂಗಾಳಕೊಲ್ಲಿಯಲ್ಲಿ ತೀವ್ರ ಆತಂಕ ಹುಟ್ಟಿಸಿದ್ದ ರೆಮಾಲ್ ಚಂಡಮಾರುತ ಶಾಂತವಾಗುತ್ತಿದೆ. ಗಂಟೆಗೆ 135 ಕಿಲೋಮೀಟರ್ ವೇಗದಲ್ಲಿ ಅಪ್ಪಳಿಸಿದ ಚಂಡಮಾರುತದ ವೇಗ ನಿಧಾನವಾಗಿ ಕುಸಿಯುತ್ತಿದೆ. ಇಂದು ರಾತ್ರಿ ಹೊತ್ತಿಗೆ ಗಾಳಿಯ ವೇಗ ಗಂಟೆಗೆ 70–80 ಕಿಲೋಮೀಟರ್‌ನಿಂದ 50–70 ಕಿಲೋಮೀಟರ್‌ಗೆ ಕುಸಿಯುವ ಸಾಧ್ಯತೆಯಿದೆ.

ತಡರಾತ್ರಿ ಬಾಂಗ್ಲಾದೇಶ, ಪಶ್ಚಿಮ ಬಂಗಾಳ ಕರಾವಳಿ ಗಡಿಯ ತೀರಕ್ಕೆ ಗಂಟೆಗೆ 135 ಕಿಲೋಮೀಟರ್ ವೇಗದಲ್ಲಿ ಅಪ್ಪಳಿಸಿತ್ತು. ಪರಿಣಾಮ ಪಶ್ಚಿಮ ಬಂಗಾಳ, ಒಡಿಶಾ, ಅಸ್ಸಾಂ ಸೇರಿ ಈಶಾನ್ಯ ರಾಜ್ಯಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ನೂರಾರು ಮರಗಳು, ವಿದ್ಯುತ್ ಕಂಬಗಳು ಉರುಳಿ ಅಪಾರ ಹಾನಿಯುಂಟಾಗಿದೆ. ಕೋಲ್ಕತ್ತಾದಲ್ಲಿ ಮೆಟ್ರೋ ಮತ್ತು ಹಲವು ರೈಲುಗಳ ಸಂಚಾರ ರದ್ದಾಗಿದೆ. ಪಶ್ಚಿಮ ಬಂಗಳಾದಲ್ಲಿ ಇಬ್ಬರು, ಬಾಂಗ್ಲಾದಲ್ಲಿ ಏಳು ಮಂದಿ ಬಲಿ ಆಗಿದ್ದಾರೆ.

ಚಂಡಮಾರುತ ದುರ್ಬಲಗೊಂಡ ನಂತರ ಕೋಲ್ಕತ್ತಾದಲ್ಲಿ ವಿಮಾನಸೇವೆಗಳು ಪುನಾರಂಭಗೊಂಡಿವೆ. ಮಂಗಳವಾರ ಸಂಜೆಯವರೆಗೂ ಗಾಳಿ ಮಳೆಯ ಪರಿಸ್ಥಿತಿ ಇರಲಿದೆ. ಸದ್ಯ ಚಂಡಮಾರುತ ಅಸ್ಸಾಂ, ಮೇಘಾಲಯದತ್ತ ಚಲಿಸುತ್ತಿದೆ.

ಕೋಲ್ಕತ್ತಾದಿಂದ ಪೂರ್ವಕ್ಕೆ 90 ಕಿಲೋಮಿಟರ್ ದೂರದಲ್ಲಿ ರೆಮಾಲ್ ಕೇಂದ್ರೀಕೃತವಾಗಿದೆ. ಈ ಹಿಂದೆ ತೀವ್ರ ಅನಾಹುತ ಉಂಟು ಮಾಡಿದ್ದ ಆಂಫನ್ ಗೆ ಹೋಲಿಸಿದ್ರೆ ರೆಮಾಲ್ ಪ್ರಭಾವ ಕಡಿಮೆ ಎಂದು ವರದಿಯಾಗಿದೆ.

# ಜೆರುಸಲೇಂನಲ್ಲಿ 2,300 ವರ್ಷ ಹಳೆಯ ಉಂಗುರ ಪತ್ತೆ!!

**ಇಸ್ರೇಲ್:** ಇಸ್ರೇಲ್‌ನ ಜೆರುಸಲೆಮ್ನ ಸಿಟಿ ಆಫ್ ಡೇವಿಡ್ ಆರ್ಕಿಯಲಾಜಿಕಲ್ ಪಾರ್ಕ್ ನಲ್ಲಿ ಆಂಟಿಕ್ವಿಟೀಸ್ನಲ್ಲಿನ ಉತ್ಖನನದಲ್ಲಿ ಪುರಾತತ್ತ್ವಜ್ಞರು ಹೆಲೆನಿಸ್ಟಿಕ್ ಅವಧಿಯ ಮಗುವಿನ 2,300 ವರ್ಷಗಳಷ್ಟು ಹಳೆಯದಾದ ಉಂಗುರವನ್ನು ಕಂಡುಹಿಡಿದಿದ್ದಾರೆ ಎಂದು ಸೋಮವಾರ ಪ್ರಾಧಿಕಾರ ಪ್ರಕಟಿಸಿದೆ. ಚಿನ್ನದ ಉಂಗುರವನ್ನು ಕೆಂಪು



ಅಮೂಲ್ಯವಾದ ಕಲ್ಲಿನಿಂದ ಅಲಂಕರಿಸಲಾಗಿದೆ ಇದನ್ನು ಗಾರ್ನೆಟ್ ಎಂದು ನಂಬಲಾಗಿದೆ ಮತ್ತು ಸಣ್ಣ ವ್ಯಾಸವನ್ನು ಹೊಂದಿದೆ, ಇದು ಹುಡುಗ ಅಥವಾ ಹುಡುಗಿ ಧರಿಸಿರುವ ಸಾಧ್ಯತೆಯಿದೆ ಎಂದು ತಜ್ಞರು ನಂಬಲಾಗಿದೆ. ನಾನು ಪರದೆಯ ಮೂಲಕ ಭೂಮಿಯನ್ನು ಶೋಧಿಸುತ್ತಿದ್ದೆ ಮತ್ತು ಇದ್ದಕ್ಕಿದ್ದಂತೆ ಏನೋ ಮಿನುಗು ಕಂಡಿತು. ನಾನು ತಕ್ಷಣವೇ ನೋಡಿದಾಗ ಉಂಗುರ ಸಿಕ್ಕಿತು, ನಾನು ಉಂಗುರವನ್ನು ಸಿಕ್ಕಿತು ಎಂದು ಕೂಗಿದೆ ಎಂದು ಉತ್ಖನನ ತಂಡದ ಸದಸ್ಯ, ತೆಹಿಯಾ ಗಂಗಾಟೆ ಹೇಳಿದರು. ಸೆಕೆಂಡ್ಗಳಲ್ಲಿ, ಎಲ್ಲರೂ ನನ್ನ ಸುತ್ತಲೂ ಜಮಾಯಿಸಿದರು, ಮತ್ತು ಎಲ್ಲರಲ್ಲೂ ಉತ್ಸಾಹ ಉಂಟಾಯಿತು. ಇದು ಒಂದು ಭಾವನಾತ್ಮಕವಾಗಿ ಹುಡುಕಾಟವಾಗಿತ್ತು. ನೀವು ಪ್ರತಿದಿನ ಕಂಡುಕೊಳ್ಳುವ ರೀತಿಯದ್ದಲ್ಲ. ನಿಜವಾಗಿ, ನಾನು ಯಾವಾಗಲೂ ಚಿನ್ನಾಭರಣಗಳನ್ನು ಹುಡುಕಲು ಬಯಸುತ್ತೇನೆ ಮತ್ತು ಈ ಕನಸು ನನಸಾಗಲು ನನಗೆ ತುಂಬಾ ಸಂತೋಷವಾಗಿದೆ ಎಂದು ತಿಳಿಸಿದರು. ಆವಿಷ್ಕಾರವು ಆರಂಭಿಕ ಹೆಲೆನಿಸ್ಟಿಕ್ ಅವಧಿಯ ಜೆರುಸಲೆಮ್ ನಿವಾಸಿಗಳ ಸ್ವಭಾವ ಮತ್ತು ನಿಲುವಿನ ಹೊಸ ಚಿತ್ರವನ್ನು ಚಿತ್ರಿಸುತ್ತದೆ ಎಂದು ಟೆಲ್ ಅವಿವ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಯುವಲ್ ಗಡೋಟ್ ಹೇಳಿದರು.

# ರಸ್ತೆ ದಾಟುವಾಗ ಕಾರು ಡಿಕ್ಕಿ: ಅಮೆರಿಕದಲ್ಲಿ ತೆಲಂಗಾಣದ ಯುವತಿ ಸಾವು



**ವಾಷಿಂಗ್ಟನ್:** ರಸ್ತೆ ದಾಟುತ್ತಿದ್ದ ಸಂದರ್ಭ ಕಾರು ಡಿಕ್ಕಿ ಹೊಡೆದ ಪರಿಣಾಮ ತೆಲಂಗಾಣ ಮೂಲದ ಯುವತಿ ಅಮೆರಿಕದ ಫ್ಲೋರಿಡಾದಲ್ಲಿ ಸಾವನ್ನಪ್ಪಿದ್ದಾರೆ.

ಭಾನುವಾರ ರಾತ್ರಿ ಘಟನೆ ನಡೆದಿದ್ದು, ಯಾದಾದ್ರಿ ಭೋಂಗಿರ್ ಜಿಲ್ಲೆಯ ಯಾದಗರಿಪಲ್ಲಿ ಮೂಲದ ಸೌಮ್ಯಾ (25) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಸೌಮ್ಯಾ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳಿದ್ದರು. ಫ್ಲೋರಿಡಾ ಅಟ್ಲಾಂಟಿಕ್ ವಿಶ್ವವಿದ್ಯಾನಿಲಯದಿಂದ ಪದವಿ ಪೂರ್ಣಗೊಳಿಸಿದ್ದ ಸೌಮ್ಯ ಅಲ್ಲೇ ಉದ್ಯೋಗ ಹುಡುಕುತ್ತಿದ್ದರು. ಭಾನುವಾರ ರಾತ್ರಿ ರಸ್ತೆ ದಾಟುತ್ತಿದ್ದ ವೇಳೆ ಕಾರೊಂದು ಡಿಕ್ಕಿ ಹೊಡೆದು ಸೌಮ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸೌಮ್ಯಾ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಕುಟುಂಬಸ್ಥರು ಕಂಬನಿ ಮಿಡಿದಿದ್ದಾರೆ. ಆಕೆಯ ಮೃತದೇಹವನ್ನು ಭಾರತಕ್ಕೆ ತರುವಂತೆ ಆಕೆಯ ಪೋಷಕರಾದ ಕೋಟೇಶ್ವರ ರಾವ್ ಮತ್ತು ಬಾಲಾಮಣಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ತೆಲಂಗಾಣ ಸಚಿವ ಕೋಮಟಿರೆಡ್ಡಿ ವೆಂಕಟ್ ರೆಡ್ಡಿ ಸೌಮ್ಯಾ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದ್ದು, ಆಕೆಯ ಪಾರ್ಥಿವ ಶರೀರವನ್ನು ಮರಳಿ ತರಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

# ಶ್ವಾನಗಳಿಗಾಗಿ ಏರ್ ಲೈನ್ ಆರಂಭ!

**ಬೆಂಗಳೂರು:** ಶ್ವಾನ ಮತ್ತು ಮನುಷ್ಯರ ನಡುವೆ ಸದಾ ಉತ್ತಮ ಸಂಬಂಧ ಇರುತ್ತವೆ. ಬಹುತೇಕರ ಮನೆಯಲ್ಲಿ ಶ್ವಾನಗಳು ಮನೆ ಮಕ್ಕಳಂತೆ ಬೆಳೆಯುವ ಸಂಗತಿಗಳೇನು ಹೊಸದಲ್ಲ. ಆದರೆ ಶ್ವಾನ ಪ್ರಿಯರು ಪ್ರಯಾಣದ ಸಂದರ್ಭದಲ್ಲಿ ತಮ್ಮ ಮುದ್ದು ನಾಯಿಯನ್ನು ಕೊಂಡೊಯ್ಯಲಾಗದೇ ಬೇಸರಿಸುತ್ತಾರೆ. ಇಂತವರನ್ನು ಗಮನದಲ್ಲಿಟ್ಟುಕೊಂಡು ಇದೀಗ ಬಾರ್ಕ್ ಏರ್ ಎಂಬ ವಿಮಾನಯಾನ ಸಂಸ್ಥೆ ವಿಮಾನ ಹಾರಾಟವನ್ನು ಆರಂಭಿಸಿದ್ದು ಇದರಲ್ಲಿ ಶ್ವಾನಗಳೇ ಮುಖ್ಯ ಪ್ರಯಾಣಿಕರಾಗಿರುತ್ತವೆ. ಈಗಾಗಲೇ ಇದು ತನ್ನ ಮೊದಲ ಹಾರಾಟವನ್ನು ಆರಂಭಿಸಿದ್ದು, ಬಾರ್ಕ್ ಏರ್ ಸಂಪೂರ್ಣವಾಗಿ ನಾಯಿಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಿಸಲಾದ ವಿಮಾನಯಾನ ಸಂಸ್ಥೆಯಾಗಿದೆ. ಇದರಲ್ಲಿ, ನಾಯಿಗಳು ಮತ್ತು ಅವುಗಳ ಮಾಲೀಕರು ತಮ್ಮ ವಿಮಾನ ಪ್ರಯಾಣವನ್ನು ಆನಂದಿಸಬಹುದು. ನಾಯಿ ಆಟಿಕೆ ಕಂಪನಿ ಬಾರ್ಕ್ ಈ ಸೇವೆಯನ್ನು ಆರಂಭಿಸಲು ಜೆಟ್ ಚಾರ್ಟರ್ ಜೊತೆ ಕೈಜೋಡಿಸಿದೆ. ಪಾರ್ಕ್ ಏರ್ ಶ್ವಾನಗಳಿಗೆ ಮೀಸಲಾದ ತನ್ನ ಮೊದಲ ವಿಮಾನಯಾನ ಅಮೇರಿಕಾದಲ್ಲಿ ಪ್ರಾರಂಭಿಸಿದೆ. ನ್ಯೂಯಾರ್ಕ್‌ನಿಂದ ಲಾಸ್ ಏಂಜಲೀಸ್‌ಗೆ ಮೊದಲ ವಿಮಾನ ಹಾರಾಟ ನಡೆಸಿದ್ದು, ನಾಯಿಗಳಿಗೆ ಮನುಷ್ಯರಿಗೆ ಸಮಾನವಾದ ಆಸನಗಳನ್ನು ನಿಗದಿಪಡಿಸಲಾಗಿದೆ. ಹೀಗಾಗಿ ನಾಯಿಗಳಿಗೂ ಆರಾಮದಾಯ ವಿಮಾನ ಪ್ರಯಾಣದ ಅನುಭವ ಸಿಕ್ಕಿದೆ. ಬಾರ್ಕ್ ಏರ್ ಇತ್ತೀಚಿನ Instagram ಪೋಸ್ಟ್‌ನ ಮೂಲಕ ಗುರುವಾರ ನ್ಯೂಯಾರ್ಕ್‌ನಿಂದ ಲಾಸ್ ಏಂಜಲೀಸ್‌ಗೆ ಟೇಕ್ ಆಫ್ ಆದ ತಮ್ಮ ಮೊದಲ ವಿಮಾನದ ಬಗ್ಗೆ ರೋಚಕ ಸುದ್ದಿಯನ್ನು ಹಂಚಿಕೊಂಡಿದೆ.

# ಇಸ್ರೇಲ್–ಈಜಿಪ್ಟ್ ಪಡೆಯ ನಡುವೆ ಗುಂಡಿನ ಚಕಮಕಿ

**ಗಾಝಾ:** ರಫಾ ಗಡಿದಾಟು ಬಳಿ ಸೋಮವಾರ ಇಸ್ರೇಲ್ ಮತ್ತು ಈಜಿಪ್ಟ್ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದ್ದು ಈಜಿಪ್ಟ್ ನ ಓರ್ವ ಯೋಧ ಮೃತಪಟ್ಟಿರುವುದಾಗಿ ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ. ಈಜಿಪ್ಟ್ ಗಡಿಭಾಗದಲ್ಲಿ ಗುಂಡಿನ ಚಕಮಕಿ ನಡೆದಿರುವ ವರದಿಯಿದ್ದು ಈ ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ. ಈಜಿಪ್ಟ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಯುತ್ತಿದೆ. ಇಸ್ರೇಲ್ ಪಡೆಯಲ್ಲಿ ಯಾವುದೇ ಸಾವು–ನೋವಿನ ವರದಿಯಿಲ್ಲ ಎಂದು ಇಸ್ರೇಲ್ ಭದ್ರತಾ ಪಡೆ(ಐಡಿಎಫ್) ಹೇಳಿದೆ.



# ಮರು ಚುನಾವಣೆ ಘೋಷಿಸಲಾಗದ ಸಂದಿಗ್ಧತೆಯಲ್ಲಿ ಚುನಾವಣಾ ಆಯೋಗ



**ಢಾಕಾ:** ಒಂದು ವೇಳೆ ಮಾರ್ಚ್ 13ರಂದು ಕೋಲ್ಕತ್ತಾದಲ್ಲಿ ಹತ್ಯೆಗೀಡಾಗಿರುವ ಬಾಂಗ್ಲಾದೇಶ ಸಂಸದ ಅನ್ವರುಲ್ ಅಝೀಂ ಅನರ್ ಅವರ ಮೃತದೇಹವು ದೊರೆಯದಿದ್ದರೆ, ಬಾಂಗ್ಲಾದೇಶ ಚುನಾವಣಾ ಆಯೋಗವು ಅವರ ಕ್ಷೇತ್ರಕ್ಕೆ ಮರು ಚುನಾವಣೆ ಘೋಷಿಸಲಾಗದ ಸಂದಿಗ್ಧತೆ ಎದುರಾಗಲಿದೆ ಎಂದು ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಝೆನೈದಾ–,4 ಪ್ರಾಂತ್ಯದ ಮೂರು ಬಾರಿ ಸಂಸದರಾದ ಅನ್ವರುಲ್ ಅಝೀಂ ಅನರ್, ವೈದ್ಯಕೀಯ ತಪಾಸಣೆಗೆಂದು ಮೇ 12ರಂದು ಢಾಕಾದಿಂದ ಕೋಲ್ಕತ್ತಾಗೆ ನಿರ್ಗಮಿಸಿದ್ದರು. ಮರು ದಿನ ಅವರು ಅಪಾರ್ಟ್ಮೆಂಟ್ ಒಂದರಲ್ಲಿ ಮೃತ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಆದರೆ, ಹಂತಕರು ಅವರ ದೇಹವನ್ನು ತುಂಡುತುಂಡಾಗಿ ಕತ್ತರಿಸಿ, ನಾಲೆಯೊಂದರ ವಿವಿಧ ಭಾಗಗಳಲ್ಲಿ ಎಸೆದಿರುವುದರಿಂದ ಅವರ ಮೃತ ದೇಹವಿನ್ನೂ ಸಂಪೂರ್ಣವಾಗಿ ಪತ್ತೆಯಾಗಿಲ್ಲ.

ಒಂದು ವೇಳೆ ಬಾಂಗ್ಲಾದೇಶ ಚುನಾವಣಾ ಆಯೋಗವೇನಾದರೂ ಅವರ ಕ್ಷೇತ್ರಕ್ಕೆ ಮರು ಚುನಾವಣೆ ಘೋಷಿಸಬೇಕಿದ್ದರೆ, ಅವರು ಮೃತಪಟ್ಟಿದ್ದಾರೆ ಎಂದು ಗೃಹ ಸಚಿವಾಲಯವು ಆಯೋಗಕ್ಕೆ ಮಾಹಿತಿ ನೀಡಬೇಕಾಗುತ್ತದೆ. ಅಲ್ಲದೆ, ಯಾವುದೇ ಕ್ಷೇತ್ರ ತೆರವಾದರೆ, ಅಂತಹ ಕ್ಷೇತ್ರಕ್ಕೆ 90 ದಿನಗಳೊಳಗಾಗಿ ಚುನಾವಣೆ ನಡೆಸಬೇಕಾಗುತ್ತದೆ. ಆದರೆ, ಸಂಸದ ಅನ್ವರುಲ್ ಅಝೀಂ ಅನರ್ ಅವರ ಮೃತ ದೇಹವಿನ್ನೂ ಪತ್ತೆಯಾಗದಿರುವುದರಿಂದ, ಅವರ ಕ್ಷೇತ್ರ ತೆರವಾಗಿದೆ ಎಂದು ಅಧಿಕೃತವಾಗಿ ಪ್ರಕಟಿಸಲು ಸಾಧ್ಯವಿಲ್ಲ. ಮತ್ತೊಂದೆಡೆ, ಯಾವುದೇ ಕ್ಷೇತ್ರ ತೆರವಾದರೆ, ಅಂತಹ ಕ್ಷೇತ್ರಕ್ಕೆ 90 ದಿನಗಳೊಳಗಾಗಿ ಚುನಾವಣೆ ನಡೆಸಬೇಕಾಗುತ್ತದೆ. ಆದರೆ, ಅಂತಹ ಯಾವುದೇ ಅಧಿಕೃತ ಮಾಹಿತಿಯನ್ನು ಗೃಹ ಸಚಿವಾಲಯದಿಂದ ಸ್ವೀಕರಿಸದಿರುವುದರಿಂದ ಬಾಂಗ್ಲಾದೇಶ ಚುನಾವಣಾ ಆಯೋಗ ಸಂದಿಗ್ಧಕ್ಕೆ ಸಿಲುಕಿದೆ ಎಂದು ಹೇಳಲಾಗಿದೆ.

# ತೆಲಂಗಾಣದಲ್ಲಿ ಗುಟ್ಕಾ, ಪಾನ್ ಮಸಾಲ ಖರೀದಿ, ಮಾರಾಟ ನಿಷೇಧ




**ಹೈದರಾಬಾದ್:** ತೆಲಂಗಾಣದ ಆಹಾರ ಸುರಕ್ಷತಾ ಅಧಿಕಾರಿಗಳು ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ. ರಾಜ್ಯದಲ್ಲಿ ಇನ್ನೂ ಒಂದು ವರ್ಷದ ಮಟ್ಟಿಗೆ ಗುಟ್ಕಾ ಮತ್ತು ಪಾನ್ ಮಾಸಾ ನಿಷೇಧಿಸಲು ತೀರ್ಮಾನ ಕೈಗೊಳ್ಳಲಾಗಿದೆ. ತಂಬಾಕು ಮತ್ತು ನಿಕೋಟಿನ್ ನಿಂದ ತಯಾರಿಸಿದ ಗುಟ್ಕಾ ಮತ್ತು ಪಾನ್ ಮಸಾಲಾ ತಯಾರಿಕೆ ಮತ್ತು ಮಾರಾಟದ ಮೇಲೆ ನಿಷೇಧ ಹೇರಲಾಗಿದೆ. ಗುಟ್ಕಾ ಮತ್ತು ಪಾನ್ ಮಸಾಲಾ ನಿಷೇಧವು 2024ರ ಮೇ 24 ರಿಂದ ಒಂದು ವರ್ಷದವರೆಗೆ ಜಾರಿಯಲ್ಲಿರುತ್ತದೆ ಎಂದು ಅಧಿಕಾರಿಗಳು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಗುಟ್ಕಾ ಮತ್ತು ಪಾನ್ ಮಸಾಲಾ ತಯಾರಿಕೆ, ಮಾರಾಟ, ಪೂರೈಕೆ, ಸಂಗ್ರಹಣೆ ಮತ್ತು ವಿತರಣೆಯನ್ನು ಒಂದು ವರ್ಷದವರೆಗೆ ನಿಷೇಧಿಸಲಾಗಿದೆ. ಗುಟ್ಕಾ ಮತ್ತು ಪಾನ್ ಮಸಾಲದಲ್ಲಿರುವ ತಂಬಾಕು ಮತ್ತು ನಿಕೋಟಿನ್ ಆರೋಗ್ಯಕ್ಕೆ ತುಂಬಾ ಹಾನಿಕಾರಕ. ಇವುಗಳ ಸೇವನೆಯಿಂದ ಕ್ಯಾನ್ಸರ್ ನಂತಹ ಮಾರಕ ರೋಗಗಳು ಬರುತ್ತವೆ. ಬಾಯಿ ಕ್ಯಾನ್ಸರ್, ಫೈಬ್ರೋಸಿಸ್ ನಂತಹ ಅಪಾಯಕಾರಿ ಕಾಯಿಲೆಗಳು ಬರುವ ಸಾಧ್ಯತೆ ಇದೆ ಎನ್ನುತ್ತಾರೆ ವೈದ್ಯರು. ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ ಮತ್ತು ಪಾನ್ ಮಸಾಲಾ ಬಳಕೆಯಿಂದ ಕ್ಯಾನ್ಸರ್ ಉಂಟಾಗುತ್ತದೆ. ವಾರಾಣಸಿಯಲ್ಲಿ ದಾಖಲಾಗುತ್ತಿರುವ ಶೇ 55ರಷ್ಟು ಕ್ಯಾನ್ಸರ್ ಪ್ರಕರಣಗಳಿಗೆ ಗುಟ್ಕಾ ಮತ್ತು ಪಾನ್ ಮಸಾಲಾ ಕಾರಣ ಎಂದು ವೈದ್ಯರು ಪತ್ತೆಹಚ್ಚಿದ್ದಾರೆ. ಗುಟ್ಕಾ, ಪಾನ್ ಮಸಾಲಾ ನಿಷೇಧದ ಬಗ್ಗೆ ಜನ ಸಂತಸ ವ್ಯಕ್ತಪಡಿಸುತ್ತಿದ್ದಾರೆ. ಇವುಗಳನ್ನು ಶಾಶ್ವತವಾಗಿ ನಿಷೇಧಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ.

# ಅಫ್ಘಾನಿಸ್ತಾನದಲ್ಲಿ ಭೀಕರ ಪ್ರವಾಹ



**ಕಾಬೂಲ್:** ಅಫ್ಘಾನಿಸ್ತಾನದ ಬಘ್ಲಾನ್ ಮತ್ತು ಬಡಾಕ್ಷನ್ ಪ್ರಾಂತ್ಯಗಳಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹದಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 16 ಜನರು ಸಾವನ್ನಪ್ಪಿದ್ದಾರೆ ಎಂದು ಟೋಲೋ ನ್ಯೂಸ್ ವರದಿ ಮಾಡಿದೆ.

ಈ ಪ್ರಾಂತ್ಯಗಳ ಸ್ಥಳೀಯ ಅಧಿಕಾರಿಗಳ ಪ್ರಕಾರ, ಪ್ರವಾಹದಲ್ಲಿ 500 ಮನೆಗಳು ಸಂಪೂರ್ಣವಾಗಿ ಅಥವಾ ಭಾಗಶಃ ನಾಶವಾಗಿವೆ.

ಪ್ರವಾಹವು ದಂಡ್–ಎ–ಘೋರಿ, ದೋಶಿ, ಪುಲ್–ಎ–ಖುಮ್ರಿ ನಗರ, ಮಧ್ಯ ಬಡಾಕ್ಷನ್ನ ಮೋರ್ಚಾ ಗ್ರಾಮ ಮತ್ತು ಈ ಪ್ರಾಂತ್ಯಗಳ ಹಲವಾರು ಭಾಗಗಳ ಮೇಲೆ ಪರಿಣಾಮ ಬೀರಿದೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ ಎಂದು ವರದಿಯಾಗಿದೆ.

ತಾಲಿಬಾನ್ ನಿಯೋಜಿತ ಬಘ್ಲಾನ್ ಪೊಲೀಸ್ ಕಮಾಂಡ್ ಮುಖ್ಯಸ್ಥ ಅಬ್ದುಲ್ ಗಫೂರ್ ಖಾಡೆಮ್, ಕಳೆದ ರಾತ್ರಿ, ಬಹಳ ಬಲವಾದ ಪ್ರವಾಹ ಸಂಭವಿಸಿದೆ. ಬಘ್ಲಾನ್ ಪ್ರಾಂತ್ಯದ ದೋಶಿ ಜಿಲ್ಲೆಯ ಲಾರ್ಖಾಬ್ ಪ್ರದೇಶದಲ್ಲಿ ನಾವು ಹೊಂದಿರುವ ಪ್ರಮುಖ ಸಾವುನೋವುಗಳು ಸಂಭವಿಸಿವೆ. ಲರ್ಖಾಬ್ನಲ್ಲಿ, ಮೂವರು ಮಕ್ಕಳು, ಒಬ್ಬ ಮಹಿಳೆ ಮತ್ತು ಇಬ್ಬರು ಪುರುಷರು ಸೇರಿದಂತೆ ಸರಿಸುಮಾರು ಆರು ಜನರು ಹುತಾತ್ಮರಾಗಿದ್ದಾರೆ ಮತ್ತು 300 ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ. ಪ್ರವಾಹದಿಂದಾಗಿ ಒಂದೇ ಕುಟುಂಬದ ಹತ್ತು ಸದಸ್ಯರು ಮತ್ತು ಇನ್ನೊಬ್ಬ ವ್ಯಕ್ತಿ ಗಾಯಗೊಂಡಿದ್ದಾರೆ ಎಂದು ಬಡಾಕ್ಷನ್ನಲ್ಲಿ ತಾಲಿಬಾನ್ ನೇಮಿಸಿದ ನೈಸರ್ಗಿಕ ವಿಪತ್ತು ನಿರ್ವಹಣೆಯ ಮುಖ್ಯಸ್ಥ ಮೊಹಮ್ಮದ್ ಕಾಮ್ಗರ್ ಹೇಳಿದ್ದಾರೆ ಎಂದು ಟೋಲೋ ನ್ಯೂಸ್ ವರದಿ ಮಾಡಿದೆ.



# ಅಮೆರಿಕದಲ್ಲಿ ಚಂಡಮಾರುತದ ಅಬ್ಬರ: 18 ಮಂದಿ ಸಾವು

**ನ್ಯೂಯಾರ್ಕ್:** ಅಮೆರಿಕದ ದಕ್ಷಿಣ ಬಯಲು ಪ್ರದೇಶಗಳು ಮತ್ತು ಒಝಾರ್ಕ್ ಪರ್ವತ ಪ್ರದೇಶಗಳಲ್ಲಿ ತೀವ್ರ ಚಂಡಮಾರುತದ ಅಬ್ಬರಕ್ಕೆ ಸಿಲುಕಿ 4 ಮಕ್ಕಳ ಸಹಿತ ಕನಿಷ್ಟ 14 ಮಂದಿ ಸಾವನ್ನಪ್ಪಿದ್ದು ನೂರಾರು ಕಟ್ಟಡಗಳು ಧ್ವಂಸಗೊಳಿಸಿದೆ. ಕೆಂಟುಕಿ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಸೋಮವಾರ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ.

ಮುಂದಿನ ದಿನಗಳಲ್ಲಿ ಭಾರೀ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ವರದಿ ಮಾಡಿದೆ. ಮಿಸಿಸಿಪ್ಪಿ, ಓಹಿಯೊ ಮತ್ತು ಟೆನ್ನೆಸಿ ನದಿ ಕಣಿವೆಯಲ್ಲಿ ಸುಂಟರಗಾಳಿಯಿಂದ ವ್ಯಾಪಕ ಹಾನಿಯಾಗಿದ್ದು 4.7 ದಶಲಕ್ಷ ಜನತೆಯ ಮೇಲೆ ಪರಿಣಾಮ –ಬೀರಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

## ‘ಸಂಭವಾಮಿ ಯುಗೇ ಯುಗೇ’ ಚಿತ್ರದ ಸಾಂಗ್ ರಿಲೀಸ್ ಮಾಡಿದ ಶ್ರುತಿ ಹರಿಹರನ್

ರಾಜಲಕ್ಷ್ಮಿ ಎಂಟರ್ಟೈನ್ಮೆಂಟ್ ಲಾಂಛನದಲ್ಲಿ ಪ್ರತಿಭಾ ಅವರು ನಿರ್ಮಿಸಿರುವ, ಚೇತನ್ ಚಂದ್ರಶೇಖರ್ ಶೆಟ್ಟಿ ನಿರ್ದೇಶನದಲ್ಲಿ ಜಯ್ ಶೆಟ್ಟಿ ನಾಯಕನಾಗಿ ನಟಿಸಿರುವ ‘ಸಂಭಾವಮಿ ಯುಗೇ ಯುಗೇ’ ಚಿತ್ರದ ಮೊದಲ ಹಾಡು ‘ಡೋಲು ತಮಟೆ ವಾದ್ಯ’ ಎಂಬ ಹಾಡು ಇತ್ತೀಚಿಗೆ ಬಿಡುಗಡೆಯಾಯಿತು. ಖ್ಯಾತ ನಟಿ ಶ್ರುತಿ ಹರಿಹರನ್ ಜಾನಪದ ಶೈಲಿಯ ಈ ಹಾಡನ್ನು ಬಿಡುಗಡೆ ಮಾಡಿ ಶುಭ ಕೋರಿದರು. ಅರಸು ಅಂತಾರೆ ಬರೆದಿರುವ ಈ ಹಾಡಿಗೆ ಗೀತಾ ಮಾಸ್ಟರ್ ನೃತ್ಯ ಸಂಯೋಜಿಸಿದ್ದಾರೆ. ಪೂರನ್ ಶೆಟ್ಟಿಗಾರ್ ಸಂಗೀತ ಸಂಯೋಜಿಸಿದ್ದಾರೆ. ನಕಾಶ್ ಹಾಗೂ ಸ್ಪರ್ಶ ಹಾಡಿದ್ದಾರೆ. ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು.

ಇದು ನನ್ನ ಮೊದಲ ಚಿತ್ರ. ನನ್ನ ಮೇಲೆ ನಂಬಿಕೆ ಇಟ್ಟು ಇಂಥದ್ದೊಂದು ಅವಕಾಶ ಕೊಟ್ಟ ನಿರ್ಮಾಪಕಿ ಪ್ರತಿಭಾ ಅವರಿಗೆ ಧನ್ಯವಾದಗಳು. ಇದೊಂದು ಕಮರ್ಷಿಯಲ್ ಥ್ರಿಲ್ಲರ್‌ನ ಚಿತ್ರ. ಮಂಡ್ಯ, ಚನ್ನಪಟ್ಟಣ, ರಾಮನಗರ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ನಾನು ಹತ್ತು ವರ್ಷಗಳಿಂದ ಹಲವು ನಿರ್ದೇಶಕರ ಜೊತೆಗೆ ಕೆಲಸ ಮಾಡಿದ್ದೆ. ಇದೊಂದು ಹಳ್ಳಿ ಹಿನ್ನೆಲೆಯ ಚಿತ್ರ. ಹಳ್ಳಿ ಹುಡುಗರು ಓದಿ, ಪಟ್ಟಣಕ್ಕೆ ಹೋಗಿ ನೆಲೆಸುತ್ತಾರೆ. ಇದರಿಂದ ಮುಂದಿನ ತಲೆಮಾರಿನ ಕಥೆ ಏನು? ಹಳ್ಳಿ



ಉಳಿಯುವುದು ಹೇಗೆ? ಹಾಗಾಗಿ ಯುವಕರು ಹಳ್ಳಿಯಲ್ಲೇ ನೆಲಸಬೇಕು ಎಂಬುದೆ ಚಿತ್ರದ ಕಥಾ ಸಾರಾಂಶ. ಜೂನ್ 21ಕ್ಕೆ ಚಿತ್ರ ಬಿಡುಗಡೆ ಆಗಲಿದೆ. ಇದು ಕಮರ್ಷಿಯಲ್ ಚಿತ್ರವಾದರೂ ಇವತ್ತಿನ ತಲೆಮಾರಿನವರಿಗೆ ಕನೆಕ್ಟ್ ಆಗುವ ಹಲವು ಅಂಶಗಳಿವೆ ಎಂದು ನಿರ್ದೇಶಕ ಚೇತನ್ ಚಂದ್ರಶೇಖರ್ ಶೆಟ್ಟಿ.

ಇದೊಂದು ಕೃಷಿ ಮತ್ತು ರೈತರ ಸಿನಿಮಾ ಎಂದು ಮಾತನಾಡಿದ ನಾಯಕ ಜಯ್ ಶೆಟ್ಟಿ, ತನಗೆ ಆಶ್ರಯ ಕೊಟ್ಟ ಊರಿಗೆ ಏನಾದರೂ ಮಾಡಬೇಕು ಎಂದು ನಾಯಕ ಮುಂದಾಗುತ್ತಾನೆ. ಆ ಹಳ್ಳಿಯ ಪಂಚಾಯ್ತಿ ಅಧ್ಯಕ್ಷನಾಗುತ್ತಾನೆ. ಮುಂದೇನಾಗುತ್ತದೆ ಎಂಬುದು ಚಿತ್ರದ ಕಥೆ. ನಾನು ಹೊಸಬನಾದರೂ ನನ್ನ ಮೇಲೆ ನಂಬಿಕೆ ಇಟ್ಟು, ಚಿತ್ರದಲ್ಲಿ ಅವಕಾಶ ಕೊಟ್ಟ ನಿರ್ಮಾಪಕರು ಮತ್ತು ನಿರ್ದೇಶಕರಿಗೆ ಧನ್ಯವಾದಗಳು ಎಂದರು.

ನಾನು ಬಿಜಾಪುರ ಮೂಲದವಳು. ಆದರೆ, ಬೆಳೆದಿದ್ದು ಮುಂಬೈನಲ್ಲಿ. ಕನ್ನಡದಲ್ಲಿ ನಟಿಸಬೇಕು ಎಂಬ ಆಸೆ ಇತ್ತು. ಒಂಬತ್ತು ವರ್ಷಗಳ ಕಾಲ ಮಾಡಲಿಂಗ್ ಮಾಡಿದ್ದೇನೆ. ಹೀಗಿರುವಾಗಲೇ ಚಿತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತು. ನನ್ನ ಭಾಷೆ ಮತ್ತು ನಟನೆಯನ್ನು ತಿದ್ದಿತೀಡಿದ ನಿರ್ದೇಶಕ ಚೇತನ್ ಶೆಟ್ಟಿ ಅವರಿಗೆ ಧನ್ಯವಾದಗಳು ಎಂದರು ನಾಯಕಿ ನಿಶಾ ರಜಪೂತ್. ಪ್ರಮುಖಪಾತ್ರದಲ್ಲಿ ನಟಿಸಿರುವ ಅಶೋಕ್ ಕುಮಾರ್ ಹಾಗೂ ಮಧುರಗೌಡ ಕೂಡ ತಮ್ಮ ಪಾತ್ರದ ಕುರಿತು ಮಾತನಾಡಿದರು.

ಚಿತ್ರದಲ್ಲಿ ನಟಿಸಿರುವ ರಾಜೇಂದ್ರ, ಕಾರಂತ್, ಅಶ್ವಿನ್ ಹಾಸನ್, ವಿಕ್ಟರಿ ವಾಸು, ಛಾಯಾಗ್ರಾಹಕ ರಾಜು ಹೆಮ್ಮಿಗೆಪುರ, ಕಾರ್ಯಕಾರಿ ನಿರ್ಮಾಪಕ ದಿನೇಶ್ ರಾಜನ್ ಸೇರಿದಂತೆ ಹಲವರು ಈ ಸಮಾರಂಭದಲ್ಲಿ ಹಾಜರಿದ್ದರು. ನಿರ್ಮಾಪಕಿ ಪ್ರತಿಭಾ ಚಿತ್ರತಂಡಕ್ಕೆ ಧನ್ಯವಾದ ತಿಳಿಸಿದರು.

## ‘ಬಿಂಗೊ’ ಚಿತ್ರಕ್ಕೆ ಡಬ್ಬಿಂಗ್ ಮುಕ್ತಾಯ



ಶಂಭೋ ಶಿವ ಶಂಕರ ಚಿತ್ರ ನಿರ್ದೇಶಿಸಿದ್ದ ಶಂಕರ್ ಕೋನಮಾನಹಳ್ಳಿ ನಿರ್ದೇಶನದಲ್ಲಿ, ಆರ್ ಕೆ ಚಂದನ್ ಹಾಗೂ ರಾಗಿಣಿ ದ್ವಿವೇದಿ ನಾಯಕ ? ನಾಯಕಿಯಾಗಿ ನಟಿಸಿರುವ ‘ಬಿಂಗೊ’ ಚಿತ್ರದ ಡಬ್ಬಿಂಗ್ ಸಾಧುಕೋಕಿಲ ಅವರ ಲೂಪ್ ಸ್ಟುಡಿಯೋದಲ್ಲಿ ಮುಕ್ತಾಯವಾಗಿದೆ. ಪೋಸ್ಟ್ ಪ್ರೊಡಕ್ಷನ್ ವರ್ಕ್ ಬಿರುಸಿನಿಂದ ಸಾಗಿದೆ. ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಈ ಚಿತ್ರಕ್ಕೆ ಬೆಂಗಳೂರಿನಲ್ಲೇ ಚಿತ್ರೀಕರಣ ನಡೆದಿದೆ. ಮೇ 24 ರಂದು ನಟಿ ರಾಗಿಣಿ ಅವರ ಹುಟ್ಟುಹಬ್ಬ. ಈ ಸಂದರ್ಭದಲ್ಲಿ ಬಿಂಗೊ ಚಿತ್ರತಂಡ ರಾಗಿಣಿ ಅವರಿಗೆ ಶುಭಾಶಯ ತಿಳಿಸಿದೆ.

ಆರ್.ಕೆ ಸ್ಟುಡಿಯೋಸ್ ಮತ್ತು ಮುತರಾ ವೆಂಚರ್ಸ್ ಲಾಂಛನದಲ್ಲಿ ಲಲಿತಾಸ್ವಾಮಿ ಮತ್ತು ಆರ್ ಪರಾಂಕುಶ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ರಾಗಿಣಿ ದ್ವಿವೇದಿ, ಆರ್ ಕೆ ಚಂದನ್, ರಾಜೇಶ್ ನಟರಂಗ, ಪವನ್(ಮಜಾ ಟಾಕೀಸ್), ಮುರಳಿ ಪೂರ್ವಿಕ್, ಅಪೂರ್ವ, ಶ್ರವಣ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಹಿತನ್ ಹಾಸನ್ ಸಂಗೀತ ನೀಡಿರುವ ಮೂರು ಹಾಡುಗಳು ಈ ಚಿತ್ರದಲ್ಲಿದೆ. ಸದ್ಯದಲ್ಲೇ ಹಾಡುಗಳು ಹಾಗೂ ಟೀಸರ್ ಬಿಡುಗಡೆಯಾಗಲಿದೆ ಎಂದು ನಿರ್ದೇಶಕರು ತಿಳಿಸಿದ್ದಾರೆ. ನಟರಾಜ್ ಮುದ್ದಾಲ್ ಅವರ ಛಾಯಾಗ್ರಹಣವಿರುವ ಈ ಚಿತ್ರದಲ್ಲಿ ಮೈನವಿರೇಳಿಸುವ ಸಾಹಸ ಸನ್ನಿವೇಶಗಳಿದ್ದು, ನರಸಿಂಹ ಸಾಹಸ ನಿರ್ದೇಶನ ಮಾಡಿದ್ದಾರೆ. ಕಂಬಿ ರಾಜು ಅವರ ನೃತ್ಯ ನಿರ್ದೇಶನ ಹಾಗೂ ವೆಂಕಿ ಣಜತ ಸಂಕಲನ ‘‘ಬಿಂಗೊ’’ ಚಿತ್ರಕ್ಕಿದೆ.

## ಶಶಿಕುಮಾರ್ ಪುತ್ರನ ‘ಕಾದಾಡಿ’ ಸಿನಿಮಾದ ಲಿರಿಕಲ್ ಸಾಂಗ್ ರಿಲೀಸ್

ಸುಪ್ರೀಂ ಹೀರೋ ಶಶಿಕುಮಾರ್ ಪುತ್ರ ಅಕ್ಷಿತ್ ಶಶಿಕುಮಾರ್ ಈಗ ಆದಿತ್ಯ ಶಶಿಕುಮಾರ್ ಅಂತ ಹೆಸರು ಬದಲಾಯಿಸಿಕೊಂಡಿದ್ದು, 'ಕಾದಾಡಿ' ಎನ್ನುವ ಚಿತ್ರದಲ್ಲಿ ನಟಿಸಿದ್ದಾರೆ. ಕನ್ನಡ, ತೆಲುಗು,ಹಿಂದಿ ಮತ್ತು ತಮಿಳು ಭಾಷೆಯಲ್ಲಿ ಸಿದ್ದಗೊಂಡಿರುವ ಸಿನಿಮಾವನ್ನು ಸತೀಶ್ ಮಾಲೆಂಪಾಟಿ ನಿರ್ದೇಶಿಸಿ, ಅರುಣಂ ಫಿಲಿಂಸ್ ಮುಖಾಂತರ ನಿರ್ಮಾಣ ಮಾಡಿದ್ದಾರೆ. ಪ್ರಚಾರದ ಸಲುವಾಗಿ ಮೊನ್ನೆಯಷ್ಟೇ ನಾಯಕನ ಪರಿಚಯದ ಎರಡನೇ ಲಿರಿಕಲ್ ವಿಡಿಯೋ ಹಾಡನ್ನು ಬಿಡುಗಡೆ ಮಾಡಲಾಗಿದೆ.



ಎನ್.ಮಾರುತಿ ಸಾಹಿತ್ಯದ 'ಕಲೆಯು ಇರಬೇಕು, ಮನೆಯು ಇರಬೇಕು, ಗುಡಿಯು ಇರಬೇಕು, ಕುಲವುನೂ ಇರಬೇಕು. ಸಹನೆಯು ಇರಬೇಕು, ಸಾಧನೆಯು ಇರಬೇಕು, ಗೆಲುವು ಇರಬೇಕು, ಸೋತರೂ ಗೆಲ್ಲುವ ಛಲವು ಇರಬೇಕು' ಹಾಡಿಗೆ ಶಶಾಂಕ್ ಶೇಷಗಿರಿ ಧ್ವನಿಯಾಗಿದ್ದಾರೆ.

ತ್ಯಾಗಮಯವಾಗುತ್ತಿರುವ ಜನರ ಜೀವನವು ದಿನದ ಅಂತ್ಯದಲ್ಲಿ ಪ್ರತಿಯೊಬ್ಬರು ತ್ಯಾಗಮಯಿರಾಗುತ್ತಾರೆ. ನಾವೆಲ್ಲರೂ ಕಾದಾಡುತ್ತಾ ಒಂದು ದಿನ ಸಾಯುತ್ತೇವೆ. ಆದರೆ ನಮ್ಮ ಜೀವನವನ್ನು ತ್ಯಾಗ ಮಾಡುವ ಮೂಲಕ ಸಮಾಜಕ್ಕೆ ಏನನ್ನಾದರೂ ಕೊಡಬೇಕು. ಮಕ್ಕಳಿಗೆ ಏನಾದರೂ ಆಗಬೇಕು. ನಾವು ದಿನದಿಂದ ದಿನಕ್ಕೆ ಹೋರಾಟ ನಡೆಸುತ್ತಿದ್ದೇವೆ. ಇಂತಹ ಅಂಶಗಳನ್ನು ಥ್ರಿಲ್ಲರ್ ಮೂಲಕ ತೋರಿಸುವ ಪ್ರಯತ್ನ ಮಾಡಲಾಗಿದೆ.

ಲಾವಣ್ಯ ಸಾಹುಕಾರ, ಚಾಂದಿನಿ ತಮಿಳರಸನ್ ನಾಯಕಿಯರು. ಉಳಿದಂತೆ ಪೋಸಾನಿ, ರವಿಕಾಳೆ, ಮಾರಿಮುತ್ತು, ಪ್ರೇಮ್ ಮನೋಹರ್, ಶ್ರವಣ್ ರಾಘವೇಂದ್ರ ಮುಂತಾದವರು ನಟಿಸಿದ್ದಾರೆ. ಆರು ಹಾಡುಗಳಿಗೆ ಭೀಮ್ಸ್ ಸಿಸಿರಿಲಿಯೋ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಡಿ.ಯೋಗಿಪ್ರಸಾದ್, ಕಲೆ ಅರ್ಜುನ್‌ಸೂರಿಸೆಟ್ಟಿ, ಸಂಕಲನ ಪ್ರಕಾಶ್‌ತೋಟ, ನೃತ್ಯ ರಾಜ್‌ಪಿಡಿ–ರಾಜ್‌ಕೃಷ್ಣ, ಸಾಹಸ ಬಿ.ಎಲ್. ಸತೀಶ್–ವಿನ್‌ಚೇನ್‌ಆಂಜಿ–ಬಿಂಬಸಾರ–ರಾಮಕೃಷ್ಣ–ರಾಮಸುಂಕರ ಅವರದಾಗಿದೆ. ಗೋವಾ, ಚಿಕ್ಕಮಗಳೂರು, ಹೈದರಬಾದ್, ಚೆನ್ನೈ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

## ನಿವೃತ್ತಿಯ ಸುಳಿವು ನೀಡಿದ ಮಿಚೆಲ್ ಸ್ಟಾರ್ಕ್..!

ಐಪಿಎಲ್ 2024 ರ ಫೈನಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಏಕಪಕ್ಷೀಯವಾಗಿ ಸೋಲಿಸುವ ಮೂಲಕ ಕೋಲ್ಕತ್ತಾ ನೈಟ್ ರೈಡರ್ಸ್ ಟ್ರೋಫಿಯನ್ನು ಗೆದ್ದುಕೊಂಡಿದೆ. ಗೌತಮ್ ಗಂಭೀರ್ ನೇತೃತ್ವದಲ್ಲಿ ಕೆಕೆಆರ್‌ಗೆ ಇದು ಮೂರನೇ ಟ್ರೋಫಿಯಾಗಿದೆ. ಕೋಲ್ಕತ್ತಾ ಈ ಹಿಂದೆ ಗೌತಮ್ ಗಂಭೀರ್ ನಾಯಕತ್ವದಲ್ಲಿ ಐಪಿಎಲ್ 2012 ಮತ್ತು ಐಪಿಎಲ್ 2014 ರಲ್ಲಿ ಟ್ರೋಫಿ ಗೆದ್ದಿತ್ತು.

ಒಂದೆಡೆ ಕೆಕೆಆರ್ ತಂಡದ ಆಟಗಾರರು ಟ್ರೋಫಿ ಗೆಲುವಿನ ಸಂಭ್ರಮದಲ್ಲಿದ್ದರೆ, ಇನ್ನೊಂದೆಡೆ ತಂಡದ ಅನುಭವಿ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ನಿವೃತ್ತಿಯ ಸುಳಿವು ನೀಡಿ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದಾರೆ. ಇದು ಕೆಕೆಆರ್ ತಂಡಕ್ಕೆ ಮಾತ್ರವಲ್ಲದೆ, ಅವರ ತವರು ತಂಡವಾದ ಆಸ್ಟ್ರೇಲಿಯಾಕ್ಕೂ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ವಾಸ್ತವವಾಗಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಈ ಬಾರಿಯ ಚಾಂಪಿಯನ್ ಆಗುವಲ್ಲಿ ತಂಡದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ದೊಡ್ಡ ಕೊಡುಗೆ ನೀಡಿದ್ದಾರೆ. ಅದರಲ್ಲೂ ಫೈನಲ್ ಪಂದ್ಯದಲ್ಲಿ



ತಮ್ಮ ಅನುಭವವನ್ನು ಧಾರೆ ಎರೆದಿದ್ದ ಸ್ಟಾರ್ಕ್ 3 ಓವರ್‌ಗಳಲ್ಲಿ ಕೇವಲ 14 ರನ್‌ಗಳಿಗೆ 2 ವಿಕೆಟ್ ಪಡೆದಿದ್ದರು.

ಕೆಕೆಆರ್ ತಂಡ ಚಾಂಪಿಯನ್ ಆದ ನಂತರ ಮಾತನಾಡಿದ ಮಿಚೆಲ್ ಸ್ಟಾರ್ಕ್, ‘ನಾನು ನನ್ನ ವೃತ್ತಿಜೀವನದ ಅಂತ್ಯದ ಸಮೀಪದಲ್ಲಿದ್ದೇನೆ. ನಾನು ಶೀಘ್ರದಲ್ಲೇ ಒಂದು ಸ್ವರೂಪದಿಂದ ನಿವೃತ್ತಿ ಹೊಂದಬಹುದು. ಇನ್ನು ಐಪಿಎಲ್ ಆಡುವುದನ್ನು ನಾನು ತುಂಬಾ ಎಂಜಾಯ್ ಮಾಡಿದ್ದೇನೆ ಎಂದರು.

ಮುಂದುವರೆದು ಮಾತನಾಡಿದ ಅವರು, ‘ಕೋಲ್ಕತ್ತಾ ಮತ್ತೆ ನನ್ನನ್ನು ತಂಡದಲ್ಲಿ ಉಳಿಸಿಕೊಂಡರೆ, ನನಗೆ ತುಂಬಾ ಸಂತೋಷವಾಗುತ್ತದೆ. ನಾನು ಮತ್ತೆ ಕೋಲ್ಕತ್ತಾ ಪರ ಆಡಲು ಬಯಸುತ್ತೇನೆ. ಕೆಕೆಆರ್ ಜೊತೆ ಆಡಲು ತುಂಬಾ ಉತ್ಸುಕನಾಗಿದ್ದೇನೆ ಎಂದಿದ್ದಾರೆ.

ಈ ಐಪಿಎಲ್‌ನಲ್ಲಿ ಸ್ಟಾರ್ಕ್ ಒಟ್ಟು 14 ಪಂದ್ಯಗಳನ್ನು ಆಡಿದ್ದು, ಅದರಲ್ಲಿ 26.12 ರ ಸರಾಸರಿಯಲ್ಲಿ 17 ವಿಕೆಟ್‌ಗಳನ್ನು ಪಡೆದಿದ್ದಾರೆ. ಈ ಅವಧಿಯಲ್ಲಿ 33 ರನ್‌ಗಳಿಗೆ 4 ವಿಕೆಟ್ ಕಬಳಿಸಿದ್ದು ಅವರ ಅತ್ಯುತ್ತಮ ಸಾಧನೆಯಾಗಿದೆ.

### ‘ಆರೆಂಜ್ ಕ್ಯಾಪ್‌ನಿಂದ ಟ್ರೋಫಿ ಗೆಲ್ಲಲಾಗುವುದಿಲ್ಲ’

## ಕೊಹ್ಲಿ ಕಾಲೆಳೆದ ಅಂಬಟಿ ರಾಯುಡು..!

17ನೇ ಆವೃತ್ತಿಯ ಐಪಿಎಲ್ ಕೊನೆಗೊಂಡಿದೆ. ಶ್ರೇಯಸ್ ಅಯ್ಯರ್ ನೇತೃತ್ವದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಐಪಿಎಲ್ 2024 ರ ಫೈನಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸೋಲಿಸುವ ಮೂಲಕ ಟ್ರೋಫಿ ಗೆದ್ದಿದೆ. ಆದರೆ ಈ ಬಾರಿಯಾದರೂ ಕಪ್ ಜಯಿಸಬೇಕೆಂಬ ಆರ್‌ಸಿಬಿಯ 17 ವರ್ಷಗಳ ಕನಸು ಈ ಆವೃತ್ತಿಯಲ್ಲೂ ನನಸಾಗಲಿಲ್ಲ. ತಂಡ ಪ್ಲೇಆಫ್ ಸುತ್ತಿನಲ್ಲೇ ತನ್ನ ಪ್ರಯಾಣ ಮುಗಿಸಿತು. ಅದಾಗ್ಯೂ ಈ ಆವೃತ್ತಿಯಲ್ಲಿ ಆರ್‌ಸಿಬಿ ಪರ ಮಾಜಿ ನಾಯಕ ವಿರಾಟ್ ಕೊಹ್ಲಿ ಅಮೋಘ ಪ್ರದರ್ಶನ ನೀಡಿದರು. ಪ್ರತಿ ಪಂದ್ಯದಲ್ಲೂ ಬ್ಯಾಟ್‌ನಿಂದ ಕೊಡುಗೆ ನೀಡಿದ ಕೊಹ್ಲಿ, ಇಡೀ ಟೂರ್ನಿಯಲ್ಲಿ ಅಧಿಕ ರನ್ ಕಲೆಹಾಕಿದ ಬ್ಯಾಟರ್ ಎನಿಸಿಕೊಂಡರು. ಈ ಸಾಧನೆಗಾಗಿ ವಿರಾಟ್ ಆರೆಂಜ್ ಕ್ಯಾಪ್ ಅನ್ನು ತನ್ನದಾಗಿಸಿಕೊಂಡರು. ಆದರೆ ಕೊಹ್ಲಿಯ ಈ ಸಾಧನೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಾಜಿ ಆಟಗಾರ ಅಂಬಟಿ ರಾಯುಡು ಅವರ ಕಣ್ಣುಕ್ಕಿದೆ. ಹೀಗಾಗಿ ಕೊಹ್ಲಿ ಆರೆಂಜ್ ಕ್ಯಾಪ್ ಗೆದ್ದಿರುವ ವಿಚಾರವನ್ನು ಪ್ರಸ್ತಾಪಿಸಿ ರಾಯುಡು ಮತ್ತೊಮ್ಮೆ ಕೊಹ್ಲಿಯ ಕಾಲೆಳೆಯುವ ಪ್ರಯತ್ನ ಮಾಡಿದ್ದಾರೆ.

**ಆರೆಂಜ್ ಕ್ಯಾಪ್ ಬಗ್ಗೆ ರಾಯುಡು ಹೇಳಿದ್ದೇನು?:** ಈ ಆವೃತ್ತಿಯಲ್ಲಿ ಬರೋಬ್ಬರಿ 741 ರನ್ ಬಾರಿಸುವ ಮೂಲಕ ವಿರಾಟ್ ಕೊಹ್ಲಿ ಅತ್ಯಧಿಕ ರನ್ ಬಾರಿಸಿದ



ಆಟಗಾರ ಎನಿಸಿಕೊಂಡಿದ್ದಾರೆ. ಹೀಗಾಗಿ ಕಿಂಗ್ ಕೊಹ್ಲಿಗೆ ಆರೆಂಜ್ ಕ್ಯಾಪ್ ನೀಡಲಾಗಿದೆ. ಈ ಬಗ್ಗೆ ಚೆನ್ನೈನ ಮಾಜಿ ಆಟಗಾರ ಅಂಬಟಿ ರಾಯುಡು ವ್ಯಂಗ್ಯವಾಡಿದ್ದು, ಮತ್ತೊಮ್ಮೆ ಕೊಹ್ಲಿಯನ್ನು ತೆಗಳುವ ಕೆಲಸ ಮಾಡಿದ್ದಾರೆ. ಕೊಹ್ಲಿ ಆರೆಂಜ್ ಕ್ಯಾಪ್ ಪಡೆದ ಬಗ್ಗೆ ಕಾಮೆಂಟ್ ಮಾಡಿರುವ ರಾಯುಡು, ‘ಆರೆಂಜ್ ಕ್ಯಾಪ್‌ನಿಂದ ಐಪಿಎಲ್ ಟ್ರೋಫಿಯನ್ನು ಗೆಲ್ಲಲಾಗುವುದಿಲ್ಲ. ಟ್ರೋಫಿ ಗೆಲ್ಲಲು ತಂಡದ ಸಹಕಾರ ಅಗತ್ಯ. ಮಿಚೆಲ್ ಸ್ಟಾರ್ಕ್, ಆಂಡ್ರೆ ರಸೆಲ್, ಸುನಿಲ್ ನರೈನ್ ಅವರ ಕೊಡುಗೆಯನ್ನು ನಾವು ಕೋಲ್ಕತ್ತಾ ತಂಡದಲ್ಲೂ ನೋಡಬಹುದು. ಹೀಗಾಗಿ ಕೆಕೆಆರ್ ಟ್ರೋಫಿ ಗೆಲ್ಲಲು ಸಾಧ್ಯವಾಯಿತು. ಟ್ರೋಫಿ ಗೆಲ್ಲಲು, ಎಲ್ಲಾ ಆಟಗಾರರು ಸ್ವಲ್ಪ ಕೊಡುಗೆ ನೀಡಬೇಕು. ಆರೆಂಜ್ ಕ್ಯಾಪ್ ಗೆದ್ದ ಆಟಗಾರ ಟ್ರೋಫಿ ಗೆಲ್ಲುವುದಿಲ್ಲ ಎಂದು ರಾಯುಡು ಕೊಹ್ಲಿ ವಿರುದ್ಧ ಮತ್ತೊಮ್ಮೆ ಕುಹಕದ ಮಾತುಗಳನ್ನಾಡಿದ್ದಾರೆ.

**ಆರ್‌ಸಿಬಿ ತಂಡವನ್ನು ಲೇವಡಿ ಮಾಡಿದ್ದ ರಾಯುಡು:** ವಾಸ್ತವವಾಗಿ ಅಂಬಟಿ ರಾಯುಡು, ಕೊಹ್ಲಿ ಅಥವಾ ಆರ್‌ಸಿಬಿ ತಂಡದ ವಿರುದ್ಧ ಕಿಡಿಕಾರುತ್ತಿರುವುದು ಇದೇ ಮೊದಲಲ್ಲ. ಇದಕ್ಕೂ ಮೊದಲು, ಪ್ಲೇಆಫ್ ಸುತ್ತಿನ ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ ವಿರುದ್ಧ ಆರ್‌ಸಿಬಿ ಸೋತಾಗಲೂ ರಾಯುಡು ಆರ್‌ಸಿಬಿಯ ಆಟಗಾರರು ಮತ್ತು ಫ್ರಾಂಚೈಸಿಯನ್ನು ಟೀಕಿಸಿದ್ದರು. ಆ ವೇಳೆ ರಾಯುಡು, ‘ಆರ್‌ಸಿಬಿಯಲ್ಲಿ ತಂಡದ ಗೆಲುವಿಗಿಂತ ತಮ್ಮ ವೈಯಕ್ತಿಕ ಮೈಲಿಗಲ್ಲುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಆಟಗಾರರಿದ್ದಾರೆ. ತಂಡದಲ್ಲಿ ಶ್ರೇಷ್ಠ ಆಟಗಾರರಿದ್ದಾರೆ. ಆದರೆ ಇನ್ನೂ ಕೂಡ ಆರ್ಸಿಬಿ ಒಂದೇ ಒಂದು ಟ್ರೋಫಿಯನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಏಕೆಂದರೆ ಬೆಂಗಳೂರಿನ ಆಟಗಾರರು ವೈಯಕ್ತಿಕ ಗುರಿಗಳ ಮೇಲೆ ಹೆಚ್ಚು ಗಮನ ಹರಿಸುತ್ತಾರೆ. ತಮ್ಮ ದಾಖಲೆಗಳಿಗಿಂತ ತಂಡಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಇಂತಹ ಆಟಗಾರರನ್ನು ಫ್ರಾಂಚೈಸಿ ತಂಡದಲ್ಲಿ ಸೇರಿಸಿಕೊಳ್ಳಬೇಕು’ ಎಂದು ರಾಯುಡು ಹೇಳಿಕೆ ನೀಡಿದ್ದರು. ಇಲ್ಲೂ ವಿರಾಟ್ ಕೊಹ್ಲಿಯೇ ರಾಯುಡು ಅವರ ಟಾರ್ಗೆಟ್ ಎಂಬುದು ಇದರಿಂದ ಸ್ಪಷ್ಟವಾಗಿತ್ತು.

### ಮೇಲ್ಮನೆಯಲ್ಲಿ ಹಿಡಿತ ಸಾಧಿಸಲು ಬಿಜೆಪಿ ಕಾಂಗ್ರೆಸ್ ರಣತಂತ್ರ

## 7 ಸ್ಥಾನಕ್ಕೆ 100 ಆಕಾಂಕ್ಷಿಗಳ ಕ್ಯೂ!

**ಬೆಂಗಳೂರು:** ರಾಜ್ಯದಲ್ಲಿ ಲೋಕಸಭೆ ಚುನಾವಣೆ ಮುಗಿದಿದ್ದು, ಜೂನ್ 4ಕ್ಕೆ ಫಲಿತಾಂಶ ಬರಲಿದೆ. ಇದರ ಮಧ್ಯೆ ಜೂನ್ 3 ಮತ್ತು ಜೂನ್ 13 ರಂದು ಪರಿಷತ್ ಚುನಾವಣೆ ನಡೆಯಲಿದ್ದು, ಮೂರು ಪಕ್ಷಗಳಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಮೇಲ್ಮನೆಯಲ್ಲಿ ಹಿಡಿತ ಸಾಧಿಸಲು ಬಿಜೆಪಿ–ಜೆಡಿಎಸ್ ಒಂದೆಡೆ ರಣತಂತ್ರ ರೂಪಿಸುತ್ತಿದ್ದರೆ, ಮತ್ತೊಂದೆಡೆ ಕಾಂಗ್ರೆಸ್ ಕೂಡಾ ಕಸರತ್ತು ಮಾಡುತ್ತಿದೆ. ಆದರೆ, ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯೇ ಕಾಂಗ್ರೆಸ್‌ಗೆ ತಲೆಬಿಸಿಯಾಗಿದೆ.



**ದೆಹಲಿಗೆ 100 ಪರಿಷತ್ ಆಕಾಂಕ್ಷಿಗಳ ಲಿಸ್ಟ್:** ಮೇಲ್ಮನೆಯ11 ಸ್ಥಾನಗಳಿಗೆ ಜೂನ್13 ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಜೂನ್ 3 ಕೊನೆಯ ದಿನಾಂಕವಾಗಿದೆ. ಇದರಲ್ಲಿ 7 ಸ್ಥಾನ ಗೆಲ್ಲ ಕಾಂಗ್ರೆಸ್‌ಗೆ ಅವಕಾಶವಿದೆ. ಆದರೆ, ಈ ಏಳು ಸ್ಥಾನಕ್ಕೆ 100 ಕ್ಕೂ ಹೆಚ್ಚು ಆಕಾಂಕ್ಷಿಗಳು ಟವೆಲ್ ಹಾಕಿದ್ದಾರೆ. ಹೀಗಾಗಿ ಮೇ, 28 ಮತ್ತು 29ರಂದು ದೆಹಲಿಗೆ ತೆರಳಲು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಸಜ್ಜಾಗಿದ್ದು, ದೆಹಲಿಯಲ್ಲೇ ಅಭ್ಯರ್ಥಿಗಳ ಹೆಸರು ಫೈನಲ್ ಆಗುವ ಸಾಧ್ಯತೆ ಇದೆ. ಹೀಗಾಗಿ ಆಕಾಂಕ್ಷಿಗಳ ದಂಡೇ ಡಿಕೆ ಶಿವಕುಮಾರ್ ಮನೆಗೆ ಭೇಟಿ ನೀಡುತ್ತಿದ್ದು, ಲಾಬಿ ಮುಂದುವರೆಸಿದ್ದಾರೆ. ಭಾನುವಾರ ಡಿಸಿಎಂ ಭೇಟಿ ಮಾಡಿದ್ದ ಸಚಿವ ರಾಮಲಿಂಗಾರೆಡ್ಡಿ, ಬೆಂಗಳೂರಿನ ಇಬ್ಬರಿಗೆ ಟಿಕೆಟ್ ನೀಡುವಂತೆ ಮನವಿ ಮಾಡಿದ್ದಾರೆ.

**ವಿಧಾನಪರಿಷತ್ ಗೆಲ್ಲಲು ಜೆಡಿಎಸ್–ಬಿಜೆಪಿ ರಣತಂತ್ರ:** ಇತ್ತ ವಿಧಾನ ಪರಿಷತ್ ಚುನಾವಣೆ ಗೆಲ್ಲಲು ದೋಸ್ತಿ ನಾಯಕರು ಭಾನುವಾರ ಮೊದಲ ಸಮನ್ವಯ ಸಭೆ ನಡೆಸಿದ್ದಾರೆ. ಸಭೆಯಲ್ಲಿ ಜೂನ್ 3ರಂದು ನಡೆಯೋ ಶಿಕ್ಷಕ, ಮತ್ತು ಪದವೀಧರ ಕ್ಷೇತ್ರಗಳನ್ನು ಗೆಲ್ಲಲು ರಣತಂತ್ರ ರೂಪಿಸಲಾಯಿತು. ಮಾಜಿ ಸಿಎಂ ಹೆಚ್‌ಡಿ ಕುಮಾರಸ್ವಾಮಿ, ವಿಪಕ್ಷ ನಾಯಕ ಆರ್ ಅಶೋಕ್, ಶಾಸಕ ಅಶ್ವತ್ಥ ನಾರಾಯಣ ಸೇರಿದಂತೆ ಹಲವು ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು. ಸಭೆಯಲ್ಲಿ ಮೈತ್ರಿ ಅಭ್ಯರ್ಥಿ ಗೆಲುವಿಗೆ ವಾಗ್ದಾನ ಮಾಡೋದರ ಜೊತೆಗೆ ಕಾಂಗ್ರೆಸ್ ವಿರುದ್ಧವೂ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿಯಲ್ಲೂ ಮೂರು ಸ್ಥಾನಕ್ಕೆ 40 ಆಕಾಂಕ್ಷಿಗಳು ಲಾಬಿ ಮಾಡ್ತಿದ್ದಾರೆ. ಈ ಲಾಬಿಯ ಮಧ್ಯೆ ಅತ್ತ ಮೈಸೂರಲ್ಲೂ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಸಭೆ ನಡೆಸಿದ್ದಾರೆ. ಎನ್‌ಡಿಎ ಅಭ್ಯರ್ಥಿ ವಿವೇಕಾನಂದರನ್ನು ಗೆಲ್ಲಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಎಲ್ಲಾ 6 ಕ್ಷೇತ್ರಗಳನ್ನು ಗೆಲ್ಲಲು ನಾವು ತಯಾರಿ ಮಾಡಿಕೊಂಡಿದ್ದೇವೆ ಎಂದು ವಿಜಯೇಂದ್ರ ಹೇಳಿದ್ದಾರೆ.

**ರಾಜ್ಯಸಭೆಯಲ್ಲಿ ಅಡ್ಡಮತದಾನ ಮಾಡಿದವರ ವಿರುದ್ಧ ಕ್ರಮವೇನು?:** ಪರಿಷತ್ ನೈಋತ್ಯ ಪದವೀಧರ ಕ್ಷೇತ್ರದಿಂದ ಟಿಕೆಟ್ ಮಿಸ್ ಆಗಿದ್ದಕ್ಕೆ ಮಾಜಿ ಶಾಸಕ ರಘುಪತಿ ಭಟ್ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ. ಹೀಗಾಗಿ ಪಕ್ಷ ರಘುಪತಿ ಭಟ್‌ರನ್ನ ಮುಂದಿನ 6 ವರ್ಷಕ್ಕೆ ವಜಾಗೊಳಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ರಘುಪತಿ ಭಟ್, ಕಾರ್ಯಕರ್ತನನ್ನ ಪಕ್ಷದಿಂದ ವಜಾ ಮಾಡಲು ಆಗಲ್ಲ. ನನಗೆ ಯಾವ ಹುದ್ದೆಯಿಂದ ವಜಾ ಮಾಡಿದ್ದೀರಾ ಹೇಳಿ ಎಂದು ಪ್ರಶ್ನಿಸಿದ್ದಾರೆ.

## ಈ ದೇಶವನ್ನು ಹಿಂದೂ ರಾಷ್ಟ್ರ ಮಾಡಲು ಸಾಧ್ಯವೇ ಇಲ್ಲ

**ಬೆಂಗಳೂರು:** ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸೋಲಾಗಲಿದೆ ಎಂಬುದು ಪ್ರಧಾನಿ ನರೇಂದ್ರ ಮೋದಿಗೆ ಖಾತರಿಯಾಗಿದೆ. ಹೀಗಾಗಿ ಏನೇನೋ ಮಾತನಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದರು.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ನಡೆದ ನೆಹರು ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ ಮಾಡಲು ದೇವರೇ ಕಳುಹಿಸಿದ್ದಾನೆ. 2047ರ ತನಕ ಸೇವೆ ಮಾಡಲು ದೇವರು ಕಳುಹಿಸಿದ್ದಾನೆ ಎಂದು ಮೋದಿ ಹೇಳುತ್ತಾರೆ. ಮತಕ್ಕಾಗಿ ಹಿಂದೂ, ಮುಸ್ಲಿಮರನ್ನು ವಿಭಜಿಸಿ ಮಾತನಾಡುತ್ತಾರೆ. ಚುನಾವಣಾ ಭಾಷಣಗಳಲ್ಲಿ ಮುಸ್ಲಿಮರ ವಿರುದ್ಧ ಮಾತನಾಡುತ್ತಾರೆ. ಅವರಿಗೆ ಬಹುತ್ವದಲ್ಲಿ ನಂಬಿಕೆಯೇ ಇಲ್ಲ ಎಂದು ಟೀಕಿಸಿದರು.

**ಹಿಂದೂ ರಾಷ್ಟ್ರ ಕನಸಿನ ಮಾತು:** ಮೋದಿ ಹಿಂದೂ ರಾಷ್ಟ್ರ ಮಾಡುತ್ತೇವೆ ಎನ್ನುತ್ತಾರೆ. ಇದು ಕನಸಿನ ಮಾತು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಲಿದೆ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ಸೋಲಿನ ಭೀತಿಯಿಂದ ಮೋದಿ ಏನೇನೋ ಮಾತನಾಡುತ್ತಿದ್ದಾರೆ. ಬಾಯಿಗೆ ಬಂದಂತೆ



ಮಾತನಾಡುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು 60ನೇ ಪುಣ್ಯತಿಥಿ ಅಂಗವಾಗಿ ಕೆಪಿಸಿಸಿ ಕಚೇರಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದಕ್ಕೂ ಮುನ್ನ ಸಿದ್ದರಾಮಯ್ಯ ವಿಧಾನಸೌಧ ಆವರಣದಲ್ಲಿ ಪಂಡಿತ್ ನೆಹರೂ ಅವರ ಭಾವಚಿತ್ರಕ್ಕೆ ಹೂಮಾಲೆ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದ್ದರು.

**ಏನು ಹೇಳಿದ್ದರು ಮೋದಿ?:** ಸುದ್ದಿವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದ ಪ್ರಧಾನಿ ಮೋದಿ, ದೇವರು ನನ್ನನ್ನು ಒಂದು ಉದ್ದೇಶಕ್ಕಾಗಿ ಇಲ್ಲಿಗೆ ಕಳುಹಿಸಿದ್ದಾನೆ ಎಂಬುದು ನನಗೆ ಮನವರಿಕೆಯಾಗಿದೆ. ಆ ಉದ್ದೇಶವನ್ನು ಸಾಧಿಸಿದ ನಂತರ, ನನ್ನ ಕೆಲಸ ಒಂದೇ ಆಗಿರುತ್ತದೆ. ಅದಕ್ಕಾಗಿಯೇ ನಾನು ನನ್ನನ್ನು ಸಂಪೂರ್ಣವಾಗಿ ದೇವರಿಗೆ ಅರ್ಪಿಸಿಕೊಂಡಿದ್ದೇನೆ. ದೇವರು ನನಗೆ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸಾಮರ್ಥ್ಯ, ಸ್ಫೂರ್ತಿ ಮತ್ತು ಶಕ್ತಿ ನೀಡಿದ್ದಾನೆ ಎಂದು ಭಾವಿಸುತ್ತೇನೆ ಎಂದು ಹೇಳಿದ್ದರು.

ತಮ್ಮ ಲೋಕಸಭಾ ಕ್ಷೇತ್ರವಾದ ವಾರಣಾಸಿಗೆ ಈ ತಿಂಗಳ ಆರಂಭದಲ್ಲಿ ಭೇಟಿ ನೀಡಿದ್ದ ಮೋದಿ, ದೂರದರ್ಶನಕ್ಕೆ ನೀಡಿದ್ದ ಸಂದರ್ಶನದಲ್ಲಿಯೂ ದೇವರ ಬಗ್ಗೆ ಪ್ರಸ್ತಾಪಿಸಿದ್ದರು. ನನ್ನ ತಾಯಿ ಜೀವಂತವಾಗಿದ್ದಾಗ, ನಾನು ಜೈವಿಕವಾಗಿ ಹುಟ್ಟಿದ್ದೇನೆ ಎಂದಷ್ಟೇ ನಾನು ಭಾವಿಸಿದ್ದೆ. ಅವರು ತೀರಿಕೊಂಡ ನಂತರದಲ್ಲಿ ದೇವರು ನನ್ನನ್ನು ಕಳುಹಿಸಿದ್ದಾನೆ ಎಂಬುದು ನನಗೆ ಮನವರಿಕೆಯಾಯಿತು ಎಂದು ಹೇಳಿದ್ದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com